would request and earnestly appeal for the special indulgence of the Hon'ble Members. I think these are all the points that were raised by Hon'ble Members and I hope they have now got a more or less clear idea of the programme that is before us.

Janab J. MAHOMED IMAM.—There is still one doubt. According to the rules we are expected to send cut motions three days before a demand is actually taken up for consideration. I do not think we can satisfy that rule because the Budget Estimates will be presented on the 21st and on the very same day we have to send cut motions. There may not be sufficient time to study the Budget. So I think it is necessary to give one day's interval and we need three clear days to send in cut motions. Otherwise, they would not be admissible.

ಅಧ್ಯಕ್ಷರು.—Waive ಮಾಡುವುದಕ್ಕೆ ಸಾಧ್ಯವಿದ್ದರೆ ಒಂದು ದಿವಸ ಮಾಡೋಣ.

Janab J. MAHOMED IMAM.—Otherwise, all the cut motions will become inadmissible.

Sri K. CHENGALARAYA REDDY.—I may also indicate that two days will be set apart for Legislative Business and two days are proposed to be allotted for non-official business, *viz.*, General Resolutions.

Sri T. RAMACHAR.—Rule 51 (2) says :—

"No discussion on the Budget shall take place on the day on which it is presented.................................."

ಅಧ್ಯಕ್ಷರು.—ಕಾರ್ಯಕ್ರಮದ ವಿಷಯದಲ್ಲಿ ಸಭಾನಾಯಕರು ಲೆಜಿಸ್ಲೇಚರ್ ಆಫೀಸಿನವರು ಕೊಡಬೇಕೆಂದು ಹೇಳಿದಹಾಗೆ ನನಗೆ ತೋರಿತು. ಖಾಯಂ ಹುಕ್ಕುಮಿನ 6 (1)ನೇ ಪ್ರಕರಣದಲ್ಲಿ "At times when Government Business has precedence, His Highness the Maharaja may arrange that business in such order as he thinks fit" ಎಂಬುದಾಗಿ ಇದೆ. ಆದ್ದರಿಂದ ಸರ್ಕಾರದವರು ನಮಗೆ ಅದನ್ನು ತಿಳಿಸಬೇಕು. ಈಗ ಮೂರು ದಿನದ್ದು ಮಾತ್ರ ಬಂದಿದೆ. ಅದನ್ನು ಕೊಟ್ಟಿದ್ದೇವೆ. ಉಳಿದ ಪೂರ್ತಿಯಾದ ಕಾರ್ಯಕ್ರಮ ನಮಗೆ ಬಂದಿಲ್ಲ.

Sri K. CHENGALARAYA REDDY.—I think I have made myself pretty clear about the programme that had been decided upon. One change I have indicated namely, instead of presenting the Budget Estimates on the 18th they will be presented on the 21st.

Mr. SPEAKER.—The programme has not been sent to the Legislature Office.

Sri K. CHENGALARAYA REDDY.—I do not know about it. I will have it checked. I thought the matter had been decided and I will find out if that has been conveyed to the Legislature Office. The only change is that instead of presenting the Budget Estimates on the 18th as was proposed, they will be presented on the 21st. The rest of the programme I thought had been concluded and duly conveyed to the Legislature Office. I stand corrected by the Chair in this behalf. The entire programme will be placed in the hands of the Hon'ble Members in the course of today or tomorrow.

RAJPRAMUKH'S SPEECH.

Debate on the Address.

Mr. SPEAKER (Sri V. Venkatappa).—Sri T. Subramanya will now move his motion.

Sri T. SUBRAMANYA (Tumkur District—General.)—Mr. Speaker, Sir, I beg leave of the House to move the following :—

"That an Address be presented to His Highness the Maharaja in the following terms:

'May it please Your Highness:

We, the members of the Mysore Legislative Assembly assembled in this Session, beg leave to thank Your Highness for the Address delivered to the Assembly'."

Sir, this is a new procedure that we have been following after the inauguration of the new Constitution. Under article 176 of the new Constitution of India the Constitutional Head of a State will address the Legislative Assembly with regard to matters that will be taken up during the session, and on the matters referred to in the Address given by the Head of the State the Hon'ble Members of the House will have a right to discuss and vote upon also I suppose. So in pursuance of that article the Rajpramukh of the State, His Highness the Maharaja, addressed us yesterday and this is a resolution by which we want to convey to His Highness the Maharaja our thanks for the trouble he took and for intimating to us the policy of the Government and the matters that will be taken up by

this House during this session. It is not a formal affair at all. It indicates the lines along which the present Government intends to work during the period from now till the next session, whenever it may meet and also it reviews the work done by the Government during their term of office.

The first important point over which we have to congratulate the Government and congratulate ourselves is that Mysore has played no little part in consolidating all the different units in this country and make them into one consolidated big unit, so that at no future date the safety and security of the country may be endangered. We have to become one from Himalayas down to Cape Comorin. There is one Constitution, one kind of fundamental rights, and more rights and privileges are enjoyed by every citizen of the State wherever he may live. Therefore, His Highness has referred to that aspect of the case in his address and we have to congratulate ourselves that we have played—though a very humble part—a very significant part in achieving the unity of this country.

The next point that I would like to bring to the notice of the Hon'ble Members is about the Budgetary position. His Highness, while addressing has said that the Government of Mysore have adopted the procedure, normal procedure of budgeting, that is, making our expenditure come within our income, not exceed our income. That is a very important aspect of the case which His Highness has dealt with. He says in his address : " The normal budgeting principle has been accepted. Our Expenditure has been within our income and therefore," he says, " it is a matter for gratification." His Highness does not refer to capital expenditure. Capital Expenditure is always met either by borrowing or by other methods. Therefore, normal expenditure is limited to the income and the Government of Mysore have been following that procedure even now and during this present year also. That is one aspect which he has dealt with.

Another aspect which the Government of Mysore have been following is about the law and order in the State. We are living at a time when there is stress and strain both inside and outside the country. His Highness referred to the situation on the eastern border of India and said that the whole thing might be settled by adopting the methods of the Gandhian way. Now, I want to make it very clear at this stage, that any view that is expressed by His Highness therein is not the personal view of His Highness the Maharaja; it is the view of the Government of Mysore. Therefore, the Government of Mysore have assured and dispelled all fears that might be entertained in any quarter that they are not going to tolerate any unconstitutional move to overthrow this Government. They would be put down whether it be from Communists, whether it be from R.S.S., or from any other quarter; they would not be tolerated. That is one aspect of the case which deserves the greatest attention of the entire country at this present stage. I am glad that the Government of Mysore are concentrating its attention on this. In any country economic development is not possible unless there is normal security in the country. If, at any time we have disturbances in some part or other in the territory, then the Government will have to direct all their energies towards establishing law and order in the country rather than concentrating their attention upon the development schemes. That needs our primary attention and the Government have given due consideration for that aspect of the case.

The next thing that requires priority would be the food problem. Mysore, they say, has always been deficit in food. We do not produce sufficient quantity require dby our people. Therefore they say " We give first priority". Any other development scheme is impossible unless we stop the out-flow of our revenues from this country to elsewhere. Our State spends about two crores,—I am not very certain—by way of subsidy. That must be stopped and they resolve by the end of 1951 to make Mysore self-sufficient. Towards that end they have promised very big schemes to be launched in the country not only at the expense of the

Mysore Government but with the aid and assistance of the Government of India and to that extent, I submit, the Address is to be welcomed and we have to thank His Highness the Maharaja.

There are other matters also dealt in the Address. About prohibition, total prohibition has been accepted as the policy of the Government of Mysore. But in view of the experiences they had all these two years, they did not cry hard but they said a little caution was necessary. Instead of introducing prohibition in every part of the country at one and the same time and lose the revenue, in order to consolidate, in order to prevent illicit distillation in every village, they have to see that prohibition becomes a success that we want to. Therefore, they say a little caution is necessary and they want to go slow. This policy, they say, also is not only directed by circumstances now but also has been advised by the Central Government.

Sri K. CHENGALARAYA REDDY (Leader of the House).—Favoured by the Central Government.

Sri T. SUBRAMANYA.—Favoured by the Central Government.

Sri L. SIDDAPPA (Shimoga District—General).—In the past when it was favoured by the Central Government, it was not accepted by our Government!

Sri T. SUBRAMANYA.—Well, I can answer my Hon'ble friend by saying that we would rather rule in Hell than serve in Heaven (Laughter). That is the point. We were yearning for freedom. That is why even if they did anything, if it is a foreign Government, if we are slaves under foreigners, spoon feeding would be no good.

Rajamantrapravina H. B. GUNDAPPA GOWDA (Hassan District—General).—That is what Duryodhana said.

Sri T. SUBRAMANYA.—I wish my Hon'ble friend had all the characteristics of Duryodhana. He was a big man.

Sri H. B. GUNDAPPA GOWDA.—I thought my friend was playing the role of Duryodhana.

Sri K. CHENGALARAYA REDDY.—Both of them have big personalities. (Laughter).

Sri T. SUBRAMANYA.—Duryodhana fought for a cause which was very dear to him. Duryodhana did not want to yield to others. I wish Sri Gundappa Gowda had all those qualities. All those people would go down in the history as great men. I do not want to go any further into that aspect of the case.

His Highness has also referred to the Hydro-electric schemes, the Village Improvement schemes and the reform in land tenure and also cottage industries. Cottage industries will play a very important part in the economy of our national life. Cottage industries, unless developed, we will be doing patch work only if we want to increase the living standard of the average man in this country. I am glad. We shall discuss the schemes later on. But the point is, in broad lines it has been hinted what course they are going to take. Village industries have not been neglected. They will be taken up. Cottage industries also receive sufficient attention at the hands of the Government.

The next point I would like to refer is about nationalisation of Bus Transport. Nationalisation is easy to cry from the topmost breath of our voice but to do it is difficult. We want persons who are very honest, and personnel well versed in it. The Government of Mysore have begun in a small way by taking up Road Transport. Even so, instead of antagonising all those people here in the line—they may be small or big, from my point of view there are not many big capitalists, you can count them on your finger tips, all those people here in the line must not be hurt unnecessarily—Government have started on a small scale. It is a matter for gratification for me to state that we are not going to hit anybody in this country, whether he be with us or against us.

Sri K. CHENGALARAYA REDDY.—It is perhaps only transitional.

Sri T. SUBRAMANYA.—Till such time as we can. It is seen that no man is hurt unnecessarily. That is the policy of the Government of Mysore.

Another aspect is that labour has not been ignored. The work that has already been done is that many labour laws have been placed on the statute book. About the future work, they have promised that housing work will be taken on hand and relief given to the poor. I therefore congratulate the Government of Mysore for the way in which they have been proceeding. Honourable members of this House will kindly remember that it is only a policy which they have hinted. With regard to the actual administrative acts of Government, Honourable members will have sufficient opportunity to discuss. This is only an outline of the policy of the Government of Mysore. On these lines they will go on from now till the next session. I therefore submit that the House will unanimously pass this resolution of mine.

I do not think any authorisation is necessary for the Hon'ble Speaker to send it on to His Highness the Maharaja. It is provided under the rules. There is no controversial matter in this speech. I do not expect any amendments to be brought in. Even if any amendments are brought in I hope they will be withdrawn. If not, I think, they may be thrown out.

Mushir-ul-Mulk J. MOHAMED IMAM (Chitaldrug *cum* Tumkur—Muslim).—That is presuming too much!

Sri T. SUBRAMANYA.—I am certain that if any amendment is brought in, it will be thrown out after it is answered by me.

Sri K. CHENGALARAYA REDDY.—That is your hope.

Sri T. SUBRAMANYA.—Yes. That is my hope. The motives actuating my friends who may bring in the amendments are good. There is no difference at all. After my explanation I hope they will be withdrawn. If not, the House will throw them out. I therefore appeal to the members to accept my resolution. Thank you, Sir.

Mr. SPEAKER.—Motion moved:

"That an Address be presented to His Highness the Maharaja in the following terms:—

"May it Please Your Highness,

We, the members of the Mysore Legislative Assembly, assembled in this Session, beg leave to thank Your Highness for the Address delivered to the Assembly."

Sri A. BHEEMAPPA NAIK (Chitaldrug District—General).—Is it not necessary that the motion should be seconded?

Mr. SPEAKER.—Seconding a motion is not necessary.

ಇದರ ಮೇಲಿನ ಚರ್ಚೆಯ ಸಂಬಂಧದಲ್ಲಿ ಒಂದೆರಡು ವಿಷಯಗಳನ್ನು ನಾನು ಹೇಳಬೇಕೆಂದಿದ್ದೇನೆ. ಹೊರಗಡೆ ಎಲ್ಲಾ ಕಡೆಯೂ ಈ ಬಗ್ಗೆ ಏನು ಪದ್ಧತಿಯನ್ನನುಸರಿಸುತ್ತಿದ್ದಾರೆಂದರೆ, ಮೊದಲನೆಯ ದಿವಸ ಯಾರು ಚರ್ಚೆಯಲ್ಲಿ ಭಾಗವಹಿಸುತ್ತಾರೋ ಅವರಿಗೆ ಸಾಧಾರಣವಾಗಿ ಎರಡನೆಯ ದಿವಸ ಭಾಗವಹಿಸುವುದಕ್ಕೆ ಅವಕಾಶವಿರುವುಗಿಲ್ಲ.. ಅಂದರೆ ತಿದ್ದುಪಡಿಗಳನ್ನು ಸೂಚನೆ ಮಾಡುವಾಗಲೇ ಆಗಲಿ, ಮೊದಲನೆಯ ದಿವಸ ಮಾತನಾಡಿದ ಮೇಲೆ ಮತ್ತೆ ಎರಡನೆಯ ದಿವಸ ಅವರು ಮಾತನಾಡುವುದಿಲ್ಲ. ಅದೇ ಪದ್ಧತಿಯನ್ನು ನಾವು ಇಲ್ಲಿಯೂ ಅನುಸರಿಸುವುದು ಉತ್ತಮವೆಂದು ಕಾಣುತ್ತದೆ. ಇದರಿಂದ ಹೆಚ್ಚು ಜನರಿಗೆ ಮಾತನಾಡಲು ಅವಕಾಶ ಸಿಕ್ಕುವಂತಾಗುತ್ತದೆ. ಅಲ್ಲದೆ, ಭಾಷಣಗಳಿಗೇನಾದರೂ ಕಾಲ ಪರಿಮಿತಿಯನ್ನು ಗೊತ್ತುಮಾಡಬೇಕೆಂದು ತಾವು ಭಾವಿಸುವುದಾದರೆ, ಅದಕ್ಕೂ ಎಷ್ಟು ಹೊತ್ತು ಸೂಕ್ತವೆಂಬ ಬಗ್ಗೆ ಸೂಚನೆ ಮಾಡಬಹುದು. ಸುಮಾರು ಹತ್ತು ನಿಮಿಷಗಳನ್ನು ಗೊತ್ತುಮಾಡಿದರೆ ಎಲ್ಲರಿಗೂ ಸರಿಹೋಗಬಹುದು. ಈ ವಿಚಾರದಲ್ಲಿ ಸದಸ್ಯರ ಅಭಿಪ್ರಾಯವೇನೆಂಬುದನ್ನು ತಿಳಿಸಬಹುದು.

ಜನಾಬ್ ಜೆ. ಮಹಮದ್ ಇಮಾಂರವರು.—ಈ ವಿಷಯದಲ್ಲಿ ಅಷ್ಟಾಗಿ ಕಾಲವನ್ನು ಪರಿಮಿತಿಗೊಳಿಸುವುದು ನನಗೆ ಸರಿಯಾಗಿ ಕಾಣುವುದಿಲ್ಲ..... ....

ಅಧ್ಯಕ್ಷರು.—ನಿಬಂಧನೆಗಳಲ್ಲಿ ಅದಕ್ಕೆ ಅವಕಾಶ ಕೊಟ್ಟಿಲ್ಲ, ನಿಜ. ಅದಕ್ಕೇ ನಾನು ಸಭೆಯ ಅಭಿಪ್ರಾಯವನ್ನೇ ತೆಗೆದುಕೊಂಡು ಗೊತ್ತುಮಾಡಿದರೆ ಉತ್ತಮವೆಂದು ತಮ್ಮನ್ನು ಕೇಳಿದ್ದೇನೆ.

ಜನಾಬ್ ಜೆ. ಮಹಮದ್ ಇಮಾಂರವರು.—ಹಾಗೆ ಕಾಲ ನಿಗದಿ ಮಾಡುವುದಕ್ಕೆ ಬದಲು ಯಾರ್ಯಾರಿಗೆ ಎಷ್ಟೆಷ್ಟು ಕಾಲಾವಕಾಶ ಕೊಡಬೇಕೆಂಬುದನ್ನು ಅಧ್ಯಕ್ಷರ ವಿವೇಚನೆಗೇ ಬಿಟ್ಟರೆ ಒಳ್ಳೆಯದು. ಏಕೆಂದರೆ ಒಬ್ಬ ಸದಸ್ಯರು ಮಾತನಾಡುತ್ತಿರುವುದು ಬಹಳ ಮುಖ್ಯವಾದ ವಿಷಯವಾಗಿರಬಹುದು; ಇನ್ನೊಬ್ಬರು ಮಾತನಾಡುವುದು ಹಾಗಿಲ್ಲದಿರಬಹುದು. ಆದ್ದರಿಂದ ಇದನ್ನು ಗೊತ್ತುಮಾಡುವ ಅಧಿಕಾರವನ್ನು ತಮಗೇ ಬಿಡುವುದು ಉತ್ತಮವೆಂದು ತೋರುತ್ತದೆ. ಹಾಗಿಲ್ಲದೆ ಸೂಚನೆಗಳನ್ನು ಸೂಚಿಸುವವರಿಗೆ ಮಾತ್ರ 15 ನಿಮಿಷಗಳು, ಮಿಕ್ಕವರಿಗೆ ಹತ್ತು ನಿಮಿಷ —ಈ ರೀತಿಯಾಗಿ ಗೊತ್ತುಮಾಡುವುದು ಸರಿಯಲ್ಲ.

I am against prescribing any time-limit. We have come here to present our case fully and we will not be doing justice to our electorate if there is no time for us to express fully. I am for leaving this matter of limiting the time to the Hon'ble Speaker himself. He may take into consideration the matter of the subject and the relevancy of the points that will be pressed. I therefore think that it is not necessary to fix any time limit, but that the Hon'ble

Speaker may have full discretion in the matter.

Sri S. RANGARAMIAH (Mysore District—General).—Sir, those who oppose the resolution may be given full time. From the trend of the subject, I think most of the Hon'ble members will support the resolution. Those who oppose may be very few. As such they may be allowed to take their own time.

Janab SYED ABDUR RAHMAN (Chikmagalur *cum* Shimoga—Muslim):- Sir, you were pleased to point out just now that those who take part in the general resolution will not be allowed to take part to speak on the amendments that come up to-morrow. If so, why are we prevented to take part while the amendments are being moved ?

ಅಧ್ಯಕ್ಷರು.—ಆ ಪದ್ಧತಿಯನ್ನು ಎಲ್ಲಾ ಕಡೆಯೂ ಅನುಸರಿಸುತ್ತಿದ್ದಾರೆ. ತಿದ್ದುಪಡಿಗಳನ್ನು ಸಭೆಯಲ್ಲಿ ಸೂಚನೆ ಮಾಡುವಾಗಲೇ ತಾವು ಏನು ಬೇಕಾದರೂ ಮಾತನಾಡಬಹುದು. ಆದ್ದರಿಂದ ತಿದ್ದುಪಡಿಯ ಮೇಲೆ ಇಂದು ಮಾತನಾಡಿದ ಮೇಲೆ ನಾಳೆ ದಿವಸ ಮತ್ತೆ ಮಾತನಾಡುವುದಕ್ಕೇನೂ ಇರಲಾರದು. ಆದ್ದರಿಂದ ಈ ಪುನರುಕ್ತಿಯನ್ನು ತಪ್ಪಿಸುವುದಕ್ಕೆಂದೇ ನಾನಿದನ್ನು ಸೂಚಿಸಿದ್ದೇನೆ.

Janab SYED ABDUR RAHMAN.—As stated by Sri Rangaramiah, there will be very few opposers......... ..

Mr. SPEAKER.—That is a different matter.

Sri M. V. KRISHNAPPA (Kolar District—General).—The very fact that Hon'ble Members are supporting the resolution shows that there will not be any or many who will oppose it.

Mr. SPEAKER.—We shall resume discussion on the resolution.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ಶ್ರೀಮಾನ್ ಸುಬ್ರಹ್ಮಣ್ಯರವರು ಶ್ರೀಮನ್ಮಹಾರಾಜರವರ ವಂದನಾರ್ಪಣೆಗೆಂದು ಈ ಸಭೆಯ ಮುಂದೆ ತಂದಿರತಕ್ಕ ಠರಾವನ್ನು ಅನುಮೋದಿಸುತ್ತಾ ನಾಲ್ಕಾರು ಮಾತುಗಳನ್ನು ಹೇಳಲು ಅಪ್ಪಣೆ ಬೇಡುತ್ತೇನೆ. ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಮೈಸೂರು ಸರ್ಕಾರದ ಮುಂದಿನ ಆಡಳಿತದ ರೂಪುರೇಖೆಗಳನ್ನು ಮಾತ್ರವಲ್ಲದೆ ಇದುವರೆಗೂ ನಡೆಸಿದ ಆಡಳಿತದ ವಿಷಯದಲ್ಲೂ ಕೂಡ ಅನೇಕ ಅಂಶಗಳನ್ನು ಅಪ್ಪಣೆ ಕೊಡಿಸಿದ್ದಾರೆ. ಈ ವರದಿಯಲ್ಲಿ ಸೂಚಿತವಾಗಿರುವ ಹಾಗೆ ಶ್ರೀಮನ್ಮಹಾರಾಜರವರ ಭಾಷಣದ ಒಟ್ಟು ಸಾರಾಂಶವನ್ನು ತೆಗೆದುಕೊಂಡರೆ ಮೈಸೂರು ಸರ್ಕಾರದ ಆಡಳಿತ ಒಂದು ತತ್ವದ ಆಧಾರದ ಮೇಲೆ ನಡೆದುಬರುತ್ತಿದೆಯೆಂದೂ, ಬೆಳೆದುಬರುತ್ತಿದೆಯೆಂದೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅವರು ತಮ್ಮ ಭಾಷಣದಲ್ಲಿ ಮನುಷ್ಯರ ಜೀವನಕ್ಕೆ ಬೇಕಾದ ಆರ್ಥಿಕ, ಸಾಮಾಜಿಕ, ನೈತಿಕ ಜೀವನವನ್ನು ಹೇಗೆ ಮೇಲ್ಮಟ್ಟಕ್ಕೆ ತರಬೇಕೆಂಬುದನ್ನೂ ಅವರು ಒಂದು ವಿಧದಲ್ಲಿ ಎತ್ತಿ ತೋರಿಸಿದ್ದಾರೆ.

ಈಗಾಗಲೇ ಶ್ರೀ ಸುಬ್ರಹ್ಮಣ್ಯರವರು ಅನೇಕ ವಿಷಯಗಳನ್ನು ತಮ್ಮ ಮುಂದೆ ಹೇಳಿರುವುದರಿಂದ ಅವುಗಳನ್ನೇ ಪುನಃಪುನಃ ಹೇಳಲು ನಾನು ಹೋಗದೆ ಉಳಿದ ವಿಷಯಗಳನ್ನು ಮಾತ್ರ ಹೇಳಬಯಸುತ್ತೇನೆ. ಶ್ರೀಮನ್ಮಹಾರಾಜರವರು ವಿದ್ಯಾಭ್ಯಾಸದ ವಿಚಾರದಲ್ಲಿ ಮೈಸೂರು ಸರ್ಕಾರದವರು ಇದುವರೆಗೂ ಈ ಎರಡು ವರ್ಷಗಳಲ್ಲಿ ಏನು ಸಾಧಿಸಿದ್ದಾರೆಂಬುದನ್ನು ತಿಳಿಸಿರುವುದಲ್ಲದೆ, ಮುಂದೆ ಏನು ಸಾಧಿಸಲಿಚ್ಛಿಸಿದ್ದಾರೆಂಬುದನ್ನೂ ಎತ್ತಿ ತೋರಿಸಿದ್ದಾರೆ. ಅಷ್ಟೇ ಅಲ್ಲದೆ ಜಗತ್ತಿನ ಸಂಬಂಧವನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಹೇಗೆ ಬೆಳೆಸಿಕೊಂಡು ಬರುವುದಕ್ಕೆ ವಿಶ್ವಸಂಸ್ಥೆ (World Organisation) ಯನ್ನೇ ಇಲ್ಲಿಗೆ ಬರಮಾಡಿಕೊಂಡರೆಂಬುದನ್ನೂ ತಿಳಿಸಿದ್ದಾರೆ. ನಮ್ಮ ವಿದ್ಯಾಭ್ಯಾಸವನ್ನು ಎಷ್ಟರಮಟ್ಟಿಗೆ ಬೆಳೆಸಿಕೊಂಡು ಬರಬೇಕು, ವಯಸ್ಕರ ವಿದ್ಯಾಭ್ಯಾಸವನ್ನು ಹೇಗೆ ನಡೆಸಬೇಕು, ಮಕ್ಕಳನ್ನು ಹೇಗೆ ಅಭಿವೃದ್ಧಿಗೆ ತರಬೇಕು— ಇವೇ ಮುಂತಾಗಿ ಜ್ಞಾನಾರ್ಜನೆಯ ವಿಚಾರದಲ್ಲಿ ಮೈಸೂರು ಸರ್ಕಾರದವರು ಏನು ಮಾಡಿದ್ದಾರೆ ಮತ್ತು ಏನು ಮಾಡಲಿದ್ದಾರೆ ಎಂಬುದನ್ನೂ ಹೇಳಿದ್ದಾರೆ.

ಇಷ್ಟಾದ ಮೇಲೆ, ಮೈಸೂರು ಜನಜೀವನದಲ್ಲಿ ಪ್ರಾಮುಖ್ಯವಾದ ಆಹಾರದ ವಿಚಾರದಲ್ಲಿ ಬರೀ ಉತ್ಪನ್ನವನ್ನು ಹೆಚ್ಚಿಸುವ ವಿಷಯಗಳನ್ನೇ ಅಲ್ಲದೆ ಶಾಸ್ತ್ರೋಕ್ತವಾಗಿ ಪರಿಶೋಧನಗಳನ್ನು ನಡೆಸಿ ಆಹಾರ ಸಮಸ್ಯೆಯನ್ನು ಬಗೆಹರಿಸಬೇಕೆಂದು ಭಾರತ ಸರ್ಕಾರದವರಿಂದ ಯಾವ ಒಂದು ಸಂಶೋಧನಾಶಾಲೆಯು ಪ್ರಾರಂಭವಾಗಬೇಕೆಂದಿದೆಯೋ ಅದರ ಸಹಾಯವನ್ನೂ ಪಡೆಯುವವರಾಗಿದ್ದಾರೆ. ಸ್ವಯಂ ಪರಿಪೂರ್ಣತೆಯನ್ನು ಗಳಿಸುವುದಕ್ಕೆ ಏನೇನು ಕಾರ್ಯಕ್ರಮಗಳು ಬೇಕೋ ಅವೆಲ್ಲವನ್ನೂ ಕೈಕೊಳ್ಳುತ್ತೇವೆಂದೂ ಹೇಳಿದ್ದಾರೆ.

ಇದರ ಜೊತೆಗೆ ಅರಣ್ಯ ಸಂಪತ್ತಿನ ವಿಚಾರ. ಇದನ್ನು ಮೈಸೂರು ದೇಶದಲ್ಲಿ ಹೇಗೆ ಬೆಳೆಸಿಕೊಂಡು ಬರಬೇಕು, ಇಲ್ಲದಿದ್ದರೆ ಎಷ್ಟು ಅನಾನುಕೂಲ, ಇದರ ಆದಾಯ ಯಾವ ಆಧಾರದ ಮೇಲೆ ನಿಂತಿದೆ ಎಂಬುದನ್ನು ಹೇಳುತ್ತಾ, ಅಖಿಲಭಾರತ ಅರಣ್ಯಶಾಖೆಯ ಒಂದು ಸಮಿತಿಯು ಇಲ್ಲಿಗೆ ಬಂದಾಗ ಅದರ ಸಂಬಂಧವನ್ನು ಪಡೆದು, ಅದರಿಂದ ಬೇಕಾದ ವಿಜ್ಞಾನ, ಕಲೆ ಮುಂತಾದ ವಿಷಯಗಳನ್ನು ಹೇಗೆ ಬೆಳೆಸಿಕೊಂಡು ಬಂದು ಉಪಯೋಗಿಸಿಕೊಳ್ಳಬೇಕೆಂಬ ವಿಚಾರದಲ್ಲೂ ಒಂದು ವಿಧವಾದ ಸೂಚನೆಯನ್ನು ಕೊಟ್ಟಿದ್ದಾರೆ. ಇಷ್ಟಾದ ಮೇಲೆ ಈಗ ನಮ್ಮ ವಿದ್ಯುಚ್ಛಕ್ತಿಯನ್ನು ಎಷ್ಟುಮಟ್ಟಿಗೆ ಬೆಳೆಸಿಕೊಂಡು ಬಂದಿದೆ, ಅದು ಹೇಗೆ ದಿಳ್ಳಿಯಿಂದ ಹಳ್ಳಿಗಳವರೆಗೆ ಉಪಯೋಗವಾಗುತ್ತಿದೆ, ಅದರ ಕಾರ್ಯಕ್ರಮದಿಂದ ಎಷ್ಟುಮಟ್ಟಿಗೆ ಉಪಯೋಗವಾಗುತ್ತಿದೆ ಎಂದು ತೋರಿಸಿರುವುದೂ ಅಲ್ಲದೆ, ಅನೇಕ ಕೈಗಾರಿಕೆಗಳು ಹಿಂದೆ ಹೇಗಿದ್ದುವು, ಅವುಗಳನ್ನು ಹೇಗೆ ಬೆಳೆಸಿಕೊಂಡು ಬಂದಿದೆ, ಹೇಗೆ ಅಭಿವೃದ್ಧಿಯಾಗಿವೆ ಎಂದು ಹೇಳುವುದರ ಜೊತೆಗೆ ದೊಡ್ಡ ಕೈಗಾರಿಕೆಗಳನ್ನು ಇನ್ನೂ ದೊಡ್ಡದಾಗಿ ಮಾಡಿ ಅದರಿಂದ ಸಂಸ್ಥಾನಕ್ಕೂ ಮತ್ತು ಹೊರದೇಶಗಳಿಗೂ ಒದಗಿಸುವುದಕ್ಕೆ ಎಷ್ಟು ತಯಾರು ಮಾಡಬೇಕೋ ಅದಕ್ಕೆ ತಕ್ಕ ಕಾರ್ಯಕ್ರಮವನ್ನೂ ಕೈಕೊಂಡು ಅಭಿವೃದ್ಧಿಗೆ ತರುವ ವಿಚಾರವನ್ನು ಕೂಡ ಸೂಚಿಸಿದೆ. ಇನ್ನೂ ಕೆಲವು ಮುಖ್ಯ ಕೈಗಾರಿಕೆಗಳಲ್ಲಿ ಒಂದಾದ ಮೆಷೀನ್ ಟೂಲ್ ಫ್ಯಾಕ್ಟರಿಗೆ ಭಾರತ ಸರ್ಕಾರದ ಸಹಾಯ ಪಡೆದು, ಮೈಸೂರು ದೇಶದಲ್ಲಿ 18 ಕೋಟಿ ರೂಪಾಯಿಗಳ

ವೆಚ್ಚದಲ್ಲಿ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಿದರೆ ಜನಜೀವನಕ್ಕೆ ಬಡವರಿಗೆ, ಕೂಲಿಗಳಿಗೆ ಬೇರೆ ರಕ್ಷಣೆ ಆವಶ್ಯಕವಿಲ್ಲ ಎಂದು ಯೋಚಿಸಿ ತನ್ಮೂಲಕ ಮೈಸೂರಿನ ಆರ್ಥಿಕ ಮಟ್ಟವು ಹೇಗೆ ಹೆಚ್ಚುತ್ತದೆ ಎಂಬುದನ್ನೂ ತೋರಿಸಿದ್ದಾರೆ.

ಹಾಗೆಯೇ ಚಿಕ್ಕಪುಟ್ಟ ಕೈಗಾರಿಕೆಗಳ ಅಭಿವೃದ್ಧಿಯ ವಿಷಯದಲ್ಲಿ ಎಷ್ಟು ಅಗತ್ಯವಿದೆಯೆಂಬುದನ್ನು ಸ್ಪಷ್ಟವಾಗಿ ವಿವರಿಸಿರುವುದೂ ಅಲ್ಲದೆ, ಅದರಿಂದ ವ್ಯವಸಾಯಗಾರನಿಗೆ ಯಾವರೀ ಸಹಾಯವಾಗುತ್ತದೆಂಬುದನ್ನೂ ಸೂಚಿಸಿದ್ದಾರೆ. ಇದಾದ ಮೇಲೆ ಲ್ಯಾಂಡ್ ಟೆನ್ಯೂರ್ ಅಥವಾ ಇನಾಂತಿ ವಿಚಾರದಲ್ಲಿ ಮೈಸೂರು ಸರ್ಕಾರದವರು ಅವಶ್ಯಕವಾದ ಕಾರ್ಯಕ್ರಮವನ್ನು ಕೈಗೊಂಡು ಹೇಗೆ ಅಭಿವೃದ್ಧಿಪಡಿಸಿ ರೈತರಿಗೆ ಅನುಕೂಲವಾಗುವಂತೆ ಮಾಡಬೇಕೆಂದಿದ್ದಾರೆಂಬುದನ್ನೂ ಹೇಳಿದ್ದಾರೆ. ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಯ ವಿಚಾರದಲ್ಲಿ ಕೂಡ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಸ್ಥಳೀಯ ಸಂಸ್ಥೆಗಳೆಂದರೆ ಗ್ರಾಮಪಂಚಾಯಿತಿಗಳು, ವಿದ್ಯಾಸಂಸ್ಥೆಗಳು, ಜಿಲ್ಲಾ ಬೋರ್ಡು, ಡೆವಲಪ್‌ಮೆಂಟ್ ಕಮಿಟಿಗಳು—ಇವುಗಳನ್ನೆಲ್ಲಾ ಒಂದುಮಾಡಿ, ಒಂದೇ ದಾರಿಯಲ್ಲಿ ಒಂದೇ ಮಾರ್ಗದಲ್ಲಿ ದೇಶದ ಉದ್ಧಾರಕ್ಕಾಗಿ ಹೇಗೆ ಕೆಲಸ ಮಾಡಬೇಕು, ಅದರಿಂದ ದೇಶೋದ್ಧಾರ ಹೇಗಾದೀತು, ರೈತರಿಗೆ ಹೇಗೆ ಉಪಯೋಗವಾದೀತು ಎಂಬುದನ್ನು ತೋರಿಸಿರುವುದೂ ಅಲ್ಲದೆ ಸ್ಥಳೀಯ ಸಂಸ್ಥೆಗಳು, ಮುನಿಸಿಪಾಲಿಟಿಗಳು ವಗೈರೆ ಸಂಸ್ಥೆಗಳು ಅಭಿವೃದ್ಧಿಗೆ ಬರುವುದಕ್ಕೆ ಮೈಸೂರು ಸರ್ಕಾರದವರು ಏನು ಯೋಜನೆ ಕೈಕೊಂಡಿದ್ದಾರೆ, ಏನು ಕೈಕೊಳ್ಳಲಿದ್ದಾರೆ ಎಂಬುದನ್ನೂ ತೋರಿಸಿದ್ದಾರೆ.

ಹಾಗೆಯೇ ವ್ಯವಸಾಯಗಾರನಿಗೆ ಈಗ ಬೀಳುವ ಕಂದಾಯದ ಹೊರೆ ವಿಚಾರದಲ್ಲಿ ಏನು ಮಾಡಬೇಕು, ಏನು ಕಾರ್ಯಕ್ರಮ ಕೈಕೊಂಡಿದೆ ಎಂಬ ವಿಚಾರದಲ್ಲಿ ಆಗಲೇ ಮೈಸೂರು ದೇಶದ ರೈತನ ಮೇಲೆ ಕಂದಾಯದ ಹೊರೆ ಹೆಚ್ಚಿದೆಯೇ, ಅಥವಾ ಕಡಿಮೆಯಿದೆಯೇ ಎಂಬುದನ್ನು ಪರಿಶೀಲಿಸುವುದಕ್ಕಾಗಿ ಒಂದು ಸಮಿತಿಯನ್ನು ಮಾಡಿರುವುದಾಗಿಯೂ, ಅದು ಪರಿಶೀಲಿಸುತ್ತಿರುವುದಾಗಿಯೂ, ಅದರ ಶಿಫಾರ್ಸಿನ ಮೇಲೆ ಸರ್ಕಾರದವರು ಏನು ಮಾಡಬೇಕೆಂದಿದ್ದಾರೆಂಬುದನ್ನೂ ತೋರಿಸಿದ್ದಾರೆ. ಇಷ್ಟೇ ಅಲ್ಲದೆ ಮನುಷ್ಯನ ನೈತಿಕ ಮಟ್ಟವನ್ನು ಏರಿಸುವುದಕ್ಕೆ ಯುದ್ಧಾನಂತರ ಉಂಟಾಗಿರುವ ಆಹಾರಾಭಾವ ಅಥವಾ ಪದಾರ್ಥಗಳ ಅಭಾವದಿಂದ ಮನುಷ್ಯನ ಮನಸ್ಸಿನ ಮೇಲೆ ಉಂಟಾಗಿರುವ ಭಾವನೆಯನ್ನು ಹೋಗಲಾಡಿಸುವುದಕ್ಕಾಗಿ ಕಾಳಸಂತೆಯನ್ನು ತಡೆಗಟ್ಟುವೆವೆಂದು ಜನರಿಗೆ ಅಭಯ ನೀಡಿದ್ದಾರೆ; ಮನವಿ ಮಾಡಿದ್ದಾರೆ. ಇಂಥಾದ್ದನ್ನು ತಡೆಗಟ್ಟಿದ ಹೊರತು ದೇಶೋದ್ಧಾರವಾಗುವುದಿಲ್ಲವೆಂಬುದನ್ನೂ ಸೂಚಿಸಿದ್ದಾರೆ. ಇದರ ಜೊತೆಗೆ ಹೆಚ್ಚು ಆಹಾರವನ್ನು ಬೆಳೆಯುವ ವಿಚಾರದಲ್ಲೂ, ಕೈಗಾರಿಕೆ ಮತ್ತು ವಸತಿ ಸೌಕರ್ಯವನ್ನು ಅಭಿವೃದ್ಧಿಪಡಿಸುವ ವಿಚಾರದಲ್ಲೂ ಜನತೆಯ ಸಹಕಾರವೆಷ್ಟು ಬೇಕು ಎಂಬುದನ್ನೂ ತಿಳಿಸಿ, ಅದಿಲ್ಲದಿದ್ದರೆ ಏನೂ ಆಗುವುದಿಲ್ಲವೆಂದು ಹೇಳಿದ್ದಾರೆ. ಇದೂ ಅಲ್ಲದೆ ಸರ್ಕಾರದಿಂದ ಏನು ಸಹಾಯ ಬೇಕೋ ಅದನ್ನೂ ಸಹ ಒದಗಿಸುವುದಕ್ಕೆ ಭರವಸೆಯೂ ಅಡಕವಾಗಿದೆ. ಹೀಗೆ ಮೈಸೂರಿನ ಅಭಿವೃದ್ಧಿಗಾಗಿ, ಮೇಲ್ಮೆಗಾಗಿ ಬೇಕಾದ ಎಲ್ಲಾ ಕಾರ್ಯಕ್ರಮಗಳನ್ನೂ ನಮ್ಮ ಸರ್ಕಾರದವರು ಕೈಕೊಂಡಿದ್ದಾರೆಂಬುದು ಶ್ರೀಮನ್ಮಹಾರಾಜರವರ ಭಾಷಣದಿಂದ ವ್ಯಕ್ತವಾಗುತ್ತದೆ. ಆದರೆ ಸ್ವಯಂ ಸಂಪೂರ್ಣವಾಗಿದೆಯೆಂದು ಯಾರೂ—ಹೇಳದೇ ಇದ್ದರೂ ನಮಗೆ ಅನುಕೂಲವಾಗುವಂಥ ಅನೇಕ ಅಂಶಗಳನ್ನು ರಾಜಪ್ರಮುಖರಾದ ನಮ್ಮ ಶ್ರೀಮನ್ಮಹಾರಾಜರು, ಹೇಳಿರುವುದು ಒಂದು ತತ್ವ, ಒಂದು ಧ್ಯೇಯ, ಆಡಳಿತದ ರೀತಿನೀತಿ, ರೂಪುರೇಖೆ ಮಾತ್ರ ಎಂದು ಹೇಳಲು ಸಾಧ್ಯವಿದೆ. ಈ ವಿಷಯವು ಈ ಭಾಷಣದಲ್ಲಿ ನಮೂದಾಗಿದೆ ಎಂಬುದನ್ನು ಒಪ್ಪಬಹುದು. ಸಂಗ್ರಹಣೆಯ ದೃಷ್ಟಿಯಿಂದ ಆಹಾರದ ವಿಚಾರದಲ್ಲಿ ಸ್ವಯಂ ಸಂಪೂರ್ಣತೆಯಿದೆಯೆಂದು ಏನಾದರೂ ಇನ್ನೂ ಕೆಲವು ವಿಚಾರಗಳನ್ನು ಹೇಳಿದ್ದರೆ ಚೆನ್ನಾಗಿರುತ್ತಿತ್ತು ಎಂದು ಮಾತ್ರ ತಿದ್ದುಪಡಿ ತರಬಹುದಾಗಿತ್ತು; ಆದರೆ ಅದು ಅಷ್ಟು ಅಗತ್ಯವಲ್ಲ. ಜವಾಬ್ದಾರಿಯಿಂದ ಇದನ್ನು ಪರಿಶೀಲಿಸುವಾಗ ಇದು ಸರ್ವಾಂಗ ಸುಂದರವಾಗಿದೆಯೆಂದು ಮಾತ್ರ ಹೇಳಬೇಕೇ ಹೊರತು ಬೇರೆ ಅಭಿಪ್ರಾಯ ಪಡಬಾರದು. ಸ್ವಯಂ ಸಂಪೂರ್ಣವಾಗಲು, ಜನರ ಮನಸ್ಸಿನ ಆಶೆಯನ್ನು ಈಡೇರಿಸಲು ಈ ಭಾಷಣವು ಸಹಾಯಕವಾಗಿದೆ. ಈ ವಿಧವಾದ ಒಂದು ಭಾಷಣವನ್ನು ಮಾಡಿ ಮೈಸೂರು ಸರ್ಕಾರದ ಆಡಳಿತದ ರೀತಿನೀತಿ, ಜನರಿಗೆ ಬೇಕಾದ ಸೌಕರ್ಯದ ಏರ್ಪಾಡುಗಳು ಮುಂತಾದುವುಗಳನ್ನು ಸೂಚಿಸಿರುವುದಕ್ಕಾಗಿ ಶ್ರೀಮನ್ಮಹಾರಾಜರವರಿಗೆ ಈ ಸಭೆಯು ತನ್ನ ವಂದನೆಗಳನ್ನು ತಮ್ಮ ಮೂಲಕ, ಈ ಠರಾವಿನ ಮೂಲಕ ಸಲ್ಲಿಸುತ್ತದೆ ಎಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ನಿನ್ನೆ ತಾನೆ ಶ್ರೀಮನ್ಮಹಾರಾಜರವರು ಈ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಹಿಂದೆ ಎಂದೂ ಇಲ್ಲದೆ ಇರುವ ಗಹನವಾದ ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ, ಅದು ಒಂದು ವಿಶೇಷ ರೀತಿಯ ಸಂಪ್ರದಾಯವಾಗಿದೆ ಎಂಬ ಭಾವನೆ ಪ್ರಜೆಗಳಲ್ಲಿ ಮೂಡಿದೆಯೆಂದು ಕೇಳುತ್ತಿದ್ದೇನೆ. ಶ್ರೀಮನ್ಮಹಾರಾಜರವರು ಸಾಧಾರಣವಾಗಿ ಇದುವರೆಗೂ ದಿನಚರಿ ಆಡಳಿತದ ವಿಚಾರದಲ್ಲಿ ಇಷ್ಟು ಪ್ರಬಲವಾದ ಸಂಬಂಧವನ್ನು ಇಟ್ಟುಕೊಂಡ ಹಾಗೆ ಕಾಣುತ್ತಿರಲಿಲ್ಲ. ಹಿಂದಿನ ಶ್ರೀಮನ್ಮಹಾರಾಜರ ಭಾಷಣಗಳನ್ನೂ, ಸಂದೇಶಗಳನ್ನೂ ನೋಡಿ ಅದರ ಜೊತೆಗೆ ನಿನ್ನೆ ಹೇಳಿರುವುದನ್ನೂ ಹೋಲಿಸಿದರೆ ದಿನಚರಿ ಆಡಳಿತದ ವಿಚಾರದಲ್ಲಿ ಪ್ರಭುಗಳು—ರಾಜಪ್ರಮುಖರು ಹೆಚ್ಚಾಗಿ ಸಂಬಂಧಪಟ್ಟುಕೊಳ್ಳಬೇಕಾದ ಆವಶ್ಯಕತೆ ಸಹ ವ್ಯಕ್ತವಾಗುತ್ತದೆ. ಶ್ರೀಮನ್ಮಹಾರಾಜರವರು ಅನೇಕ ಪ್ರಾಮುಖ್ಯವಾದ ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ಅದರಲ್ಲೂ ಜನಜೀವನಕ್ಕೆ, ನಿತ್ಯ ಜೀವನಕ್ಕೆ ಸಂಬಂಧಪಟ್ಟ ಅನೇಕ ಅಂಶಗಳನ್ನು ಸೂಚಿಸಿದ್ದಾರೆ. ಮುಖ್ಯವಾಗಿ ಆಹಾರದ ಕೊರತೆ, ಜನಜೀವನಕ್ಕೆ, ದಿನಚರಿಗೆ ಬೇಕಾದ ವಸ್ತುಗಳ ಉತ್ಪನ್ನ, ನಿಮ್ನವರ್ಗದವರ ಮತ್ತು ಶ್ರಮಜೀವಿಗಳ ಕಷ್ಟಸುಖ—ಇವುಗಳನ್ನೆಲ್ಲಾ ಪ್ರಸ್ತಾಪಿಸಿದ್ದಾರೆ. ಒಟ್ಟಿನಲ್ಲಿ ನೋಡುವುದಾದರೆ ಸರ್ಕಾರದವರು ಮಾಡುವ ಶಾಸನ ನಿರ್ಮಾಣ, ಶಾಸನವನ್ನು ಜಾರಿಗೆ ತರುವ ವಿಧಾನ ಮುಂತಾದ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ವಿಚಾರಮಾಡಿ ಅವನ್ನು ಎತ್ತಿ ಹಿಡಿದಿದ್ದಾರೆ. ಇದು ಒಂದು ಪರ್ವಕಾಲ, ಸ್ವಾತಂತ್ರ್ಯ ಬಂದ ತರುಣದಲ್ಲೇ ದೇಶದಲ್ಲಿ ಕಷ್ಟಕರವಾದ ಮತ್ತು ಸಂದಿಗ್ಧವಾದ ಸಮಸ್ಯೆ ತಲೆದೋರಿದೆ. ಇಂಥ ಸಂದರ್ಭದಲ್ಲಿ ಸರ್ಕಾರ ಮತ್ತು ಪ್ರಜೆ ಒಟ್ಟಾಗಿ ಕಲೆತು ಈ ಸಮಸ್ಯೆಯನ್ನು ಬಿಡಿಸಬೇಕೇ ಹೊರತು ಬರೀ ಸರ್ಕಾರ ಒಂದರಿಂದಲೇ ಸಾಧ್ಯವಿಲ್ಲ. ಸರ್ಕಾರದ ಜೊತೆಗೆ ಪ್ರತಿಯೊಬ್ಬ ಪ್ರಜೆಯೂ ತನ್ನ ಶ್ರಮ ಮತ್ತು ಉತ್ಸಾಹದಿಂದ ಕೆಲಸ ಮಾಡಿ ಈ ಸಮಸ್ಯೆಯನ್ನು ಬಿಡಿಸುವುದಾದರೆ ಮಾತ್ರ

ಸಾಧ್ಯವಾಗುತ್ತದೆಂದು ಶ್ರೀಮನ್ಮಹಾರಾಜರವರು ಒತ್ತಿ ಹೇಳಿದ್ದಾರೆ.

ನಮ್ಮ ದೇಶದ ಪಕ್ಕದ ಪೂರ್ವಬಂಗಾಳದಲ್ಲಿ ಒದಗಿರುವ ವಿಶೇಷಪರಿಸ್ಥಿತಿಯನ್ನೂ ಅದರಿಂದ ನಮ್ಮ ದೇಶದಲ್ಲಿ ಬರಬಹುದಾದ ಕಷ್ಟ ಸಮಸ್ಯೆಗಳನ್ನೂ ಅವರ ಭಾಷಣದಲ್ಲಿ ಪ್ರಸ್ತಾವಿಸಿದ್ದಾರೆ. ಇವೆಲ್ಲವನ್ನೂ ನಾವು ಗಹನವಾಗಿ ಆಲೋಚನೆಮಾಡಿ ಈ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಬೇಕೆಂಬುದನ್ನೂ ಅವರು ಸೂಚಿಸಿದ್ದಾರೆ. ಎಲ್ಲ ದೃಷ್ಟಿಗಳಿಂದ ನೋಡಿದರೂ ನಮ್ಮ ಮಿತ್ರರಾದ ಶ್ರೀ ಭೀಮಪ್ಪನಾಯಕರು ಹೇಳಿದ ಹಾಗೆ, ಶ್ರೀಮನ್ಮಹಾರಾಜರವರು ಇತ್ತಿರುವ ಸಂದೇಶ ಒಂದು ಸರ್ವಾಂಗಸುಂದರವಾದ ಚಿತ್ರದಂತಿದೆ. ಈ ಚಿತ್ರವನ್ನು ಇನ್ನೂ ಉತ್ತಮವಾಗಿ ಮಾಡುವುದು ಪ್ರಜಾಪ್ರತಿನಿಧಿಗಳ ಮತ್ತು ಪ್ರಜೆಗಳೆಲ್ಲರ ಕರ್ತವ್ಯವಾಗಿದೆ. ಆಡಳಿತದ ಜವಾಬ್ದಾರಿ ಕೇವಲ ಸರ್ಕಾರಕ್ಕೆ ಮಾತ್ರ ಸೇರಿದುದು ಎಂಬ ಅಭಿಪ್ರಾಯ ಇದುವರೆಗಿತ್ತು. ಆದರೆ ಈಗ ಈ ಜವಾಬ್ದಾರಿಯನ್ನು ಪ್ರಜೆಗಳೂ ವಹಿಸಬೇಕಾದ ಕಾಲ ಬಂದಿದೆ. ಪ್ರತಿಯೊಬ್ಬ ಪ್ರಜೆಯೂ ಸರ್ಕಾರವೆಂದರೆ ತನಗೂ ಸೇರಿದುದೆಂದು ತಿಳಿದು ಸರ್ಕಾರಕ್ಕೆ ಒದಗುವ ಎಡರು ತೊಡರುಗಳನ್ನು ಬಿಡಿಸಬೇಕಾದ ಕಾಲ ಬಂದಿದೆ. ಈಗ ಉತ್ಪನ್ನವಾಗಿರುವ ಹೊಸ ಸಮಸ್ಯೆಗಳು ಅಧಿಕವಾಗಿವೆ. ಇವುಗಳನ್ನು ಬಿಡಿಸಲು ಇರುವ ಕಷ್ಟವೂ ಹೆಚ್ಚಾಗಿದೆ. ಜನಜೀವನದಲ್ಲಿ ಎಲ್ಲಿ ನೋಡಿದರೂ ಸತ್ಯ ಮತ್ತು ಧರ್ಮದ ಆಚರಣೆಗೆ ಅಡಚಣೆಯಾಗುತ್ತಿದೆ ಎಂಬ ಕೂಗು ಕೇಳಿಬರುತ್ತಿದೆ. ಜೀವನದಲ್ಲಿ ನೈತಿಕ ಮಟ್ಟ ಎಷ್ಟುಮಟ್ಟಿಗೆ ಇರಬೇಕೋ ಅಷ್ಟುಮಟ್ಟಿಗೆ ಇರದೆ ಕ್ಷೀಣವಾಗುತ್ತಿದೆ. ಎಂದು ಜನರು ಹೇಳುತ್ತಿದ್ದಾರೆ. ಇದರಲ್ಲಿ ಸತ್ಯಾಂಶವಿದೆ ಎಂದು ನಾವು ಭಾವಿಸಬೇಕಾಗಿದೆ. ಹೀಗೆ ನೈತಿಕ ಮಟ್ಟ ಇಳಿಯಲು ಕಾರಣಗಳೂ ಇವೆ. ಯುದ್ಧಾನಂತರ ಒದಗಿದ ಅನೇಕ ಸಮಸ್ಯೆಗಳಿಂದ ಜನರ ನೈತಿಕಮಟ್ಟ ಕುಸಿದುಬಿದ್ದಿದೆ. ಅನೇಕ ಜನರು ನೀತಿಬಾಹಿರರಾಗಿದ್ದಾರೆ. ಸಾಮಾನ್ಯವಾಗಿ ಯಾರು ಯಾರು ನೀತಿಮಾರ್ಗದಲ್ಲಿ ಹೋಗುವರೆಂದು ಭಾವಿಸಿದ್ದೆವೋ ಅವರಲ್ಲಿ ಶೇಕಡ ಐವತ್ತರಷ್ಟು ಜನರು ನೀತಿಮಾರ್ಗವನ್ನು ಬಿಟ್ಟು ಹೋಗುತ್ತಿದ್ದಾರೆ. ಹಿಂದೆ ಅನೇಕ ವರ್ತಕರು ಧರ್ಮ ಮತ್ತು ನ್ಯಾಯದ ತಳಹದಿಯ ಮೇಲೆ ವ್ಯಾಪಾರವನ್ನು ನಡೆಸುತ್ತಿದ್ದರು. ಇದು ಜನರಿಗೆ ಗೊತ್ತಿದೆ. ಆದರೆ, ಯುದ್ಧದ ದೆಶೆಯಿಂದ ಜನಜೀವನಕ್ಕೆ ಅವಶ್ಯಕವಾದ ವಸ್ತುಗಳ ಅಭಾವ ವುಂಟಾದುದರಿಂದ ವರ್ತಕರಿಗೆ ಲಾಭದ ಆಶೆ ಹೆಚ್ಚಿ ಅನೀತಿಯ ವ್ಯಾಪಾರಕ್ಕಿಳಿದರು. ಇದರಿಂದ, ಅನೇಕ ಜನರು ಕಷ್ಟನಷ್ಟಗಳಿಗೊಳಗಾಗಿದ್ದಾರೆ. ಆದಕಾರಣ ಈಗ ನಾವು ನೀತಿ ಮತ್ತು ಧರ್ಮದ ಪುನರುಜ್ಜೀವನವಾಗಬೇಕಾದ ಕಾಲದಲ್ಲಿದ್ದೇವೆ. ಜನರನ್ನು ನೀತಿವಂತರನ್ನಾಗಿ ಮಾಡುವ ಕಾರ್ಯ ಶಾಸನಗಳಿಂದ ಮತ್ತು ಶಾಸನ ಸಭೆಗಳಿಂದ ಸಾಧ್ಯವಾಗುವುದಿಲ್ಲ. ಜನರ ನೈತಿಕ ಮಟ್ಟ ಹೆಚ್ಚಲು ಅವಶ್ಯಕವಾದ ವಾತಾವರಣ ದೇಶದಲ್ಲಿ ಹುಟ್ಟಬೇಕಾಗಿದೆ. ಈಗಿನ ವಾತಾವರಣ ನಿವಾರಣೆಯಾದರೆ ಜನರಲ್ಲಿ ನೀತಿ ಹೆಚ್ಚಬಹುದೆಂಬ ಆಶೆಯಿದ್ದರೂ ಕೂಡ ನಾವು ಇಷ್ಟರಲ್ಲೇ ತೃಪ್ತಿಪಟ್ಟುಕೊಳ್ಳುವ ಹಾಗಿಲ್ಲ. ಸಾಧಾರಣವಾಗಿ ನಮ್ಮ ಜನಜೀವನದಲ್ಲಿ ಎಲ್ಲೆಲ್ಲಿ ಜನರಿಗೆ ನೀತಿಮಾರ್ಗವನ್ನು ಬಿಟ್ಟುಹೋಗುವುದಕ್ಕೆ ಅವಕಾಶವಿದೆಯೆಂಬುದನ್ನು ತಿಳಿದು ಅದಕ್ಕೆ ಕಾರಣಗಳೇನೆಂಬುದನ್ನು ವಿಂಗಡಿಸಿ ತಕ್ಕ ನಿವಾರಣೋಪಾಯಗಳನ್ನು ಕಂಡುಹಿಡಿದು ನಮ್ಮ ದೇಶ ಹಿಂದೆ ಯಾವ ಖ್ಯಾತಿಯನ್ನು ಗಳಿಸಿತ್ತೋ ಅದೇ ಖ್ಯಾತಿಯನ್ನು ಮತ್ತೆ ಗಳಿಸಲು ಅದೇ ನೈತಿಕ ಮಟ್ಟಕ್ಕೆ ಮತ್ತೆ ಏರಲು ಎಲ್ಲರೂ ಶ್ರಮಿಸಬೇಕು. ಎಲ್ಲರ ಸಹಾಯ ಸಹಕಾರಗಳೂ ಬೇಕು. ಇದೇ ಮಾತನ್ನು ಶ್ರೀಮನ್ಮಹಾರಾಜರವರು 'ಸತ್ಯಮೇವ ಜಯತೆ' ಎಂದು ಅಪ್ಪಣೆ ಕೊಡಿಸಿದ್ದಾರೆ. ಆರ್ಥಿಕ ಜೀವನದ ಜೊತೆಗೆ ನೈತಿಕ ಜೀವನವೂ ಒಂದುಗೂಡದೇಯಿದ್ದರೆ ನಮ್ಮ ಧರ್ಮಕ್ಕೂ ಸಂಸ್ಕೃತಿಗೂ ಚ್ಯುತಿ ಬರುತ್ತದೆ. ಆರ್ಥಿಕ ಪುನರುಜ್ಜೀವನವಾಗಬೇಕು ಮತ್ತು ಇದಕ್ಕೆ ನೈತಿಕ ಪುನರುಜ್ಜೀವನ ತಳಹದಿಯಾಗಬೇಕು. ನೈತಿಕಮಟ್ಟ ಹೆಚ್ಚದಿದ್ದರೆ ಆರ್ಥಿಕ ಪುನರುಜ್ಜೀವನ ಸಾಧ್ಯವಾಗುವುದಿಲ್ಲ. ಆದುದರಿಂದ ನಾವು ಆರ್ಥಿಕ ಪುನರುಜ್ಜೀವನದ ಯೋಚನೆಮಾಡುವಾಗ ಅದರ ಜೊತೆಗೆ ನೈತಿಕ ಪುನರುಜ್ಜೀವನದ ಕಡೆಗೂ ಗಮನಕೊಟ್ಟು ಜನರಲ್ಲಿ ನೀತಿಯನ್ನು ಹೆಚ್ಚು ಹೆಚ್ಚು ಬೆಳೆಸಿಕೊಂಡು ಬರುವುದಕ್ಕೆ ಎಲ್ಲರೂ ಶ್ರಮಿಸಬೇಕೆಂದು ಸೂಚಿಸುತ್ತೇನೆ. ಶ್ರೀಮನ್ಮಹಾರಾಜರವರೂ ಇದನ್ನೇ ತಮ್ಮ ಭಾಷಣದಲ್ಲಿ ಪ್ರಸ್ತಾವಿಸಿದ್ದಾರೆ. ಇದರ ಕಡೆ ಮಾನ್ಯ ಸದಸ್ಯರೆಲ್ಲರೂ ಗಮನಕೊಟ್ಟು ಸರಿಯಾಗಿ ನೋಡಿಕೊಳ್ಳಬೇಕು. ನಮ್ಮ ದೇಶದ ಸಂಸ್ಕೃತಿ ಮತ್ತು ಆದರ್ಶ ಜೀವನಕ್ಕೆ ಅನುಕೂಲವಾಗುವಂತೆ ಸತ್ಯಮಾರ್ಗವನ್ನು ಹೇಳಿದುದಕ್ಕಾಗಿ ಶ್ರೀಮನ್ಮಹಾರಾಜವರಿಗೆ ನಾವು ವಂದನೆಗಳನ್ನರ್ಪಿಸಬೇಕಾಗಿದೆ. ಆದಕಾರಣ ನಮ್ಮ ಮಹಾರಾಜರವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಮೈಸೂರು ಸರ್ಕಾರದ ಆಡಳಿತದ ರೀತಿ ನೀತಿಗಳನ್ನು ಸ್ಥೂಲವಾಗಿ ಒಳಗೊಂಡಿರುವ ಭಾಷಣವನ್ನು ಶ್ರೀಮನ್ಮಹಾರಾಜರವರು ಈ ಸಭೆಯಮುಂದೆ ಅಪ್ಪಣೆಕೊಡಿಸಿದ್ದಾರೆ. ಈ ಭಾಷಣ ಸ್ವಾಗತಾರ್ಹ ಮತ್ತು ನಮ್ಮೆಲ್ಲರ ಆಲೋಚನಾರ್ಹವೂ ಆಗಿದೆ. ಇಂತಹ ಭಾಷಣವನ್ನು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದುದಕ್ಕಾಗಿ ಅವರಿಗೆ ನಮ್ಮ ವಂದನೆಗಳನ್ನು ಅರ್ಪಿಸುವುದರ ಜೊತೆಗೆ ಸರ್ಕಾರದವರು ಹಾಕಿಕೊಂಡಿರುವ ಮತ್ತು ಅನುಸರಿಸಿಕೊಂಡು ಬರುತ್ತಿರುವ ರೀತಿ ನೀತಿಗಳನ್ನೂ ಮಾರ್ಗವನ್ನೂ ನಾವು ಸ್ವಾಗತಿಸಬೇಕಾಗಿದೆ. ಸರ್ಕಾರದವರು ಇದುವರೆಗೆ ಸಾಧಿಸಿರತಕ್ಕ ವಿಚಾರಗಳು ಮಹತ್ತರವಾದುವೆಂದು ಅವರೇನೂ ಹೇಳಿಕೊಂಡಿಲ್ಲ. ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿರುವ ಹಾಗೆ ಜನಸಾಮಾನ್ಯರ ಜೀವನದ ಮಟ್ಟ ಏರಬೇಕಾದರೆ, ಜನರಿಗೆ ಅನುಕೂಲಗಳೂ ಸೌಕರ್ಯಗಳೂ ಹೆಚ್ಚಬೇಕಾದಗೆ, ಈ ಪ್ರಜಾಸರ್ಕಾರದ ಉದ್ದೇಶ, ಪ್ರಜಾಪ್ರಭುತ್ವದ ಉದ್ದೇಶ ಕಾರ್ಯಗತವಾಗಿ ಅದರಿಂದ ಜನತೆಯ ಸುಖಸಂಪತ್ತು ಹೆಚ್ಚಬೇಕಾದರೆ ಇನ್ನೂ ಅನೇಕ ಕಾರ್ಯಗಳು ನಡೆಯಬೇಕಾಗಿವೆ ಎಂಬ ವಿಷಯ ಸರ್ಕಾರದವರ ಗಮನದಲ್ಲಿದೆ. ಇದಕ್ಕಾಗಿ ಅವರು ಪ್ರಯತ್ನಮಾಡುತ್ತಿದ್ದಾರೆ ಎಂಬುದನ್ನೂ ಅವರು ತಮ್ಮ ಭಾಷಣದಲ್ಲಿ ಅಪ್ಪಣೆಕೊಡಿಸಿದ್ದಾರೆ. ಇದು ನಿಜವಾಗಿಯೂ ಸ್ವಾಗತಾರ್ಹವಾದುದು. ಸರ್ಕಾರದವರು ತಾವು ಎಲ್ಲವನ್ನೂ ಮಾಡಿದ್ದೇವೆಂದು ಹೇಳುವುದಕ್ಕೆ ಬದಲು ಇನ್ನೂ ಮಾಡಬೇಕಾಗಿದೆ, ಇನ್ನೂ ಹೆಚ್ಚುಮಾಡಲು ಪ್ರಯತ್ನಮಾಡುತ್ತೇವೆ ಎಂದು ಸೂಚಿಸಿದ್ದಾರೆ. ಈ ವಿಚಾರವನ್ನು ಶ್ರೀಮನ್ಮಹಾರಾಜರವರು ತಮ್ಮ ಮೆಚ್ಚಿಗೆಯ ರೂಪದಲ್ಲಿ ಹೇಳಿದ್ದಾರೆ. ಸರ್ಕಾರದ ಈ ಆಶೆ ಮತ್ತು ಉದ್ದೇಶ ನೆರವೇರಬೇಕಾದರೆ ಮಹಾಜನರೂ ಸಹಕರಿಸಬೇಕೆಂದು ಸೂಚಿಸಿದ್ದಾರೆ. ಈ ಮಾತನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದುದು ಆವಶ್ಯಕ.

ಪ್ರಜಾಪ್ರಭುತ್ವದಲ್ಲಿ ಸಾಮಾನ್ಯವಾಗಿ ಲಕ್ಷಾಂತರ ಜನರ ಹೆಸರಿನಲ್ಲಿ ಕೆಲವು ಜನರು ಆಡಳಿತಾಧಿಕಾರ ನಡೆಸುವುದೂ ಅಧಿಕಾರ ಚಲಾಯಿಸುವುದೂ ಪದ್ಧತಿ. ಈ ಪದ್ಧತಿಯಲ್ಲಿ ಕೆಲವು ಲೋಪದೋಷಗಳಿರುವುದಕ್ಕೆ ಅವಕಾಶವಿದ್ದೇ ಇದೆ. ಇದರಿಂದಲೇ ಪ್ರಪಂಚವೆಲ್ಲಾ ವಿಖ್ಯಾತರಾದ ಜಾರ್ಜ್ ಬರ್ನಾರ್ಡ್ ಷಾರವರು ಕೂಡ ಈ ಪ್ರಜಾಪ್ರಭುತ್ವದ ವಿಚಾರದಲ್ಲಿ ಒಂದು ಅಭಿಪ್ರಾಯವನ್ನು ಹೇಳಿದ್ದಾರೆ. ಜನರ ಮುಂದೆ ಹೋಗಿ "ನೀವೆಲ್ಲಾ ನಮ್ಮ ಸ್ವಾಮಿಗಳು, ನಮ್ಮ ಯಜಮಾನರು ನೀವು ನಮಗೆ ಓಟು ಕೊಡಿ, ಆಮೇಲೆ ನಾವು ನಿಮ್ಮ ಮೇಲೆ ಆಡಳಿತ ನಡೆಸುತ್ತೇವೆ" ಎಂದು ಕೇಳುವುದು ಪ್ರಜಾಪ್ರಭುತ್ವದ ತಿರುಳು ಎಂದು ಹಾಸ್ಯರೂಪವಾಗಿ ಹೇಳಿದ್ದಾರೆ. ವಾಸ್ತವಾಂಶ ಇರತಕ್ಕದ್ದೂ ಹಾಗೆಯೇ. ಆದರೆ ಅದಕ್ಕಿಂತ ಹೆಚ್ಚಾದಂಥ ಅಥವಾ ಉತ್ತಮವಾದಂಥ ಪದ್ಧತಿ ಪ್ರಪಂಚದಲ್ಲಿ ತಿಳಿಯದಂಥವರಾಗಿರುವುದರಿಂದ ಅಥವಾ ಅನುಭವದಲ್ಲಿ ಅದಕ್ಕಿಂತ ಮೇಲ್ಮಟ್ಟದ ಪದ್ಧತಿ ಅನುಸರಿಸುವುದಕ್ಕೆ ಸಾಧ್ಯವಿಲ್ಲದೆ ಇರುವುದರಿಂದ ಈ ಪ್ರಜಾಪ್ರಭುತ್ವಕ್ಕೆ ಅಂಟಿಕೊಂಡಿರಬೇಕಾಗಿದೆ. ಆದ್ದರಿಂದ ಇದರಲ್ಲಿರತಕ್ಕ ಒಂದು ಲೋಪವನ್ನು ಕೆಲವರು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳಲು ಅವಕಾಶವಾಗಿದೆ. ಸಾಮಾನ್ಯವಾಗಿರತಕ್ಕ ಅಂಶಗಳನ್ನು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವುದು ಮಾನವ ಸ್ವಭಾವ ಎಂದು ಹೇಳಿದರೆ ತಪ್ಪಾಗಲಾರದು. ಕೋಮುವಾರು, ಪಂಗಡವಾರು, ಜಾತಿವಾರು ಸಂಘಗಳನ್ನು ಮಾಡಿಕೊಂಡು, ಅಂಥವುಗಳ ಹೆಸರಿನಲ್ಲಿ ಕೆಲವರು ಅಧಿಕಾರವನ್ನು ಮತ್ತು ಅನುಕೂಲಗಳನ್ನು ಅನುಭವಿಸುತ್ತಾ ಇದ್ದರು. ಈಗ ಕೋಮುವಾರು, ಜಾತಿವಾರು, ಪಂಗಡಗಳ ಅಲ್ಲದೆ ಸಾರ್ವಜನಿಕರ ಹೆಸರಿನಲ್ಲಿ ಅಧಿಕಾರ ನಡೆಸುವಂತಾಗಿದೆ. ಸಾರ್ವಜನಿಕರ ಹೆಸರಿನಲ್ಲಿ ಯಾರು ಅಧಿಕಾರ ನಡೆಸುತ್ತಾ ಇದ್ದಾರೋ ಅವರನ್ನು ಅವಹೇಳನಮಾಡಿ ಅಧಿಕಾರದಿಂದ ತಪ್ಪಿಸಬೇಕೆಂದು ಪ್ರಯತ್ನಿಸುವುದು ಸ್ವಾಭಾವಿಕ. ಆದರೆ ಪ್ರಜಾಪ್ರಭುತ್ವ ತತ್ವವನ್ನು ಪ್ರತಿಪಾದಿಸುವಾಗ ಹತ್ತೂ ಜನರ ಅನುಕೂಲಕ್ಕಾಗಿ, ಸಾರ್ವಜನಿಕರ ಕ್ಷೇಮಕ್ಕಾಗಿ ಎಂದು ಏನು ಹೇಳುತ್ತೇವೆಯೋ ಅದನ್ನು ನಾವು ಅಧಿಕಾರದಲ್ಲಿರಲಿ, ಇಲ್ಲದೇ ಇರಲಿ, ಸಾಧಿಸುವುದಕ್ಕೆ ಸಹಕರಿಸಬೇಕು. ಸಹಾಯಕರಾಗಿ ನಿಂತುಕೊಳ್ಳಬೇಕೆಂಬ ಮನೋಧರ್ಮ ಬೆಳೆಯಬೇಕಾದುದು ಅಗತ್ಯ. ಅದನ್ನೇ ಶ್ರೀಮನ್ ಮಹಾರಾಜರವರು ಒತ್ತಿ ಹೇಳಿದ್ದಾರೆ. ಸರ್ಕಾರದವರು ಕೈಕೊಳ್ಳತಕ್ಕ ಕಾರ್ಯಗಳು ಫಲಿಸಬೇಕಾದರೆ ಜನರು ಸಹಾನುಭೂತಿ, ಸಹಾಯ ನೀಡಬೇಕು. ಉದಾಹರಣೆಗಾಗಿ ಹತೋಟಿ ವಿಷಯ ಹೇಳಿದ್ದಾರೆ. ಜನಜೀವನಕ್ಕೆ ಆವಶ್ಯಕವಾದ ಅನೇಕ ಸಾಮಾನುಗಳ ಮೇಲೆ ಹತೋಟಿ ಆಜ್ಞೆ ಜಾರಿಗೆ ಬಂದಿದೆ. ಅದರ ಪರಿಣಾಮವಾಗಿ ಕಾಳಸಂತೆ ವ್ಯಾಪಾರ, ಲಂಚಕೋರತನ ಹೆಚ್ಚಾಗಿ ಇವತ್ತು ಎಲ್ಲೆಲ್ಲೂ ಅಪಾದನೆಗಳು ಕೇಳುತ್ತಾ ಬರುತ್ತಿವೆ. ಅವು ಆಧಾರ ಸಹಿತವಾಗಿವೆ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಇವತ್ತು ಯಾವ ಉದ್ದೇಶದಿಂದ ಹತೋಟಿ ಆಜ್ಞೆಗಳನ್ನು ಈ ಸರ್ಕಾರದವರಾಗಲೀ ಬೇರೆ ಸರ್ಕಾರದವರಾಗಲೀ ಜಾರಿಗೆ ತರಬೇಕಾಯಿತೋ ಆ ಉದ್ದೇಶವನ್ನು ಸಾಧಿಸಬೇಕಾದರೆ ಜನನಾಯಕರ, ಪಾರ್ಟಿಗಳ, ಸರ್ಕಾರದ ಪಕ್ಷ ಆಗಲೀ ಅಥವಾ ವಿರೋಧ ಪಕ್ಷ ಆಗಲೀ ಎಲ್ಲರ ಸಹಾಯ, ಸಹಕಾರ ಅಗತ್ಯವಾಗಿ ಬೇಕೇ ಬೇಕು. ಈಗ ನಮ್ಮೆಲ್ಲರ ಉದ್ದೇಶ ಏನಾಗಿದೆ! ಇರತಕ್ಕ ವಸ್ತುಗಳನ್ನು ಎಲ್ಲರಿಗೂ ಹಂಚಬೇಕು, ಅನ್ನ ಇಲ್ಲದೆ ಯಾರೂ ಸಾಯಬಾರದು, ಬಟ್ಟೆ ಇಲ್ಲದೆ ಯಾರೂ ಇರಬಾರದು. ಈ ಉದ್ದೇಶವನ್ನು ಸಾಧಿಸುವುದಕ್ಕೆ ಪ್ರಯತ್ನ ಮಾಡುವಾಗ ಲಂಚಕೋರತನ, ಕಾಳಸಂತೆ ಮುಂತಾದುವನ್ನು ಕಂಡರೆ ಅವನ್ನು ತುಳಿಯುವುದಕ್ಕೆ ಪ್ರಯತ್ನ ಮಾಡಬೇಕು. ಸರ್ಕಾರದವರು ಅದನ್ನು ನಿರ್ಮೂಲ ಮಾಡುತ್ತೇವೆ ಎಂಬ ನಿರ್ಧಾರಮಾಡಿದಾಗ, ಸರ್ಕಾರವನ್ನು ಅವಹೇಳನ ಮಾಡಿ, ಸರ್ಕಾರದವರಿಗೆ ಕೆಟ್ಟಹೆಸರು ತಂದು ಆ ಸ್ಥಾನಕ್ಕೆ ತಾವು ಬರಬೇಕೆಂದು ಪ್ರಯತ್ನ ಮಾಡುವುದಾದರೆ ಆ ಉದ್ದೇಶ ಸಾಧನೆಯಾಗಲಾರದು. ಈ ಅಭಿಪ್ರಾಯವನ್ನು ಶ್ರೀಮನ್ ಮಹಾರಾಜರವರು ಮಾಡಿಕೊಂಡಿರುವ ಅಪೀಲಿನಲ್ಲಿ ಕಾಣಬೇಕಾಗಿದೆ. ಅದನ್ನು ನಾವು ಮನಗಾಣಬೇಕು. ಅವರ ಭಾಷಣದಲ್ಲಿ ಸೂಚಿಸಿರತಕ್ಕ ರೀತಿ ನೀತಿಗಳು ಸರ್ಕಾರದವರು ಅನುಸರಿಸಿಕೊಂಡು ಬಂದಿರತಕ್ಕ ರೀತಿ ನೀತಿಗಳೇ ಆಗಿದ್ದರೂ ಸಹ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಜನರು ಏನುಮಾಡಬೇಕೆಂಬುದನ್ನು ಶ್ರೀಮನ್ ಮಹಾರಾಜರವರು ತಮ್ಮ ಭಾಷಣದಲ್ಲಿ ಸೂಚನೆ ಮಾಡಿದ್ದಾರೆ. ಮಹತ್ತರವಾದ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಶ್ರೀಮನ್ ಮಹಾರಾಜರವರ ಆಶಯವನ್ನು ಈಡೇರಿಸಲು ಸರ್ಕಾರದವರಿಗೆ ಸರ್ವ ವಿಧವಾದ ಬೆಂಬಲವನ್ನು ಕೊಡುವುದು ಎಲ್ಲಾ ಪಂಗಡದ ನಾಯಕರ ಕರ್ತವ್ಯವಾಗಿದೆ ಎಂದು ನಾನು ಅರಿಕೆ ಮಾಡಿಕೊಳ್ಳಬೇಕಾಗಿದೆ.

ಶ್ರೀಮನ್ ಮಹಾರಾಜರವರು ಹೇಳಿರತಕ್ಕ ಅನೇಕ ಅಂಶಗಳನ್ನು ನಾನು ಈಗ ವಿವರಿಸುತ್ತಾ ಇಲ್ಲ. ಈ ಹಿಂದೆ ಮಾತನಾಡಿದ ಸ್ನೇಹಿತರು ಮತ್ತು ನಿರ್ಣಯವನ್ನು ಮಂಡಿಸಿದ ಶ್ರೀ ಸುಬ್ರಹ್ಮಣ್ಯರವರು ಅವನ್ನು ತಕ್ಕಮಟ್ಟಿಗೆ ವಿವರಿಸಿದ್ದಾರೆ. ಮುಖ್ಯವಾಗಿ ವ್ಯವಸಾಯಾಭಿವೃದ್ಧಿಗೆ ಸರ್ಕಾರದವರು ಮುಂದೆ ಏನುಮಾಡಬೇಕೆಂದಿದ್ದಾರೆಂಬ ವಿಚಾರದಲ್ಲಿ ಶ್ರೀಮನ್ ಮಹಾರಾಜರವರ ಭಾಷಣದಲ್ಲಿ ಕೆಲವು ಅಂಶಗಳು ಸೂಚಿತವಾಗಿವೆ. ಹೆಚ್ಚು ಆಹಾರ ಬೆಳೆಯುವ ವಿಚಾರದಲ್ಲಿ ಸರ್ಕಾರದವರ ಮಾಡಿರುವ, ಮುಂದೆ ಮಾಡಬೇಕೆಂದಿರುವ ಪ್ರಯತ್ನಗಳು, ಅದರ ಜೊತೆಗೆ ನಮ್ಮ ದೇಶದ ಪರಿಸ್ಥಿತಿ—ಇವುಗಳನ್ನು ಸ್ವಲ್ಪ ಯೋಚಿಸಬೇಕಾಗಿದೆ. ನಮ್ಮ ದೇಶದ ಹಿಂದಿನ ಪದ್ಧತಿ ಬದಲಾವಣೆಯಾಗುತ್ತಿರುವ ಪ್ರಪಂಚದ ಪದ್ಧತಿಗನುಸಾರವಾಗಿ ಬದಲಾವಣೆ ಆಗಬೇಕು. ಈಗ ಎಲ್ಲೆಲ್ಲೂ ಜನ ಜೀವನ ಬದಲಾವಣೆಯಾಗುತ್ತಿದೆ. ಜನಗಳ ಮನೋಧರ್ಮ ಬದಲಾವಣೆಯಾಗುತ್ತಿದೆ. ಹಿಂದೆ ಯಾವ ಒಂದು ವಿಧವಾದ ಸಂಪ್ರದಾಯ ನಡೆದುಕೊಂಡು ಬಂದಿದೆಯೋ, ಆ ಕಾಲದಲ್ಲಿ ವ್ಯವಸಾಯದ ಪದ್ಧತಿ ಯಾವ ರೀತಿ ಇತ್ತೋ ಅದನ್ನೇ ಅನುಸರಿಸಿಕೊಂಡು ಹೋದರೆ ವ್ಯವಸಾಯ ಅಭಿವೃದ್ಧಿಗೆ ಬರಲಾರದು. ಮತ್ತು ಹೆಚ್ಚು ಜನ ವ್ಯವಸಾಯದಲ್ಲಿ ಕಷ್ಟಪಟ್ಟು ಕೆಲಸ ಮಾಡಲಾರರು ಎಂಬ ಸೂಚನೆ ಬರುತ್ತಾ ಇದೆ. ಆದ್ದರಿಂದ ಕಾಲಧರ್ಮಕ್ಕನುಸಾರವಾಗಿ ವ್ಯವಸಾಯದ ಕ್ರಮವನ್ನು ಸಹ ಬದಲಾಯಿಸಬೇಕಾಗಿದೆ. ಅದನ್ನು ಸರ್ಕಾರದವರು ಮುಂದಾಲೋಚನೆ ಮಾಡಿ ಎಷ್ಟುಮಟ್ಟಿಗೆ ಸಾಧ್ಯ ಅಥವಾ ಸಾಧ್ಯವಿಲ್ಲ ಎಂಬುದನ್ನು ನೋಡುವುದಕ್ಕೆ ಸಹಕಾರ ತತ್ವದ ಮೇಲೆ ಕೆಲವು ಕ್ಷೇತ್ರಗಳನ್ನು ನಡೆಸುವುದಕ್ಕೆ ಪ್ರಯತ್ನಮಾಡಿದ್ದಾರೆ. ಈ ವಿಚಾರವನ್ನು ಶ್ರೀಮನ್ ಮಹಾರಾಜರವರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಇದು ಬಹಳ ಮುಖ್ಯವಾದ ವಿಚಾರ. ಈ ಸಹಕಾರ ತತ್ವದ ಮೇಲೆ ವ್ಯವಸಾಯ ನಡೆಸಬೇಕಾದರೆ ಅದಕ್ಕೆ ಜನಗಳ ಮನೋಭಾವ ಬದಲಾವಣೆಯಾಗಬೇಕು. ಬದಲಾವಣೆಯಾಗಲು ತಕ್ಕಮಟ್ಟಿಗೆ ತಿಳಿವಳಿಕೆ ಕೊಡತಕ್ಕ ಏರ್ಪಾಡು ಆಗಬೇಕು. ಅದಕ್ಕೆ ಜನಗಳು ಮತ್ತು ಜನನಾಯಕರು ಸಹಕಾರ ಮಾಡದಿದ್ದರೆ ವಿಫಲವಾಗುತ್ತದೆ. ಆಗ ಈ

ಈ ಸರ್ಕಾರ ಬೇಡ, ಬೇರೆ ಸರ್ಕಾರ ಬರಬೇಕೆಂಬ ಮಾತಿಗೆ ಅವಕಾಶವಾಗುತ್ತದೆ. ಆದ್ದರಿಂದ ಉದ್ದೇಶವೇನೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಉದ್ದೇಶ ಸಾಧನೆಗೆ ಎಷ್ಟು ಸಹಕಾರಬೇಕೋ ಅಷ್ಟನ್ನೂ ಮಾಡಬೇಕೆಂಬ ಮನೋಭಾವವನ್ನು ಬೆಳೆಸಿಕೊಂಡು ಬರಬೇಕು. ವ್ಯವಸಾಯಾಭಿವೃದ್ಧಿಗಾಗಿ ಮೈಸೂರು ಸರ್ಕಾರದವರು ಅನೇಕ ಕೆರೆ, ಕಾಲುವೆ, ಕಟ್ಟೆಗಳನ್ನು ದುರಸ್ತು ಮಾಡಿಸುವುದಕ್ಕೆ ಪ್ರಯತ್ನಪಟ್ಟು ಹೊಸದಾಗಿ 6 ತಿಂಗಳು ಅಥವಾ ಒಂದು ವರ್ಷದೊಳಗಾಗಿ ಕೆಲಸ ಮುಗಿಸಿ ವ್ಯವಸಾಯಕ್ಕೆ ನೀರಿನ ಸೌಕರ್ಯವನ್ನೊದಗಿಸಬೇಕೆಂದು ಪ್ರಯತ್ನಮಾಡಿದ್ದಾರೆ. ಅದು ಯಶಸ್ವಿಯಾಗುವುದಕ್ಕೆ ಮನಸ್ಸುಮಾಡಬೇಕು. ಬರೀ ಸರ್ಕಾರದವರು ಏನೇ ಪ್ರಯತ್ನಮಾಡಿದರೂ ಜನಗಳ ಸಹಾಯವಿಲ್ಲದೆ ಅದು ಫಲಕಾರಿ ಆಗುವುದಿಲ್ಲ. ಈ ಸಂಬಂಧದಲ್ಲಿ ಒಂದು ಮುಖ್ಯ ವಿಚಾರವೆಂದರೆ ಹೆಚ್ಚು ಆಹಾರ ಬೆಳೆಯುವ ಪ್ರಯತ್ನದಲ್ಲಿ ನಮ್ಮ ಸಂಸ್ಥಾನದವರು ಕೇಂದ್ರ ಸರ್ಕಾರದವರ ಸಹಕಾರ, ಸಹಾನುಭೂತಿ, ಸಹಾಯಗಳನ್ನು ಬೇರೆ ಯಾವ ಸಂಸ್ಥಾನಗಳವರು ಪಡೆಯುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಪಡೆದಿದ್ದಾರೆಂಬುದು ಅಭಿನಂದನೀಯವಾಗಿದೆ. ನಮ್ಮ ದೇಶದಲ್ಲಿರತಕ್ಕ ನಾಲೆಗಳ ಮತ್ತು ಕೆರೆಗಳ ದುರಸ್ತು ಮಾಡುವುದು, ಹೂಳು ತೆಗೆಸುವುದು, ಇವುಗಳಿಗೆ ಆಗತಕ್ಕ ಖರ್ಚಿನಲ್ಲಿ ಇಂಡಿಯಾ ಸರ್ಕಾರದವರು ಶೇಕಡ 50 ರಷ್ಟನ್ನು ವಹಿಸಿಕೊಳ್ಳುವುದಕ್ಕೆ ಒಪ್ಪಿದ್ದಾರೆ. ಆ ರೀತಿ ಬೇರೆ ಯಾವ ಸಂಸ್ಥಾನಗಳಿಗೂ ತೋರಿಸದೇ ಇರುವ ರಿಯಾಯಿತಿಯನ್ನು ಮೈಸೂರು ಸಂಸ್ಥಾನಕ್ಕೆ ತೋರಿಸಿದ್ದಾರೆ. ಇದು ಬಹಳ ಹೆಚ್ಚಿನದು. ಅದಕ್ಕಾಗಿ ಇಂಡಿಯಾ ಸರ್ಕಾರದವರಿಗೆ ನಾವು ಚಿರಋಣಿಗಳಾಗಿದ್ದೇವೆ. ಅಷ್ಟೇ ಅಲ್ಲದೆ ನಮ್ಮ ಸರ್ಕಾರದವರನ್ನೂ ಸಹ ವಂದಿಸಬೇಕಾಗಿದೆ, ಏಕೆಂದರೆ ವಾಸ್ತವಾಂಶಗಳನ್ನು ಸರಿಯಾಗಿ ಮನಗಾಣುವಂತೆ ಕೇಂದ್ರ ಸರ್ಕಾರದವರಿಗೆ ವಿವರಿಸಿ, ನಮ್ಮ ಕೆರೆ, ನಾಲೆಗಳ ದುರಸ್ತಿಗಾಗಿ ನೀವು ಸಹಾಯಮಾಡತಕ್ಕ ಅಗತ್ಯ ಇದೆ, ಇಲ್ಲದೆ ಇದ್ದರೆ ಆಹಾರದ ಅಭಾವವಾಗಬಹುದು ಎಂಬುದನ್ನು ಮನಗಾಣಿಸಿ ಈ ರಿಯಾಯಿತಿಯನ್ನು ಪಡೆದುಕೊಂಡಿದ್ದಾರೆ. ಹೀಗೆ ಸರ್ಕಾರದವರು ಅನೇಕ ಭಾಗದಲ್ಲಿ ನಿರ್ವಂಚನೆಯಿಂದ ಎಷ್ಟುಮಟ್ಟಿಗೆ ಜನಗಳ ಹಿತರಕ್ಷಣೆ ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡಲು ಮುಂದಾಲೋಚನೆಯಿಂದ ಕಾರ್ಯಕ್ರಮ ಕೈಕೊಂಡಿದ್ದಾರೆ. ಅದನ್ನು ನೆರವೇರಿಸಲು ಮಹತ್ ಪ್ರಯತ್ನ ಮಾಡುತ್ತಾ ಇದ್ದಾರೆ. ಅದು ಸಾರ್ಥಕವಾಗುವುದಕ್ಕೆ ಸಹಕಾರ ನೀಡಬೇಕಾದ್ದು ನಮ್ಮ ಕರ್ತವ್ಯವಾಗಿದೆ. ಶ್ರೀಮನ್ಮಹಾರಾಜರವರು ಸರ್ಕಾರದ ಕಾರ್ಯದಲ್ಲಿ ಜನಗಳೂ ತಮ್ಮ ಸಹಕಾರವನ್ನು ನೀಡಬೇಕೆಂದು ಅಪೀಲುಮಾಡಿಕೊಂಡಿದ್ದಾರೆ. ಅದಕ್ಕಾಗಿ ಶ್ರೀಮನ್ಮಹಾರಾಜರವರಿಗೆ ಕೃತಜ್ಞರಾಗಿರಬೇಕಾಗಿದೆ. ದೇಶದಲ್ಲಿ ಶಾಂತಿ ನೆಮ್ಮದಿಗಳಿಗೆ ಭಂಗ ಬಾರದಂತೆ ನೋಡಿಕೊಳ್ಳಲು ಸರ್ಕಾರದವರು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದಾರೆ ಎಂದು ಶ್ರೀಮನ್ಮಹಾರಾಜರವರು ಅಭಯ ಪ್ರಧಾನ ಮಾಡಿದ್ದಾರೆ. ಇದು ಮೈಸೂರಿನ ಜನರಿಗೆ ಬಹಳ ಸಂತೋಷವನ್ನು ಉಂಟುಮಾಡತಕ್ಕದ್ದಾಗಿದೆ. ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಈ ದಿನ ಭಾರತದ ಪೂರ್ವದಲ್ಲಿ ದುರ್ಘಟನೆಗಳು ನಡೆಯುತ್ತಾ ಇದ್ದು, ಜನಗಳ ಮನಸ್ಸಿನಲ್ಲಿ ಕಳವಳ ವುಂಟಾಗಿದೆಯೆಂದು ಹೇಳಿದರು. ಭಾರತದ ಪೂರ್ವ ದಿಕ್ಕಿನಲ್ಲೇ ಅಲ್ಲ, ಬೊಂಬಾಯಿ, ದೆಹಲಿ ಮುಂತಾದ ಕಡೆಗಳಲ್ಲೆಲ್ಲಾ ಅಲ್ಲಿ ಇಲ್ಲಿ ಸಣ್ಣ ಪುಟ್ಟ ದರೋಡೆ, ದಂಗೆಗಳು ನಡೆಯುತ್ತಾ ಇವೆ. ಉತ್ತರ ಪ್ರದೇಶದ ಕೆಲವು ಸಂಸ್ಥಾನಗಳಲ್ಲಿ ಎಷ್ಟು ಖೂನಿಗಳು ಆದುವು, ಎಷ್ಟು ದರೋಡೆಗಳು ಆದುವು ಎಂಬುದು ನಿನ್ನೆ ಮತ್ತು ಇವತ್ತಿನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಈಗ ಎಲ್ಲೆಲ್ಲೂ ಜನಜೀವನ ಕಲಕಿ ಹೋಗಿದೆ ಮತ್ತು ಜನಗಳಲ್ಲಿ ಕಳವಳ ಎದ್ದು ಕಾಣುತ್ತಿದೆ. ಇಂಥಾ ಸಂದರ್ಭದಲ್ಲಿ ಸರ್ಕಾರದವರು ಬಹಳ ಬಿಗಿಯಾಗಿ, ಎಚ್ಚರಿಕೆಯಿಂದ ಕಾರ್ಯ ನಡೆಸುತ್ತಾರೆ, ಅವಶ್ಯಕವಾದರೆ ಕ್ರೂರವಾದ ಕಾರ್ಯಕ್ರಮವನ್ನು ಅನುಸರಿಸುವುದಕ್ಕೆ ಸರ್ಕಾರದವರು ಸಿದ್ಧವಾಗಿದ್ದಾರೆ ಎಂಬುದನ್ನೂ ಶ್ರೀಮನ್ಮಹಾರಾಜರವರು ಅವರ ಭಾಷಣದಲ್ಲಿ ತಿಳಿಸಿದ್ದಾರೆ. ಅದು ತಪ್ಪಿಸುವುದಕ್ಕೆ ಸಹಕಾರಿಯಾಗಿದೆ. ಅದಕ್ಕಾಗಿ ಶ್ರೀಮನ್ಮಹಾರಾಜರವರಿಗೆ ಕೃತಜ್ಞರಾಗಿರಬೇಕು. ಸರ್ಕಾರದವರು ಗಟ್ಟಿ ಮನಸ್ಸಿನ ನಿರ್ಧಾರ ಮಾಡಬೇಕೆಂದು ಹೇಳಿ ಅವರ ಕಾರ್ಯ ಯಶಸ್ವಿಯಾಗುವುದಕ್ಕೆ ನಾವೆಲ್ಲರೂ ಬೆಂಬಲ ನೀಡಬೇಕೆಂದು ಹೇಳುತ್ತೇನೆ. ಎಲ್ಲಾ ಅಂಶಗಳ ದೃಷ್ಟಿಯಿಂದಲೂ ಶ್ರೀಮನ್ಮಹಾರಾಜರವರ ಭಾಷಣ ಸ್ವಾಗತಾರ್ಹವಾದದ್ದು. ಅದಕ್ಕಾಗಿ ಶ್ರೀಮನ್ಮಹಾರಾಜರವರಿಗೆ ನಮ್ಮ ಕೃತಜ್ಞತೆಯನ್ನು ಈ ನಿರ್ಣಯದ ಮೂಲಕ ಸೂಚಿಸಬೇಕಾದ್ದು ಅವಶ್ಯಕವಾಗಿದೆ. ಹಾಗೆಯೇ ಮೈಸೂರು ಸರ್ಕಾರದವರಿಗೂ ಅಭಿನಂದಿಸಬೇಕಾದ್ದು ನಮ್ಮ ಕರ್ತವ್ಯವಾಗಿದೆಯೆಂದು ಭಾವಿಸುತ್ತೇನೆ. ಇಷ್ಟು ಹೇಳಿ ಈ ನಿರ್ಣಯವನ್ನು ಈ ಸಭೆಯಲ್ಲಿ ಅವಿರೋಧವಾಗಿ ಅಂಗೀಕಾರಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಸ್ವಾಮಿ, ಇಡೀ ಭರತಖಂಡದ ಭೂಪಟವೇ ಬದಲಾವಣೆಯಾದನಂತರ ನಮ್ಮ ಹೊಸ ರಾಜ್ಯಾಂಗ ರಚನೆಯ ಪ್ರಕಾರ ಶ್ರೀಮನ್ಮಹಾರಾಜರವರು ನಿನ್ನೆಯ ದಿವಸ ತಮ್ಮೆಲ್ಲರ ಸಮ್ಮುಖದಲ್ಲಿ ತಮ್ಮ ಅಮೋಘವಾದ ಭಾಷಣವನ್ನು ಅಪ್ಪಣೆ ಕೊಡಿಸತಕ್ಕ ಕಾಲದಲ್ಲಿ ನಮ್ಮ ಸಂಸ್ಥಾನದಲ್ಲಿ ಈ ಹಿಂದೆ ನಡೆದಿರುವ ಕೆಲಸಗಳು ಮತ್ತು ಮುಂದೆ ಇನ್ನೂ ಏನೇನು ನಡೆಯಬೇಕಾದ ಕೆಲಸಗಳು ಇರುತ್ತವೆಂಬುದನ್ನು ತಿಳಿಸುವ ಉದ್ದೇಶದಿಂದಲೇ ಈ ಅಧಿವೇಶನವನ್ನು ಕರೆಯಲಾಗಿದೆಯೆಂದು ಅವರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿರುವುದು ನಮ್ಮೆಲ್ಲರಿಗೂ ಕೂಡ ಹೆಚ್ಚಿನ ಸಂತೋಷವನ್ನುಂಟುಮಾಡಿದೆ. ಅವರು ಅಪ್ಪಣೆ ಕೊಡಿಸಿರತಕ್ಕ ಭಾಷಣವನ್ನು ಒಂದು ಸಾರಿಯಲ್ಲ ನೂರಾರು ಸಾರಿ ಓದಿದಾಗ್ಯೂ ಅದು ಎಷ್ಟು ಅಮೋಘವಾದುದೆಂಬುದನ್ನು ತಿಳಿಯುವುದು ಬಹಳ ಹೆಚ್ಚಿನ ವಿಚಾರವಾಗಿರುತ್ತೆ. ಅದರಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪಿಸುವುದರ ಮೂಲಕ ದೇಶದ ಅನೇಕ ಆಗುಹೋಗುಗಳನ್ನು ತಿಳಿಸುತ್ತ ಹಿಂದೆ ಏನೇನು ನಡೆದವು ಮತ್ತು ಮುಂದೆ ಯಾವರೀತಿ ದೇಶ ಮುಂದುವರಿಯಲು ನಡೆದುಕೊಂಡು ಹೋಗಬೇಕೆಂಬ ಅಂಶವನ್ನು ಅವರು ನಮ್ಮ ಮುಂದಿಟ್ಟಿದ್ದಾರೆ. ಬೇರೆ ದೇಶಗಳಲ್ಲಿ ಎಲ್ಲಿಯೂ ಇಲ್ಲದೆ ಇರತಕ್ಕ ಒಂದು ವಿಶೇಷ ವೈಶಿಷ್ಟ್ಯವನ್ನುಳ್ಳ ಆದಾಯ-ವ್ಯಯದ ಬಡ್ಜೆಟ್ಟನ್ನು ನಮ್ಮ ಸರ್ಕಾರದವರು ತಯಾರಿಸುತ್ತಿರುವುದು ಒಂದು ಅಮೋಘವಾದ ವಿಚಾರವೆಂಬುದಾಗಿ ಅವರು ವ್ಯಕ್ತಪಡಿಸಿದ್ದಾರೆ. ಆರ್ಥಿಕ ದುಸ್ಥಿತಿಯನ್ನು ತಡೆಗಟ್ಟಲು ಆದಾಯಕ್ಕಿಂತಲೂ ವ್ಯಯ ಜಾಸ್ತಿಯಾಗಿರುವುದನ್ನು ತಡೆಗಟ್ಟಲು ಮತ್ತು ಅದನ್ನು ಸರಿದೂಗಿಸಲು ನಮ್ಮ ಸರ್ಕಾರದವರು ಎಲ್ಲ ಪ್ರಯತ್ನಗಳನ್ನೂ ಮುಂದೆ ಕೈಗೊಳ್ಳುವವರಾಗಿರುತ್ತಾರೆಂದು ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲೇ ಅಪ್ಪಣೆ ಕೊಡಿಸಿದ್ದಾರೆ.

ನಮ್ಮ ದೇಶಕ್ಕೆ ಬೇಕಾಗತಕ್ಕಂಥ ಆಹಾರ ಧಾನ್ಯಗಳನ್ನು ಹೊರಗಡೆಯಿಂದ ತರಿಸಿಕೊಳ್ಳಲು 1942ನೆಯ ಇಸವಿ ಆಗಸ್ಟ್ ಮಾಹೆ 9ನೆಯ ತಾರೀಖಿನಿಂದ ಸುಮಾರು 7 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿ ಬಂದಿತು. ಈ ಆಹಾರ ಸಾಮಗ್ರಿಗಳನ್ನು ಇನ್ನುಮುಂದಕ್ಕೂ ಹೊರಗಿನಿಂದ ತರಿಸುವುದರ ಸಂಬಂಧವಾಗಿ ನಮ್ಮ ಸರ್ಕಾರದ ಹಣಕಾಸಿನ ಸ್ಥಿತಿ ಕಷ್ಟಕ್ಕೆ ಈಡಾಗಬಹುದೆಂದೂ ಆ ಬಗ್ಗೆ ಅದನ್ನು ಸರಿಗಟ್ಟಿಕೊಂಡು ನಮಗೆ ಬೇಕಾಗುವಷ್ಟು ದವಸ ಧಾನ್ಯಗಳನ್ನು ನಾವು ಇಲ್ಲಿಯೇ ಬೆಳೆದುಕೊಳ್ಳಲು ಸಹಾಯಕವಾಗುವಂತೆ ಮಾಡಲು ಸರ್ಕಾರದವರು ಕೈಗೊಳ್ಳುವ ಕಾರ್ಯಗಳ ಸಂಬಂಧವಾಗಿ ಎಲ್ಲಾ ಜನರೂ ಸಹಕರಿಸಿ ನಡೆಯದೇ ಹೋದರೆ ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆಯು ಅಷ್ಟು ಫಲಕಾರಿಯಾಗಲೀ ಅಥವಾ ಯಶಸ್ವಿಯಾಗಲೀ ಆಗಲಾರದೆಂದು ಅವರು ಅಪ್ಪಣೆ ಕೊಡಿಸಿದ್ದಾರೆ. ಆ ಉದ್ದೇಶದಿಂದ ನಮ್ಮ ಸರ್ಕಾರದವರು ಈಗಾಗಲೇ ಆಹಾರ ಉತ್ಪನ್ನದ ವಿಷಯದಲ್ಲಿ ನಾವು 1951ನೆಯ ಇಸವಿಯೊಳಗಾಗಿ ಸ್ವಪರಿಪೂರ್ಣತೆಯನ್ನು ಹೊಂದಲು ದೃಢನಿಶ್ಚಯವನ್ನು ಮಾಡಿದ್ದಾರೆ. ಈ ಬಗ್ಗೆ ಮಹಾಜನಗಳ ಸಹಕಾರ ದೊರೆಯದೆ ಹೋದರೆ ಮುಂದೆ ಇದರಿಂದ ಅನೇಕ ತೊಂದರೆಗಳು ಉಂಟಾಗಬಹುದು. ಹಾಗೆ ಉಂಟಾಗಬಹುದಾದ ಸ್ವಾಭಾವಿಕ ತೊಂದರೆಗಳನ್ನು ತಡೆಗಟ್ಟಲು ನಮ್ಮ ಸರ್ಕಾರದವರು ಕೆರೆ, ಕಾಲುವೆ ಮತ್ತು ವ್ಯವಸಾಯಾಭಿವೃದ್ಧಿ ವಿಷಯಗಳಲ್ಲಿ ಈಗಾಗಲೇ ಹೆಚ್ಚಿನ ಆಸಕ್ತಿ ವಹಿಸಿ ವಿಶೇಷ ಹಣವನ್ನು ಖರ್ಚುಮಾಡಲು ನಿರತರಾಗಿರುವುದರಿಂದ ಮುಂದಿನ 2 ವರ್ಷಗಳೊಳಗಾಗಿ ಈ ಆಹಾರ ಪರಿಸ್ಥಿತಿಯನ್ನು ಹತೋಟಿಗೆ ತರುತ್ತಾರೆಂಬ ಸೂಚನೆಗಳು ಕಂಡುಬರುತ್ತವೆಯೆಂಬುದಾಗಿ ನಿನ್ನೆಯ ದಿವಸದ ಭಾಷಣದಲ್ಲಿ ಅವರು ಅಪ್ಪಣೆ ಕೊಡಿಸಿದ್ದಾರೆ.

ನಮ್ಮ ಸಂಸ್ಥಾನದಲ್ಲಿ ಜಮೀನು ಕಂದಾಯ ಪದ್ಧತಿ ಇರುವಂತೆ ಮತ್ತೆಲ್ಲಿಯೂ ಇರುವುದಾಗಿ ಕಾಣುತ್ತಿಲ್ಲ. ಈಗ ಈ ಸಂಬಂಧವಾಗಿ ಇರತಕ್ಕ ಅಲ್ಪಸ್ವಲ್ಪ ನ್ಯೂನಾತಿರಿಕ್ತಗಳನ್ನು ಸರಿಪಡಿಸಲು ಈಗಾಗಲೇ ನಮ್ಮ ಸರ್ಕಾರದವರು ಒಂದು ಜಮೀನು ಸುಧಾರಣ ಸಮಿತಿಯನ್ನು (ಭೂಕಂದಾಯ ಪರಿಶೀಲನಾ ಸಮಿತಿ) ಏರ್ಪಾಡು ಮಾಡಿ, ಆ ಬಗ್ಗೆ ಅವರ ಸಲಹೆಗಳನ್ನು ನಿರೀಕ್ಷಿಸುತ್ತಿದ್ದಾರೆ. ಹೀಗೆ ಮಾಡಿರುವುದು ಬೇರೆ ಎಲ್ಲಿಯೂ ಇಲ್ಲ. ಇನ್ನು ಕೆಲವು ದಿವಸಗಳೊಳಗಾಗಿ ಸದರಿ ಸಮಿತಿಯವರು ತಮ್ಮ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಕಳುಹಿಸತಕ್ಕವರಾಗಿದ್ದಾರೆಂದೂ, ಅವು ಬಂದನಂತರ ಸೂಕ್ತ ಕಾರ್ಯಕ್ರಮವನ್ನು ಕೈಗೊಳ್ಳುವವರಾಗಿದ್ದಾರೆಂದೂ ಕೂಡ ನೆನ್ನೆಯ ಭಾಷಣದಲ್ಲಿ ತಿಳಿಸಲಾಗಿದೆ.

ಇನ್ನು ನಾಲ್ಕನೆಯದಾಗಿ, ನಮ್ಮ ಮೈಸೂರು ಸಂಸ್ಥಾನದಲ್ಲಿ ಬರುತ್ತಿರುವ ಉತ್ಪತ್ತಿಯ ಶೇಕಡ ನಾಲ್ಕನೆಯ ಒಂದು ಭಾಗವನ್ನು ಅಂದರೆ ಸುಮಾರು 2¼ ಕೋಟಿಗಳಷ್ಟು ಹಣವನ್ನು ವಿದ್ಯಾಭಿವೃದ್ಧಿಗಾಗಿ ನಮ್ಮ ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಈ ವಿದ್ಯಾಭ್ಯಾಸದ ಪ್ರಗತಿಗಾಗಿ ನಮ್ಮ ಸರ್ಕಾರ ಮಾಡುತ್ತಿರುವಷ್ಟು ಖರ್ಚನ್ನು ಇಡೀ ಭಾರತದಲ್ಲಿ ಇನ್ನೆಲ್ಲಿಯೂ ಮಾಡುತ್ತಿಲ್ಲ. ಕಾಂಗ್ರೆಸ್ ಸರ್ಕಾರ ಸ್ಥಾಪನೆಯಾದ ನಂತರ ಅಸಂಖ್ಯಾತ ಪಾಠಶಾಲೆಗಳನ್ನು ಅಂದರೆ ಮಾಧ್ಯಮಿಕ ಶಾಲೆಗಳನ್ನು ಹೈಸ್ಕೂಲುಗಳನ್ನು ಮತ್ತು ಕಾಲೇಜುಗಳನ್ನು ಎಲ್ಲಾ ಕಡೆಯೂ ತೆರೆದಿದ್ದಾರೆ. ಹಾಗೆ ಈ ಸರ್ಕಾರ ಅಧಿಕಾರಕ್ಕೆ ಬಂದನಂತರ ಜಾರಿಗೆ ತಂದಿರುವಷ್ಟು ಮಾಧ್ಯಮಿಕ, ಪ್ರೌಢ ಮತ್ತು ಕಾಲೇಜುಗಳನ್ನು ಹಿಂದಿದ್ದ ಸರ್ಕಾರ ಎಷ್ಟು ಮಾಡಿತ್ತೋ ಅದಕ್ಕಿಂತಲೂ ಇವು ಹೆಚ್ಚಾಗಿರುತ್ತವೆಯೆಂದು ಹೇಳಬಹುದಾಗಿದೆ. ಈಗ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಇಂಟರ್‌ಮೀಡಿಯಟ್ ಕಾಲೇಜು, ಕೆಲವು ಜಿಲ್ಲೆಗಳಲ್ಲಿ ಎರಡೆರಡು ಕೂಡ ಇರುತ್ತವೆ. ಇನ್ನು ಪ್ರತಿಯೊಂದು ಟೌನ್ ಮತ್ತು ಜಿಲ್ಲಾ ಪ್ರದೇಶಗಳಲ್ಲಿ ತೆರೆದಿರುವ ಹೈಸ್ಕೂಲುಗಳ ಸಂಖ್ಯೆ ಅಪರಿಮಿತವಾಗಿದೆ. ಇದನ್ನೆಲ್ಲಾ ನೋಡಿದರೆ ಭರತಖಂಡದಲ್ಲೇ ಇಷ್ಟು ವಿದ್ಯಾಭಿವೃದ್ಧಿಗಾಗಿ ವಿಶೇಷ ಆಸಕ್ತಿ ವಹಿಸುತ್ತಿರುವುದು ಎಲ್ಲಿಯೂ ಕಂಡುಬರುತ್ತಿಲ್ಲ. ಹೀಗೆ ವಿದ್ಯಾಭ್ಯಾಸದ ಪ್ರಗತಿಯನ್ನು ಪ್ರಸ್ತಾಪಿಸುತ್ತ ಇದರಲ್ಲಿ qualitative ವಿದ್ಯಾಭಿವೃದ್ಧಿ ಅಂದರೆ ದೇಶಕ್ಕೆ ದುಡಿಯುವಂಥ ಮತ್ತೂ ಗುಣವಂತರಾದಂಥವರನ್ನು ಹೆಚ್ಚುಮಾಡುವಂಥ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತರಬೇಕೆಂದು ತಿಳಿಸಿರುವುದು ಬಹಳ ಅಮೋಘವಾದ ವಿಷಯ.

ಶ್ರೀಮನ್ಮಹಾರಾಜರವರು ಜನಾರೋಗ್ಯ ವಿಷಯದಲ್ಲೂ ಕೂಡ ಪ್ರಸ್ತಾಪಿಸುತ್ತ ಹೆಲ್ತ್ ಯೂನಿಟ್ಟಿನ ವಿಚಾರದಲ್ಲಿ ನಮ್ಮ ಸರ್ಕಾರದವರು ಕೈಗೊಂಡಿರುವ ಕಾರ್ಯಾಚರಣೆಗಳಿಂದ ದೇಶಕ್ಕೆ ಬಹಳ ಪರಿಣಾಮಕಾರಿಯಾದ ಉಪಕಾರ ಉಂಟಾಗಿದೆಯೆಂದು ತಿಳಿಸಿದ್ದಾರೆ. ನಮಗೆ ಹಣದ ಅಭಾವ ಒದಗುವ ಸಂಭವವಿದ್ದಾಗ್ಯೂ ನಮ್ಮ ಸರ್ಕಾರದವರು ಜನಾರೋಗ್ಯವನ್ನು ಕಾಪಾಡುವುದಕ್ಕೆ ಕೈಗೊಂಡಿರುವ ಕಾರ್ಯಕ್ರಮಗಳಿಂದ ಉಂಟಾಗಿರುವ ಅನುಕೂಲಗಳು ಅಷ್ಟಿಷ್ಟಲ್ಲ. ನಾವು ಮಲೇರಿಯಾ ರೋಗದಿಂದ ನರಳುತ್ತಿದ್ದವರ ಅಂಕಿ ಅಂಶಗಳನ್ನು ಗಮನಿಸಿದರೆ ಹಿಂದೆ 100ಕ್ಕೆ 50ರಂತೆ ಆ ರೋಗದಿಂದ ನರಳುತ್ತಿದ್ದ ಮಲೇರಿಯಾ ಪ್ರದೇಶಗಳಲ್ಲಿ ಈಗ 100ಕ್ಕೆ 10 ಕೂಡ ನರಳುತ್ತಿಲ್ಲವೆಂದು ಕಂಡುಬರುತ್ತಿದೆ. ಆದುದರಿಂದ ಸರ್ಕಾರದವರು ಹೆಚ್ಚು ಹೆಚ್ಚಾಗಿ ಈ ಹೆಲ್ತ್ ಯೂನಿಟ್ಟುಗಳನ್ನು ಸ್ಥಾಪಿಸಿರುವುದು ಬಹಳ ಶ್ಲಾಘನೀಯವಾದ ಮತ್ತು ಸಂತೋಷಕರವಾದ ವಿಷಯ. ಇದು ಬಹಳ ಆಶಾದಾಯಕವಾಗಿದೆ. ಇದರಿಂದ ದೇಶದ ಮೂಲೆ ಮೂಲೆಗಳಲ್ಲಿದ್ದ ಪರಿಸ್ಥಿತಿ ಬಹಳಮಟ್ಟಿಗೆ ಈಗ ಉತ್ತಮಗೊಳ್ಳುತ್ತಿದೆ. ಮಲೆನಾಡಿನಲ್ಲಿ ಮತ್ತು ಮಲೇರಿಯಾ ಹಾವಳಿ ಇರತಕ್ಕ ಪ್ರದೇಶಗಳಲ್ಲಿ ಹೆಚ್ಚು ಹೆಲ್ತ್ ಯೂನಿಟ್ಟುಗಳನ್ನು ತೆರೆಯುವುದರಿಂದ ಅಲ್ಲಿನ ಜನಾರೋಗ್ಯವನ್ನು ಕಾಪಾಡಿ ತನ್ಮೂಲಕ ಅಲ್ಲಿಯ ಕೂಲಿಗಾರರ ಸಮಸ್ಯೆ ಮತ್ತು ತೊಂದರೆಯನ್ನು ನಿವಾರಣೆ ಮಾಡಿದಂತೆ ಆಗುತ್ತದೆ. ಇದರಿಂದ ದ್ವಿಗುಣವಾದ ಉಪಕಾರವಾಗುತ್ತದೆ.

ನಮ್ಮ ದೇಶದ ನಾಯಕಮಣಿಗಳು ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದುದು, ಬಡವನು ಹೊಟ್ಟೆಪಾಡಿಗಾಗಿ ಪಡುತ್ತಿರುವ ಕಷ್ಟವನ್ನು ತಗ್ಗಿಸುವುದಕ್ಕಾಗಿ, ದೇಶದಲ್ಲಿ ನೆರೆಗೊಂಡಿದ್ದ ಅವಿದ್ಯಾವಂತರ ಸಂಖ್ಯೆಯನ್ನು ಇಳಿಸುವುದಕ್ಕಾಗಿ ಮತ್ತು ಮನೆ ಮಠಗಳಿಲ್ಲದೆ ವಾಸಕ್ಕಾಗಿ ತೊಂದರೆಪಡುತ್ತಿದ್ದವರ ಕಷ್ಟವನ್ನು ತಪ್ಪಿಸಬೇಕೆಂಬ ಉದ್ದೇಶಕ್ಕಾಗಿ. ನಮ್ಮ ದೇಶದಲ್ಲಿ ಪಟ್ಟಣಗಳಿಗಿಂತ ಹಳ್ಳಿಗಾಡಿನಲ್ಲಿ ಜನರು ವಿಶೇಷವಾಗಿ ವಾಸಮಾಡುತ್ತಿದ್ದಾರೆ. ಶೇಕಡ 85 ರಷ್ಟು ಜನರು ಹಳ್ಳಿಗಳಲ್ಲಿ ವಾಸಮಾಡುತ್ತಿದ್ದಾರೆ.

ಆದುದರಿಂದ ನಮ್ಮ ಸರ್ಕಾರದವರು ಈ ಗ್ರಾಮಾಭಿವೃದ್ಧಿ ಯೋಜನೆಗಾಗಿ ಕಳೆದ ವರ್ಷ ಏರ್ಪಾಡು ಮಾಡಿದ ವಿವಿಧೋದ್ದೇಶ ಸಹಕಾರ ಸಂಘಗಳ ಯೋಜನೆಯ ಫಲವಾಗಿ ಲಕ್ಷಾಂತರ ಪ್ರಜೆಗಳು ಇದರಲ್ಲಿ ಸಹಕರಿಸಿ ತಮ್ಮ ಅಮೋಘವಾದ ಷೇರು ಮೊಬಲಗುಗಳನ್ನು ಕೊಡಲು ಮುಂದೆ ಬಂದಿರುತ್ತಾರೆ. ಈ ಯೋಜನೆ ಸಂಘಟನೆಯಾದ 4–5 ತಿಂಗಳೊಳಗಾಗಿಯೇ ಸಾವಿರಾರು ರೂಪಾಯಿ ಲಾಭ ಪಡೆದಿರುವುದು ಬಹಳ

ಸಂತೋಷದ ವಿಚಾರ ಮತ್ತು ಇದು ಬಹಳ ಆಶಾದಾಯಕವಾಗಿದೆ.

ಇಷ್ಟೇ ಅಲ್ಲದೆ ನಮ್ಮ ಸರ್ಕಾರ ಬಂದನಂತರ ನಿಮ್ನ ಪಂಗಡದವರಿಗೆ ವಾಸದ ಮನೆಗಳನ್ನು ಕಟ್ಟಿಕೊಳ್ಳತಕ್ಕ ಬಗ್ಗೆ 19 ಲಕ್ಷ ರೂಪಾಯಿಗಳನ್ನು ಹೋದ ಸಾಲಿನಲ್ಲಿ ಕೊಟ್ಟಿದ್ದಾರೆ. ಇದರಿಂದ ಅವರ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಎಷ್ಟೋ ಅನುಕೂಲವಾಗಿರುತ್ತೆ. ಅದೇ ರೀತಿ ಈ ವರ್ಷ ಕೂಡ ಅವರಿಗೆ 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶಿಸಲು ಅನುಕೂಲಗಳನ್ನು ಕಲ್ಪಿಸಿಕೊಟ್ಟಿದ್ದಾರೆ.

ಅನೇಕ ಕಡೆಗಳಲ್ಲಿ ಎಲ್ಲಾ ತಾಲ್ಲೂಕುಗಳಲ್ಲೂ ಕೂಡ ಅವರಿಗೆ ಬೇಕಾದ ಹಂಚುಗಳು, ನಾಟಾಗಳು, ಬಾಗಿಲುಗಳು, ಕಿಟಿಕಿಗಳು ವಗೈರೆ ಸಾಮಾನುಗಳನ್ನು ಒದಗಿಸಿಕೊಟ್ಟು ಸಾವಿರಾರು ಜನರಿಗೆ ವರ್ಷವರ್ಷ ಸಹಾಯ ಮಾಡಿದ್ದಾರೆ. ಇದು ನಿಜವಾಗಿಯೂ ಸಂತೋಷಕರವಾದ ವಿಷಯ. ಈ ವಿಚಾರವನ್ನೂ ಕೂಡ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ.

ನಮ್ಮ ದೇಶದ ಒಂಭತ್ತು ಜಿಲ್ಲೆಗಳ ಪೈಕಿ ಐದು ಜಿಲ್ಲೆಗಳಲ್ಲಿ ಅಗಲೇ ಪಾನನಿರೋಧವನ್ನು ಜಾರಿಗೆ ತಂದು ಹಾಳಾಗಿ ಹೋಗಿದ್ದ ಬಡಜನರ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಕಾರಣರಾಗಿದ್ದಾರೆ. ಆದರೆ ಈಚೆಗೆ ಸ್ವಲ್ಪ ಮಟ್ಟಿಗೆ ಈ ಪಾನನಿರೋಧವನ್ನು ನಿಧಾನ ಮಾಡಬೇಕು, ಇಲ್ಲದಿದ್ದರೆ ಸಂಸ್ಥಾನದ ಹಣಕಾಸಿನ ಸ್ಥಿತಿ ಸರಿಯಾಗಿರಲಾರದು. ಆದ್ದರಿಂದ ಒಂದೇ ಸಾರಿ ತೆಗೆಯಕೂಡದೆಂದು ಕೇಂದ್ರ ಸರ್ಕಾರದವರು ಮಾಡಿರುವ ಸಲಹೆಗನುಗುಣವಾಗಿ ನಮ್ಮ ಸರ್ಕಾರದವರೂ ಅದೇ ತೀರ್ಮಾನಕ್ಕೆ ಬಂದಿದ್ದಾರೆ.

ಇದಾದ ಮೇಲೆ, ಪ್ರಪಂಚದಲ್ಲಿ ಒಂದು ಪ್ರದೇಶದ ಅಭಿವೃದ್ಧಿಗೆ ಅತ್ಯಾವಶ್ಯಕವಾಗಿ ಬೇಕಾಗಿರತಕ್ಕ ಪದಾರ್ಥಗಳಲ್ಲಿ ನಾಲ್ಕನೆಯದಾದ ವಿದ್ಯುಚ್ಛಕ್ತಿಯು ನಮ್ಮ ಸಂಸ್ಥಾನದಲ್ಲಿ ಹೇರಳವಾಗಿರುವುದಲ್ಲದೆ ಇನ್ನೂ ಬೇಕಾಗುವ ವಿದ್ಯುಚ್ಛಕ್ತಿಯನ್ನು ಉತ್ಪನ್ನ ಮಾಡಲು ಸಾಧ್ಯವಿದೆ. ನಮ್ಮ ಸರ್ಕಾರದವರು ದೇಶದ ಮೂಲೆ ಮೂಲೆಯಲ್ಲಿರುವ ಹಳ್ಳಿ ಹಳ್ಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದಾರೆ. ಇದರಿಂದ ವ್ಯವಸಾಯಕ್ಕೂ ಮತ್ತು ಗ್ರಾಮಾಭಿವೃದ್ಧಿಗೂ ಒಳ್ಳೆಯ ಸಹಾಯ ಮಾಡಿದಂತಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಇದನ್ನು ಇನ್ನೂ ಹೆಚ್ಚಿಗೆ ಮಾಡಬೇಕು. ಇದರಿಂದ ಜನರ ಆರ್ಥಿಕ ಮಟ್ಟವನ್ನೂ ಉತ್ತಮಪಡಿಸುವುದಕ್ಕೆ ಸಹಾಯಕವಾಗುತ್ತದೆ. ನಮ್ಮ ಆಹಾರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಇದರಿಂದ ಪ್ರಯತ್ನ ಮಾಡಬಹುದೆಂದೂ ಶ್ರೀಮನ್ಮಹಾರಾಜರವರು ಹೇಳಿದ್ದಾರೆ. ಜೊತೆಗೆ ಈಗ ಮಲೆನಾಡಿನಲ್ಲಿ ವಿದ್ಯುಚ್ಛಕ್ತಿ ಹೆಚ್ಚಿಗೆ ತಯಾರಾಗುತ್ತಿದ್ದರೂ ಆ ಭಾಗದಲ್ಲಿ ಹೆಚ್ಚಿಗೆ ವಿದ್ಯುಚ್ಛಕ್ತಿ ಸೌಕರ್ಯವಿಲ್ಲದಿರುವುದನ್ನು ಸೂಚಿಸಿ ಆದಷ್ಟೂ ಕೂಡ ಮಲೆನಾಡಿನ ಹಳ್ಳಿಗಾಡಿನ ಜನರಿಗೆ ಈ ಅನುಕೂಲವನ್ನು ಕಲ್ಪಿಸಿಕೊಡುವುದು ಸೂಕ್ತವೆಂದು ತಿಳಿಸಿದ್ದಾರೆ.

ಹತೋಟಿ ಪರಿಣಾಮವಾಗಿ 1942ನೆಯ ಇಸವಿಯಿಂದ ನಮ್ಮ ದೇಶದಲ್ಲಿ ಲಂಚಕೋರತನ ಮತ್ತು ಕಾಳಸಂತೆ ಪ್ರಾರಂಭವಾಯಿತು. ಇದನ್ನು ಏಕಾಏಕಿ ನಿಲ್ಲಿಸುವುದಕ್ಕೆ ಜನರ ಸಹಕಾರವೂ ಬೇಕು. ಹತೋಟಿ ಆಜ್ಞೆಗಳು ಎಲ್ಲಿಯವರೆಗಿರುತ್ತವೆಯೋ ಅಲ್ಲಿಯವರೆಗೂ ಲಂಚಕೋರತನವಿದ್ದೇ ಇರುತ್ತದೆ. ಆದರೆ ಈ ಹತೋಟಿ ಆಜ್ಞೆಗಳನ್ನು ನಮ್ಮ ಸರ್ಕಾರದವರು ತೆಗೆಯುವುದಕ್ಕೂ ಆಗುವುದಿಲ್ಲ. ಕೇಂದ್ರ ಸರ್ಕಾರದವರು ಈ ಹತೋಟಿ ಆಜ್ಞೆಗಳನ್ನು ತೆಗೆದ ಮೇಲೆಯೇ ಇಲ್ಲಿಯೂ ತೆಗೆಯಬೇಕು. ಅಂದ ಮಾತ್ರಕ್ಕೇ ನಮ್ಮ ದೇಶದಲ್ಲಿರುವ ಲಂಚಕೋರತನವನ್ನು ನಿಲ್ಲಿಸಕೂಡದೇ? ಇದಕ್ಕಾಗಿ ಈಗಾಗಲೇ ಒಂದು ಸಮಿತಿಯನ್ನು ನಿಯಮಿಸಿದ್ದಾರೆ. ಇವರು ಆದಷ್ಟು ಮಟ್ಟಿಗೆ ಈ ಲಂಚಕೋರತನವನ್ನು ತಡೆಗಟ್ಟಬೇಕು. ಈ ಸಂಬಂಧದಲ್ಲಿ ಜನರ ಸಹಕಾರವಿದ್ದ ಹೊರತು ಇದನ್ನು ತಡೆಗಟ್ಟಲು ಅಷ್ಟಾಗಿ ಸಾಧ್ಯವಾಗುವುದಿಲ್ಲ, ಜನರೂ ಸಹಕರಿಸಬೇಕೆಂದು ಶ್ರೀಮನ್ಮಹಾರಾಜರವರು ಹೇಳಿರುವ ವಾಕ್ಯಗಳು ಸತ್ಯವಾದುವು.

ಒಟ್ಟಿನಲ್ಲಿ ಶ್ರೀಮನ್ಮಹಾರಾಜರವರ ಭಾಷಣವು ಬಹಳ ಅಮೋಘವಾಗಿದೆ. ಆ ಸಂಬಂಧದಲ್ಲಿ ಈ ದಿವಸ ಶ್ರೀ ಸುಬ್ರಹ್ಮಣ್ಯರವರು ತಂದಿರತಕ್ಕ ಸೂಚನೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಶ್ರೀ ಕೆ. ಸುಬ್ಬರಾಯರು (ಬೆಂಗಳೂರು ಜಿಲ್ಲೆ).—ಅಧ್ಯಕ್ಷರೇ, ಈಗ ಮಾತನಾಡಿದ ಮಾನ್ಯ ಮಿತ್ರರೆಲ್ಲರೂ ಶ್ರೀಮನ್ಮಹಾರಾಜರವರ ಭಾಷಣವನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡಿದ್ದಾರೆ. ನಾನೂ ಕೂಡ ಬಹಳ ಸಂತೋಷದಿಂದ ಅವರ ಜೊತೆಗೆ ಸೇರಲು ಹರ್ಷಿಸುತ್ತೇನೆ.

ಎಲ್ಲರಿಗೂ ಗೊತ್ತಿರುವ ಹಾಗೆ ನಾವು ಇರತಕ್ಕುದು ಒಂದು ಹೊಸ ವಾತಾವರಣದಲ್ಲಿ. ಹೊಸ ವಾತಾವರಣಕ್ಕೆ ತಕ್ಕ ಹಾಗೆ ಹೊಸ ಹೊಸ ಅನುಭವಗಳೂ ಸಂಪ್ರದಾಯಗಳೂ ಬೆಳೆಯುವುದು ಅತ್ಯಾವಶ್ಯಕ. ಹಾಗೆಯೇ ಇದುವರೆಗೂ ಯಾವ ನ್ಯಾಯವಿಧಾಯಕ ಸಭೆ ಅಥವಾ ಪ್ರಜಾಪ್ರತಿನಿಧಿ ಸಭೆಗೆ ಲಭ್ಯವಾಗದಿರತಕ್ಕ ಒಂದು ಸುಯೋಗ ನಮಗೆ ದೊರೆತಿದೆ. ಶ್ರೀಮನ್ಮಹಾರಾಜರವರು ನೇರವಾಗಿ ಸಭೆಗೆ ದಯಮಾಡಿ ತಮ್ಮ ಅಮೋಘವಾದ ಭಾಷಣದಿಂದ ದೇಶದ ಪರಿಸ್ಥಿತಿಯನ್ನು ಅಮೂಲಾಗ್ರವಾಗಿ ವಿಮರ್ಶೆ ಮಾಡಿ ಜನಸಾಮಾನ್ಯರ ಮುಂದೆ, ದೇಶದ ಮುಂದೆ ಇಡತಕ್ಕ ಸತ್ಸಂಪ್ರದಾಯ ಶ್ಲಾಘನೀಯವೆಂದು ಭಾವಿಸುವವರಲ್ಲಿ ನಾನೂ ಒಬ್ಬ. ಈ ಹೊತ್ತಿನ ಪರಿಸ್ಥಿತಿಯಲ್ಲಿ ಸಾಮಾನ್ಯವಾಗಿ ಕೇವಲ ಬಡವನಿಂದ ಹಿಡಿದು, ಪುಣ್ಯವಂತರವರೆಗೂ, ಅವಿದ್ಯಾವಂತರಾದಿಯಾಗಿ ಪ್ರತಿಯೊಬ್ಬರೂ ಸ್ವಲ್ಪಮಟ್ಟಿಗೆ ರಾಜಕೀಯವನ್ನು ತಿಳಿದುಕೊಳ್ಳಬೇಕೆಂಬ ಅಭಿಲಾಷೆಯನ್ನು ಹೊಂದಿದ್ದಾರೆ. ಎಲ್ಲರಿಗೂ ಒಂದು ವಿಧವಾದ ಆಸಕ್ತಿ, ಆಸೆ ಉದ್ಭವವಾಗುತ್ತಿರುವುದು ಒಂದು ಶುಭ ಸೂಚನೆಯೆಂದು ನನಗನ್ನಿಸುತ್ತದೆ. ಇಂಥ ಸಂದರ್ಭದಲ್ಲಿ, ವಿಷಯ ತಿಳಿಯದವರಿರುತ್ತಾರೆ, ತಿಳಿದವರೂ ಇರುತ್ತಾರೆ. ಎಲ್ಲರೂ ತಿಳಿದವರೇ ಇರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಅಜ್ಞಾನದಿಂದ ಅಪಾರ್ಥ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಅಥವಾ, ತಿಳಿದವರೂ ಬೇರಾವ ದುರುದ್ದೇಶವನ್ನಿಟ್ಟುಕೊಂಡು ನಿಜಾಂಶವನ್ನು ಮರೆಮಾಚಿ ಅಪಾರ್ಥ ಮಾಡಿಕೊಳ್ಳುವುದಕ್ಕೂ ಅವಕಾಶವಿದೆ. ಏಕೆಂದರೆ ಕೆಲವು ಗುಂಪಿನ ಜನರು ಯಾವಾಗಲೂ ಟೀಕೆ ಮಾಡುವುದರಲ್ಲೇ ಇತರರನ್ನು ಅಪಹಾಸ್ಯ ಮಾಡುವುದರಲ್ಲೇ ಹರ್ಷಪಡುವ ಸ್ವಭಾವವುಳ್ಳವರಾಗಿರುತ್ತಾರೆಂಬುದು ತಮಗೆ ಗೊತ್ತಿದೆ. ಆದ್ದರಿಂದ ತಿಳುವಳಿಕೆಯಿಲ್ಲದಿರುವ ಜನರು ಅಂತಹ ಸಂದರ್ಭಗಳ ದೆಸೆಯಿಂದ ತಪ್ಪು ಅಭಿಪ್ರಾಯ ಹೊಂದುವ ಪರಿಸ್ಥಿತಿ ಕೂಡ ಇದೆಯೆಂಬುದನ್ನು ಎಲ್ಲರೂ ಗಮನಿಸದಲ್ಲದಬೇಕು. ಇಂಥ ಸಂದರ್ಭದಲ್ಲಿ ಮುಖ್ಯವಾಗಿ ಇಂದಿನ ವಾತಾವರಣದಲ್ಲಿ ಎಲ್ಲರೂ ಕೂಡ ಬಹಳ ಹರ್ಷದಿಂದ ಆ ಭಾಷಣವನ್ನು ಸ್ವಾಗತಿಸಬೇಕಾದ್ದು ಅವಶ್ಯಕ. ಶ್ರೀಮನ್ಮಹಾರಾಜರವರ ಭಾಷಣದ ತಿರುಳನ್ನು ಮಥನ ಮಾಡಿನೋಡಿದರೆ ಹಿಂದೆ ವಿನ್ಸ್ಟನ್ ಚರ್ಚಿಲ್‌ರವರು ಮತ್ತು ಪ್ರೆಸಿಡೆಂಟ್ ರೂಸ್ವೆಲ್ಟ್‌ರವರು ಯಾವ

ದೇಶವೇ ಆಗಲೀ, ನಾಲ್ಕು ವಿಧವಾದ ಸ್ವಾತಂತ್ರ್ಯವನ್ನು ಪಡೆದಿದ್ದರೇನೇ ಆ ದೇಶ ಮುಂದುವರಿಯುವುದಕ್ಕೆ ಸಾಧ್ಯವೆಂದು ಯಾವ ಚತುರ್ವಿಧ ಸ್ವಾತಂತ್ರ್ಯ ಘೋಷಣೆಯನ್ನು ಸಾರಿದರೋ ಆ ಸ್ವಾತಂತ್ರ್ಯವನ್ನು ನಮ್ಮ ಸರ್ಕಾರದವರು ನಮ್ಮ ಜನರಿಗೆ ಉಂಟುಮಾಡಿಕೊಡುತ್ತೇವೆಂದು ಸಾರಿರುವುದು ಎಲ್ಲರಿಗೂ ಆನಂದವನ್ನುಂಟುಮಾಡುವುದಾಗಿದೆ. ಮೊದಲನೆಯದಾಗಿ ರಾಜಕೀಯ ಸ್ವಾತಂತ್ರ್ಯ ನಮಗೆ ಬಂದಂತೇನೋ ಆಗಿದೆ. ಆದರೆ ಈ ರಾಜಕೀಯ ಸ್ವಾತಂತ್ರ್ಯ ಬರುವ ಸಮಯದಲ್ಲಿ ಅನೇಕ ಎಡರು ತೊಡರುಗಳು ನಮ್ಮ ದೇಶಕ್ಕೆ ಬಂದಿರುವುದು ಒಂದು ಅನಿಷ್ಟ ಪ್ರಸಂಗವೆಂದೇ ಹೇಳಬೇಕು, ಹೀಗೆ ಅನಿಷ್ಟ ಪ್ರಸಂಗ ಒದಗಿದರೂ ನಮ್ಮ ನಾಯಕರು ಶಿಸ್ತಿನಿಂದಲೂ ಮತ್ತು ಶಾಂತಿಯಿಂದಲೂ ಅವುಗಳನ್ನು ಪರಿಹರಿಸುತ್ತಾ ಬಂದರೂ ಇನ್ನೂ ಹಲವಾರು ಬೃಹತ್ ಸಮಸ್ಯೆಗಳು ಎದ್ದು ಕಾಣುತ್ತಿವೆ. "ಈ ಸಮಸ್ಯೆಗಳು ನಮ್ಮ ಮೈಸೂರು ದೇಶಕ್ಕೆ ನೇರವಾಗಿ ಪ್ರಭಾವ ಬೀರದೆ ಇದ್ದರೂ ಭಾರತದಲ್ಲಿ ನಮ್ಮ ದೇಶವೂ ಒಂದಾಗಿರುವುದರಿಂದ, ಪರೋಕ್ಷವಾಗಿ ಇದರ ಬಿಸಿ ನಮಗೂ ತಟ್ಟುತ್ತದೆ. ಅಂಥ ಯಾವ ಸಂದರ್ಭ ಬಂದರೂ ಜನರು ಹೆದರಬೇಕಾಗಿಲ್ಲ. ದೇಶದ ಆರ್ಥಿಕ ಭದ್ರತೆಗೆ ಯಾವ ತೊಂದರೆಯೂ ಇಲ್ಲವೆಂದು ಒಂದು ಭರವಸೆಯನ್ನು ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ನೀಡಿರುವುದು ದೇಶದ ಪ್ರಜಾಕೋಟಿಗೆ ಒಂದು ನೆಮ್ಮದಿ, ಸುಖಶಾಂತಿಯನ್ನು ತರುವುದಾಗಿದೆ.

ನಾನಾಗಲೇ ಹೇಳಿದಂತೆ ಸಾಮಾನ್ಯ ತಿಳುವಳಿಕೆಯುಳ್ಳವರು ಒಂದು ವಿಧವಾದ ಟೀಕೆ ಮಾಡುವುದು ಸ್ವಾಭಾವಿಕವಾಗಿದೆ. ಮೈಸೂರು ದೇಶದ ಒಳ್ಳೆಯ ಆದಾಯ ಬರುವ ಬಾಬುಗಳನ್ನೆಲ್ಲಾ ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರದವರಿಗೆ ಬಿಟ್ಟುಕೊಟ್ಟಿದ್ದಾರೆ, ನಮ್ಮ ದೇಶ ದಿವಾಳಿ ಸ್ಥಿತಿಗೆ ಬಂದಿದೆ, ಮುಂದೆ ಯಾವ ಕೆಲಸ ಮಾಡುವುದಕ್ಕೂ ಆರ್ಥಿಕ ಭದ್ರತೆಯಿಲ್ಲವೆಂದು ಮುಂತಾಗಿ ಒಂದು ಅಸಮಾಧಾನವನ್ನು ಯಾರು ಇಟ್ಟುಕೊಂಡಿದ್ದಾರೋ ಅಂಥವರಿಗೆ ಉತ್ತರವಾಗಿ ಶ್ರೀಮನ್ಮಹಾರಾಜರವರು ತಮ್ಮ ಭಾಷಣದ ಪೂರ್ವಭಾಗದಲ್ಲೇ ನಿರ್ದಿಷ್ಟವಾಗಿ—ಸಾಮಾನ್ಯವಾಗಲ್ಲ—ಎಲ್ಲರಿಗೂ ಮನಸ್ಸೊಪ್ಪುವ ರೀತಿಯಲ್ಲಿ "ನಾವು ಇಂಡಿಯಾ ಸರ್ಕಾರದವರೊಡನೆ ಆರ್ಥಿಕ ವ್ಯವಸ್ಥೆಯಲ್ಲಿ ಹೊಂದಾಣಿಕೆ ಮಾಡಿಕೊಂಡಿರುವುದರಿಂದ ನಮ್ಮ ಹಣಕಾಸಿನ ಪರಿಸ್ಥಿತಿಗೆ ಧಕ್ಕೆ ಬಂದಿಲ್ಲ. ಅದಕ್ಕೆ ಬದಲು ಇನ್ನೂ ಭದ್ರತೆಗೆ ಸಹಾಯಕವಾಗಿದೆ" ಎಂದು ಹೇಳಿರುವುದು ಬಹಳ ಹರ್ಷದಾಯಕವಾಗಿದೆ. ಏಕೆಂದರೆ ಎಲ್ಲಕ್ಕಿಂತ ಮುಖ್ಯವಾಗಿ ದೇಶಕ್ಕೆ ಆರ್ಥಿಕ ಭದ್ರತೆಯನ್ನು ಒದಗಿಸಿಕೊಡಬೇಕಾದ್ದು ನಮ್ಮ ಕರ್ತವ್ಯ. ಅದಕ್ಕೆ ಯಾವ ಬಾಧಕವೂ ಈಗ ಕಾಣುತ್ತಿಲ್ಲ. ಇದರ ಜೊತೆಯಲ್ಲಿ ನಮ್ಮ ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ಅವಶ್ಯಕವಾದ ಹಣವನ್ನು ಒದಗಿಸಿಕೊಳ್ಳುವುದಕ್ಕೂ ಅವಕಾಶವಿದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರದವರ ಸಹಾಯವೂ ಕೂಡ ಒದಗುತ್ತದೆಂದು ಶ್ರೀಮನ್ಮಹಾರಾಜರವರ ಭಾಷಣದಿಂದ ಹೊರಪಟ್ಟಿರುವುದು ಸಂತೋಷದಾಯಕವಾಗಿದೆ. ಇದನ್ನೇನೂ ಟೀಕೆಗಾರರನ್ನು ಸಮಾಧಾನ ಮಾಡುವುದಕ್ಕೆಂದು ಹೇಳಿಲ್ಲ. ಅದು ಪ್ರತಿಯೊಬ್ಬರಿಗೂ ಒಂದು ವಿಧವಾದ ನಿರ್ದಿಷ್ಟವಾದ ಅಭಿಪ್ರಾಯವನ್ನು ಉಂಟುಮಾಡತಕ್ಕ ವಿಷಯ. ಯಾವಾಗಲೂ ಹಣಕಾಸಿನ ಭದ್ರತೆ ವಿಷಯದಲ್ಲಿ ಅನುಮಾನ ಬಂದಿತೆಂದರೆ ಟೀಕೆಗಳು ಬರುವುದು ಸ್ವಾಭಾವಿಕ. ಆದ್ದರಿಂದ ಈ ಪ್ರಕಾರ ಆರ್ಥಿಕ ಭದ್ರತೆಯಿದೆಯೆಂದು ಹೇಳಿದ ಮೇಲೆ ಟೀಕೆಗಳು ಕಡಿಮೆ ಯಾಗುತ್ತವೆಂದು ಹೇಳಬಹುದು.

ಸಾಮಾನ್ಯ ಜನರಿಗೂ ಸಹ ತಮ್ಮ ಆಶೋತ್ತರಗಳು ಈಡೇರುತ್ತವೆಂದು ನಂಬುವುದಕ್ಕೆ ಮಹಾರಾಜರವರ ಭಾಷಣದಲ್ಲಿ ಒಂದು ಅವಕಾಶವಿದೆ. ಈ ಭಾಷಣವನ್ನು ಆಮೂಲಾಗ್ರವಾಗಿ ಓದಿದರೆ ಅದರಂತೆ ಸರ್ಕಾರದವರು ಕಾರ್ಯ ಕೈಕೊಳ್ಳುತ್ತಾರೆಂದು ನಂಬಿಕೆ ಬಂದು ಎಲ್ಲರಿಗೂ ಒಂದು ಸಂತೋಷವುಂಟಾಗುತ್ತದೆಂದು ಧಾರಾಳವಾಗಿ ಹೇಳಬಹುದು. ಪ್ರತಿಯೊಂದು ಬಾಬನ್ನೂ ನಾನು ಬೇರೇಯಾಗಿ ತೆಗೆದುಕೊಂಡು ಚರ್ಚೆಮಾಡುವುದಿಲ್ಲ. ಸಾಮಾನ್ಯ ಮನುಷ್ಯನ ಜೀವನದ ಅವಶ್ಯಕತೆಯೇನಿದೆಯೋ ಮತ್ತು ಕುಂದುಕೊರತೆಯೇನಿದೆಯೋ ಅದು ಪರಿಹಾರವಾದ ಹೊರತು ಎಷ್ಟು ದೀರ್ಘಭಾಷಣ ಮಾಡಿದರೂ, ಎಷ್ಟು ಹೇಳಿದರೂ ಸಮಾಧಾನವಾಗುವುದಿಲ್ಲ. ಜನರಿಗಿರುವ ತೊಂದರೆ ನಿವಾರಣೆಯಾಗಿ ಪರಿಹಾರ ದೊರಕುವ ಮಾರ್ಗವಿದ್ದರೆ ಪ್ರಯೋಜನವಾಗುತ್ತದೆಯೇ ಹೊರತು ಅದರ ಬದಲು ದೀರ್ಘ ಭಾಷಣ ಮಾಡಿದ ಮಾತ್ರಕ್ಕೇ ಯಾವತ್ತೂ ಕೂಡ ಒಂದು ಆಶಾಕಿರಣ ತೋರಿಸಿದಂತೆ ಮಾತ್ರ ಆಗುತ್ತದೆ. ಅದರಿಂದ ಸುಖಶಾಂತಿ ಬರುವುದಿಲ್ಲ. ಆದರೆ ಶ್ರೀಮನ್ಮಹಾರಾಜರವರ ಭಾಷಣವನ್ನು ಆಮೂಲಾಗ್ರವಾಗಿ ಪರಿಶೀಲಿಸಿದರೆ ದೇಶದ ಸಾಮಾನ್ಯಪ್ರಜೆಗೂ ಕೂಡ ಮುಂದಿನ ದಿನಗಳಲ್ಲಿ ಸರ್ಕಾರದವರು ಕೈಕೊಳ್ಳುವ ಪ್ರತಿಯೊಂದು ಕಾರ್ಯಕ್ರಮದಲ್ಲೂ ಸಹ ಅನುಕೂಲವಾಗುತ್ತದೆಂಬ ಭರವಸೆಯಿದೆ. ಕೇವಲ ಬಡವನಿಗೆ ಮಾತ್ರವಲ್ಲದೆ ಬಲ್ಲದನಿಗೂ, ಕೈಗಾರಿಕೆಗಳಲ್ಲಿ ನಿರತರಾಗಿರುವವರಿಗೂ ತಮ್ಮ ಆಶೋತ್ತರಗಳು ರೈತವರ್ಗದವರಿಗೂ ಕಾರ್ಮಿಕವರ್ಗದವರಿಗೂ ಈಡೇರುವಂತೆ ನಂಬಿಕೆ ಉಂಟಾಗುತ್ತದೆ. ಕೆಲಸ ಕಾರ್ಯಗಳನ್ನು ಸುಗಮವಾಗಿ ಮಾಡಿ ರಾಷ್ಟ್ರದ ಏಳಿಗೆಯನ್ನು ಸಾಧಿಸಬಹುದು ಎಂಬ ಒಂದು ಆಶೋತ್ತರವಿದೆ. ಬಡವ, ಬಲ್ಲಿದ, ವಿದ್ಯಾವಂತ ಇಂಥವರೆಲ್ಲರಿಗೂ ಒಂದು ವಿಧವಾದ ನೆಮ್ಮದಿ, ಶಾಂತಿ ಬರುವ ರೀತಿಯಲ್ಲಿ ಭಾಷಣವಿರುವುದು ಬಹಳ ಸ್ತೋತ್ರಾರ್ಹವಾಗಿದೆ ಮತ್ತು ಸ್ವಾಗತಾರ್ಹವಾಗಿದೆ. ಸಾಮಾನ್ಯವಾಗಿ ದೇಶದ ದೊಡ್ಡ ದೊಡ್ಡ ಕೈಗಾರಿಕೆಗಳು, ಉದ್ಯಮಗಳು ಬಹಳ ಮುಖ್ಯವೆಂದು ಹೇಳಿದ್ದರೆ ಅವನ್ನು ನಾವು ಟೀಕೆ ಮಾಡಬಹುದಾಗಿತ್ತು. ಆದರೆ ಅವೆಲ್ಲವನ್ನೂ ಸಮದೃಷ್ಟಿಯಿಂದ ನೋಡಿ ದೊಡ್ಡ ದೊಡ್ಡ ಉದ್ಯಮಗಳ ಜೊತೆಗೆ ಗೃಹಕೈಗಾರಿಕೆಗಳು ಅದರಲ್ಲೂ ಮಹಾ ಮೇಧಾವಿಗಳಾದ ಸರ್ ಎಂ. ವಿಶ್ವೇಶ್ವರಯ್ಯನವರ ಸಲಹೆಯಂತೆ ಎರಡು ಡಿಸ್ಟ್ರಿಕ್ಟುಗಳಲ್ಲಿ ಗೃಹಕೈಗಾರಿಕೆಗಳನ್ನು ಸ್ಥಾಪನೆಮಾಡಲು ಏರ್ಪಡಿಸಿದೆಯೆಂದು ಹೇಳಿರುವುದು ಸ್ತೋತ್ರಾರ್ಹವಾದುದು. ಅದೇ ರೀತಿಯಲ್ಲಿ 9 ಜಿಲ್ಲೆಗಳಲ್ಲೂ ಒಟ್ಟಿಗೆ ಸ್ಥಾಪನೆಮಾಡಿ ದೇಶಕ್ಕೆಲ್ಲಾ ಕಲ್ಯಾಣವಾಗುವಂತೆಮಾಡುವುದು ಒಳ್ಳೆಯದು, ಅದರಿಂದ ಪ್ರಜೆಗಳಿಗೆ ಬಹಳ ಸಂತೋಷವುಂಟಾಗುತ್ತದೆ ಎಂದು ಸೂಚಿಸಬೇಕಾಗಿದೆ. ಆದರೆ ಯಾವುದೇ ಕಾರ್ಯಕ್ರಮವಿದ್ದರೂ ಸಾಕಾದಷ್ಟು ಹಣ ಒದಗಿಸಿ ಎಲ್ಲವನ್ನೂ ಒಟ್ಟಿಗೆ ಮಾಡುವುದಕ್ಕೆ ಸಾಧ್ಯವಿಲ್ಲ. ಎಲ್ಲವನ್ನೂ ಒಟ್ಟಿಗೆ ತೆಗೆದುಕೊಂಡು ಅರಕಳಿಯಾಗಿ ಮಾಡುವುದಕ್ಕೆ ಬದಲಾಗಿ ಅಂದರೆ ನಿಧಾನವಾದರೂ ಸರಿ, ಚೆನ್ನಾಗಿ ಮಾಡುವುದು ಒಳ್ಳೆಯದು. ಇದು ಕಾರ್ಯಸಾಧನೆಯ ಸಲ್ಲಕ್ಷಣ. ಸಾಮಾನ್ಯವಾಗಿ ಮೊದಲೇ ಹೇಳಿದ ಹಾಗೆ ಜೀವನಕ್ಕೆ ಅತ್ಯಾವಶ್ಯಕವಾಗಿ ಬೇಕಾದ ಆಹಾರ ಪದಾರ್ಥಗಳನ್ನು ಸಂಗ್ರಹಣೆ ಮಾಡುವುದು, ಸರಿಯಾಗಿ ಹಂಚುವುದು ಸರ್ಕಾರದ ಮುಖ್ಯ ನೀತಿಯಾಗಿದೆ. ಅದು ಭಾಷಣದಲ್ಲಿ ಸೂಚಿತವಾಗಿದೆ.

ಪಾನನಿರೋಧನ ವಿಷಯವನ್ನು ತೆಗೆದುಕೊಂಡರೆ ಬಹುಶಃ ಈಗ ಹೆಚ್ಚು ಡಿಸ್ಟ್ರಿಕ್ಟುಗಳಲ್ಲಿ ಈ ಕ್ರಮ ಜಾರಿಯು

ಲ್ಲದೆ, ಇನ್ನು ಜಾರಿಯಾಗಬೇಕಾದ ಜಿಲ್ಲೆಗಳ ಸಂಖ್ಯೆ ಕಡಿಮೆ. ಅಲ್ಲಿಯೂ ಆದರೆ ಬಹಳ ಒಳ್ಳೆಯದು ಎನ್ನುವ ಭಾವನೆ ಸಾಮಾನ್ಯವಾಗಿ ಎಲ್ಲರಿಗೂ ಇದೆ. ಪಾನನಿರೋಧವನ್ನು ಜಾರಿಗೆ ತಂದಿರುವ ಕಡೆಗಳಲ್ಲೆಲ್ಲಾ ಸ್ವಲ್ಪ ಲೋಪದೋಷಗಳಿವೆ ಎಂದು ಹೇಳಬಹುದು. ಪೂರ್ತಿಯಾಗಿ ಅದು ಫಲಕಾರಿಯಾಗಿಲ್ಲದೆ ತೊಂದರೆಯಾಗಿರಬಹುದು. ಆದರೆ ನಿಜವಾಗಿಯೂ ಯೋಚನೆ ಮಾಡಿದರೆ ಪಾನನಿರೋಧದಿಂದ ಹೆಚ್ಚು ಪ್ರಯೋಜನವಾಗಿಲ್ಲವೆಂದು ಭಾವಿಸುವುದಕ್ಕಾಗುವುದಿಲ್ಲ. ಪ್ರಯೋಜನ ಹೆಚ್ಚಾಗಿದೆ. ಒಂದು ವೇಳೆ ಕಳ್ಳಬಟ್ಟಿ ಇಳಿಸುವುದು ಮುಂತಾದ ಲೋಪದೋಷಗಳಿದ್ದರೂ ಅದರಿಂದ ಆಗಿರುವ ಪ್ರಯೋಜನವನ್ನು ಯಾರೂ ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲವೆಂದು ಧಾರಾಳವಾಗಿ ಹೇಳಬಹುದು. ಹಾಗೆಯೇ ವಿದ್ಯಾಭ್ಯಾಸದ ವಿಷಯದಲ್ಲೂ ಮಾನ್ಯ ಮಿತ್ರರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅದನ್ನು ಪುನಃ ಹೇಳುವುದಕ್ಕೆ ಇಷ್ಟವಿಲ್ಲ. ಜೀವನದ ಮುಖ್ಯ ಅವಶ್ಯಕತೆಯಾದ ಆಹಾರದ ವಿಷಯದಲ್ಲೂ ಸಹ ಶ್ರೀಮನ್ಮಹಾರಾಜರವರು ಮನ ಒಪ್ಪುವ ರೀತಿಯಲ್ಲಿ ಬಹುವಾಗಿ ಹೇಳಿದ್ದಾರೆ. ಈಗ ಭಾರತ ಸರ್ಕಾರದವರು 1951ನೇಯ ಇಸವಿಯಲ್ಲೇ ಆಹಾರ ಸ್ವಪರಿಪೂರ್ಣತೆಯನ್ನು ಪಡೆಯಲು ನಿಶ್ಚಯಿಸಿದ್ದಾರೆ. ನಮ್ಮ ಸರ್ಕಾರದವರೂ ಅದಕ್ಕೆ ಸರಿಹೊಂದುವಂತಹ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಅದಕ್ಕೆ ತಕ್ಕ ಪ್ರಯತ್ನವನ್ನು ಸರ್ಕಾರದವರು ಜನರ ಸಹಾಯದಿಂದ ಮಾಡಬೇಕು. ಆಹಾರ ಸ್ವಪರಿಪೂರ್ಣತೆಗೆ ಎಷ್ಟು ಪ್ರಾಮುಖ್ಯತೆ ಕೊಡಬೇಕೋ ಅಷ್ಟೇ ಪ್ರಾಮುಖ್ಯತೆಯನ್ನು ಸದ್ಯದ ಆಹಾರದ ಅಭಾವವನ್ನು ನೀಗುವುದಕ್ಕೂ ಕೊಟ್ಟು, ಹತೋಟಿ ತಂದು ತಕ್ಕ ಕಾರ್ಯಕ್ರಮ ಕೈಕೊಂಡಿರುತ್ತಾರೆ. ಅದರಲ್ಲಿ ಕುಂದುಕೊರತೆಗಳುಂಟಾಗಿರುವುದನ್ನು ಹೋಗಲಾಡಿಸಲು ಸೂಚಿಸಿರುವುದು ಬಹು ಸಂತೋಷಕರ. ಆಹಾರದ ಹತೋಟಿಯನ್ನು ತಂದಿರುವುದರಿಂದ ಜೊತೆಯಲ್ಲೆ ಕಾಳ ಸಂತೆಯೂ ಹೆಚ್ಚಿ ಕೆಲವರಿಗೆ ಹತೋಟಿಯಿಂದ ಸಹಾಯವಾಗಿದೆ. ಇದೂ ಅಲ್ಲದೆ ದೇಶದಲ್ಲಿ ಆಹಾರದ ಅಭಾವ, ಹಂಚಿಕೆಯ ಕೊರತೆ, ತೊಂದರೆ ಇತ್ಯಾದಿಗಳು ಬಹಳ ಜಾಸ್ತಿಯಾಗಿದೆ. ಕಾಳಸಂತೆ, ಲಂಚಕೋರತನ ಇತ್ಯಾದಿ ಹಲವು ಅನೀತಿಗಳು ಹೆಚ್ಚಿವೆ. ಅದು ಹೋಗಬೇಕಾದರೆ ಕಂಟ್ರೋಲ್ ತೆಗೆಯಬೇಕಾಗುವುದು. ಹಾಗೆ ಮಾಡುವುದು ಸಧ್ಯದಲ್ಲಿ ಕಷ್ಟ. 1951 ರಲ್ಲಿ ಆಹಾರ ಸ್ವಪರಿ ಪೂರ್ಣತೆಯಾದರೆ ಲಂಚಕೋರತನವು ನಿವಾರಣೆಯಾಗಿ ಜನ ಸಾಮಾನ್ಯರಿಗೆ ಅನುಕೂಲವಾಗುತ್ತದೆ. ಆದ್ದರಿಂದ ನಿಜವಾಗಿಯೂ ಶ್ರೀಮನ್ಮಹಾರಾಜರವರ ಭಾಷಣವನ್ನು ಸ್ವಾಗತಿಸಿ ಕೃತಜ್ಞತೆಯನ್ನು ಸೂಚಿಸಬೇಕಾಗಿದೆ.

ಅಲ್ಲದೆ ನಿರುದ್ಯೋಗ ಸಮಸ್ಯೆ ಕೂಡ ಬಹಳ ದೊಡ್ಡ ಬೃಹದಾಕಾರದ ಸಮಸ್ಯೆಯಾಗಿದೆ. ಸಾಮಾನ್ಯವಾಗಿ ಕೂಲಿಗಾರರು, ಜನ ಸಾಮಾನ್ಯರು, ಹಳ್ಳಿಯವರು, ಬಡವರು ಮುಂತಾದವರಿಗೆ ತೊಂದರೆ ಬಹಳ ಜಾಸ್ತಿಯಾಗಿದೆ. ಅಂಥವರಿಗೆ ಈ ಭಾಷಣದಿಂದ ಒಂದು ವಿಧವಾದ ಉತ್ಸಾಹ, ಆಶೆ ಮತ್ತು ಶಾಂತಿ ದೊರಕುತ್ತದೆಯೆಂದು ಧಾರಾಳವಾಗಿ ಹೇಳಬಹುದು. ಏಕೆಂದರೆ, ಸಾಮಾನ್ಯವಾಗಿ ಹಳ್ಳಿಗಾಡಿನವರಿಗೆ ಬೇಕಾದ ಸಹಾಯ ಸಂಪತ್ತು ಎಲ್ಲವೂ ಕೂಡ ತಳಹದಿಯಾದ ಗ್ರಾಮ ಪಂಚಾಯಿತಿಯಿಂದಲೇ ಆರಂಭವಾಗಬೇಕು ಎಂತ ಹೇಳಿರುತ್ತಾರೆ. ಅಲ್ಲಿಂದ ಪ್ರಾರಂಭವಾಗಿ ಸರಿಯಾದ ಕೆಲಸ ನಡೆದರೆ, ನಿಜವಾಗಿಯೂ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸಿದರೆ ಸಾಮಾನ್ಯ ಮನುಷ್ಯನು ತನ್ನ ಕರ್ತವ್ಯವನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಮಹಾರಾಜರು ತಮ್ಮ ಭಾಷಣದಲ್ಲಿ ಇದಕ್ಕೆ ಸಹಾಯಕಾರಿಯಾದ ವ್ಯವಸ್ಥೆಯೊಂದನ್ನು ಸೂಚಿಸಿದ್ದಾರೆ. ಸಾಮಾನ್ಯವಾಗಿ ಸರ್ಕಾರಿ ಅಧಿಕಾರಿಗಳು ಬಹಳ ಮಟ್ಟಿಗೆ ಸರ್ಕಾರದ ರೀತಿ ನೀತಿಗೆ ಲೋಪ ಬರದ ಹಾಗೆ ತಮ್ಮ ಕರ್ತವ್ಯ ನೆರವೇರಿಸಿದರೆ, ಅಧಿಕಾರವು ವಿಕೇಂದ್ರೀಕೃತವಾದ ಪ್ರಜಾವರ್ಗಕ್ಕೆ ಆಗ ಬಹಳ ಮಟ್ಟಿಗೆ ಸಹಾಯವಾಗುತ್ತದೆಯೆಂದು ಹೇಳುವುದು ನಿರ್ವಿವಾದವಾಗಿದೆ. ಮಹಾರಾಜರು ತಮ್ಮ ಭಾಷಣದಲ್ಲಿ ವಿಕೇಂದ್ರೀಕೃತವಾಗುವುದಕ್ಕೆ ಏನು ಬೇಕೋ ಅದನ್ನು ಸರ್ಕಾರದವರು ಮಾಡಲು ಪ್ರಯತ್ನಪಡುತ್ತಾರೆಂದು ಚೆನ್ನಾಗಿ ಹೇಳಿದ್ದಾರೆ. ಪಂಚಾಯಿತಿಯು ಅದರ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕಾದರೆ, ಅದಕ್ಕೆ ತಕ್ಕ ಅವಕಾಶ ಕಲ್ಪಿಸುವುದಕ್ಕೆ ಮಹಾತ್ಮ ಗಾಂಧಿಯವರು ಹೇಳಿದಂತೆ ಪಂಚಾಯಿತಿ ರಾಜ್ಯ ಸ್ಥಾಪನೆ ಮಾಡಬೇಕಾದ್ದು ಸರ್ಕಾರದ ಕರ್ತವ್ಯವೆಂದು ಹೇಳಿರುವಾಗ, ಅದಕ್ಕೆ ಸಾಕಷ್ಟು ಸರ್ಕಾರ ಸಹಾಯ ಮಾಡುವುದೆಂದು ತಮ್ಮ ಭಾಷಣದಲ್ಲಿ ಶ್ರೀಮನ್ಮಹಾರಾಜರವರು ಭರವಸೆ ನೀಡಿರುವಾಗ ಅದಕ್ಕಾಗಿ ಎಲ್ಲರೂ ಸಂತೋಷಪಡಬೇಕಾಗಿದೆ. ಇನ್ನು ಮುಂದೆ ಪಂಚಾಯಿತಿಗಳು ಸುಸೂತ್ರವಾಗಿ ಕೆಲಸ ಮಾಡಬೇಕಾದರೆ ಸಾಕಷ್ಟು ಧನಸಂಪತ್ತನ್ನು ಸರ್ಕಾರದವರು ಒದಗಿಸುವುದಕ್ಕೆ ಪ್ರಯತ್ನಪಡುತ್ತಾರೆ ಎಂಬುದನ್ನೂ, ಇದರ ಜೊತೆಗೆ ಆ ಕರ್ತವ್ಯಗಳಲ್ಲಿ ನೆರವಾಗುತ್ತಾರೆಂದೂ ಹೇಳಿರುವುದು ಸಂತೋಷಕರ. ಹಳ್ಳಿಗಳಲ್ಲಿರುವ ಅನೇಕ ಸಮಸ್ಯೆಗಳೂ, ಭೂಕಂದಾಯದಲ್ಲಿರುವ ಅಸಮಾನತೆ ಮತ್ತು ಕುಂದುಕೊರತೆ ಅದನ್ನು ನಿವಾರಣೆ ಮಾಡವುದಕ್ಕೆ ಮೊದಲು ಈ ಸಭೆಯ ಅಧ್ಯಕ್ಷರಾಗಿದ್ದಂಥ ಶ್ರೀ ಎಚ್. ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದಾರೆ. ಆ ಸಮಿತಿಯವರು ಸರ್ಕಾರಕ್ಕೆ ತಮ್ಮ ವರದಿಯನ್ನು ಸಲ್ಲಿಸುವವರಾಗಿದ್ದಾರೆ. ಅದಾದ ತಕ್ಷಣ ಸರ್ಕಾರದವರು ಸೂಕ್ತ ಕಾರ್ಯಕ್ರಮ ಕೈಕೊಳ್ಳುವರೆಂಬ ಭರವಸೆ ಈ ಭಾಷಣದಲ್ಲಿದೆ. ಅದು ಸಂತೋಷದ ಸಂಗತಿ. ಉತ್ತರ ದೇಶದಲ್ಲಿರುವಷ್ಟು ದುರ್ಗಮವಾದ ಪರಿಸ್ಥಿತಿ ನಮ್ಮ ದೇಶದಲ್ಲಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಸಾವಿರಾರು ಗ್ರಾಮಗಳಲ್ಲಿ ಜಹಗೀರ್ದಾರಿ ಪದ್ಧತಿ ಇದ್ದರೂ ರೈತವಾರಿ ಪದ್ಧತಿಯು ಪ್ರಾಮುಖ್ಯವಾಗಿ ನಮ್ಮಲ್ಲಿರುವುದರಿಂದ ನಮ್ಮ ಸಮಸ್ಯೆ ಸುಲಭವಾಗಿ ಬಗೆಹರಿಸಲ್ಪಡಬಹುದಾಗಿದೆ. ಇನಾಂ ಗ್ರಾಮಗಳ ರೈತರು ಕ್ರಮೇಣ ಸರ್ಕಾರಿ ರೈತರಿಗಿರುವ ಹಕ್ಕುಗಳನ್ನು ಅನುಭವಿಸುತ್ತಾರೆ ಎಂದು ಹೇಳುವುದು ಸಂತೋಷಕರವಾದ ವಿಚಾರ.

ಈ ಸಂದರ್ಭದಲ್ಲಿ ಜಮೀನನ್ನು ಯಾರು ಸರ್ಕಾರಕ್ಕೆ ಬಿಟ್ಟುಕೊಡಬೇಕಾಗುತ್ತದೆಯೋ ಅಂಥವರ ಹಿತವನ್ನೂ ರಕ್ಷಣೆ ಮಾಡುತ್ತೇವೆ, ಅವರಿಗೆ ತೊಂದರೆಯಾಗುವುದಿಲ್ಲ ಎಂಬ ಭರವಸೆಯೂ ಶ್ರೀಮನ್ಮಹಾರಾಜರವರ ಭಾಷಣದಲ್ಲಿದೆ. ಸರ್ಕಾರದವರು ಜಮೀನುಗಳನ್ನು ತಾವು ತೆಗೆದುಕೊಂಡು ಅದಕ್ಕೆ ಪರಿಹಾರವನ್ನು ಕೊಡುತ್ತಾರೋ ಇಲ್ಲವೋ ಎಂಬ ಅನುಮಾನಕ್ಕೆ ಆಸ್ಪದವಿಲ್ಲ. ಯಾವುದೇ ಪ್ರಜೆಯ ಸ್ವತ್ತನ್ನಾಗಲೀ ಸರ್ಕಾರ ತೆಗೆದುಕೊಳ್ಳಬೇಕಾದರೆ ಅದಕ್ಕೆ ತಕ್ಕ ಪರಿಹಾರವನ್ನು ಕೊಡಬೇಕೆಂಬುದನ್ನು ಭೂಕಂದಾಯ ಪರಿಶೀಲನಾ ಸಮಿತಿಯವರು ಖಂಡಿತವಾಗಿಯೂ ಮನಗಂಡಿದ್ದಾರೆ. ಆ ಸಮಿತಿಯ ಅಭಿಪ್ರಾಯಕ್ಕೆ ಸರ್ಕಾರದಲ್ಲಿ ಬಹುಮಟ್ಟಿಗೆ ಮನ್ನಣೆ ದೊರೆಯುವುದರಲ್ಲಿ ಸಂದೇಹವಿಲ್ಲ. ಇದರಿಂದ ಜೋಡಿದಾರರು, ಇನಾಂದಾರರು ಮತ್ತು ಈ ಗ್ರಾಮಗಳ

ರೈತರ ಸ್ಥಿತಿಯೂ ಉತ್ತಮಗೊಳ್ಳುತ್ತದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಮಹಾರಾಜರವರು ತಮ್ಮ ಭಾಷಣದಲ್ಲಿ ವಿದ್ಯಾಭ್ಯಾಸದ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಒಂದೇ ಒಂದು ಮಾತಿನಲ್ಲಿ ಹೇಳಬೇಕಾದರೆ, ಈ ವಿಷಯದಲ್ಲಿ ನಮ್ಮ ಸರ್ಕಾರ ಭಾರತದ ಮಿಕ್ಕಪ್ರಾಂತ್ಯಗಳ ಸರ್ಕಾರಗಳಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿದೆ ಎಂದು ಹೇಳುವುದರಲ್ಲಿ ಸಂದೇಹವೇ ಇಲ್ಲ. ಇದನ್ನು ನಾವು ಹೆಮ್ಮೆಯಿಂದ ಹೇಳಬಹುದಾಗಿದೆ. ವಿದ್ಯಾಭ್ಯಾಸದ ವಿಚಾರದಲ್ಲಿ ನಮ್ಮ ಸರ್ಕಾರದವರು ಸ್ತೋತ್ರಾರ್ಹವಾದ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೂ ಸರ್ಕಾರದವರು ಯಾವ ಒಂದು ಘನವಾದ ಉದ್ದೇಶದಿಂದ ಇದನ್ನು ಮಾಡಿದರೋ ಆ ಉದ್ದೇಶ ಇನ್ನೂ ಸಫಲವಾಗಿಲ್ಲ. ಇದಕ್ಕೆ ಕಾರಣ ಸರ್ಕಾರದ ಉದ್ದೇಶದಲ್ಲಿ ಲೋಪದೋಷವೇನೂ ಇಲ್ಲ. ಅದರ ಉದ್ದೇಶ ಸಾಧುವಾದುದು ಮತ್ತು ಅತಿ ಅಮೋಘವಾದುದು. ಆದರೆ ಇದನ್ನು ನಡೆಸತಕ್ಕ ಜನರಲ್ಲಿ ಸಾಕಷ್ಟು ಯೋಗ್ಯತೆ ಮತ್ತು ಅರ್ಹತೆಗಳಿಲ್ಲದೇಯಿರುವುದರಿಂದ• ಉದ್ದೇಶ ಸಾಧನೆ ಕಷ್ಟವಾಗಿದೆ. ಯಾವ ಉದ್ದೇಶದಿಂದ ಮಾಡಿದ್ದಾರೆ, ಇದರ ವ್ಯಾಪ್ತಿ ಏನು ಎಂಬುದನ್ನು ತಕ್ಕಷ್ಟು ಮನಗಾಣದೇಯಿರುವ ಲೋಪದೋಷ ಇದನ್ನು ನಡೆಸತಕ್ಕವರಲ್ಲಿ ಇರುವುದರಿಂದ ಇದು ಸಾಕಷ್ಟು ಫಲ ಕೊಡುತ್ತಿಲ್ಲ. ಹೀಗಿದ್ದರೂ ಉದ್ದೇಶ ಒಳ್ಳೆಯದು. ಈ ಕಾರ್ಯವೇನೋ ಅಗತ್ಯವಾಗಿ ಆಗಬೇಕಾದುದು. ಪ್ರಾರಂಭವಾಡಿರುವುದನ್ನು ಮುಂದಾದರೂ ಲೋಪದೋಷಗಳನ್ನು ಸರಿಪಡಿಸಿದ್ದರೆ ಸರ್ಕಾರದವರ ಉದ್ದೇಶ ಸಾಧನೆಯಾಗುವುದರಲ್ಲಿ ಸಂದೇಹವಿಲ್ಲ.

ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಸರ್ಕಾರದವರು ಜನಸಾಮಾನ್ಯರ ನಿತ್ಯಜೀವನ ಸಮಸ್ಯೆಯನ್ನು ಬಗೆಹರಿಸುವುದಕ್ಕೂ ಆವಶ್ಯಕತೆಗಳನ್ನು ಪೂರೈಸುವುದಕ್ಕೂ ಆವಶ್ಯಕವಾದ ಎಲ್ಲ ಕಾರ್ಯಕ್ರಮಗಳನ್ನೂ ಕೈಕೊಳ್ಳುತ್ತಾರೆಂಬ ಭರವಸೆ ಇದೆ. ರಾಜಕೀಯದಲ್ಲಿ ಪ್ರತಿ ಪ್ರಜೆಗೂ ಹೆಚ್ಚುಹೆಚ್ಚಿನ ಹಕ್ಕುಬಾಧ್ಯತೆ ದೊರೆಯುತ್ತದೆ, ಮುಂದೆ ತನ್ನ ಹಳ್ಳಿಯ ಆಡಳಿತದಲ್ಲಿ ಭಾಗವಹಿಸಲು ಹೆಚ್ಚಿನ ಅವಕಾಶವಾಗುತ್ತದೆ. ರಾಜಕೀಯದಲ್ಲಿ ತಾನು ಹೆಚ್ಚಿನ ತಿಳಿವಳಿಕೆಯನ್ನುಂಟುಮಾಡಿಕೊಳ್ಳಬೇಕು, ತನ್ನ ಊರಿನ ಸೇವೆಯನ್ನು ಮಾಡಬೇಕು, ಮುಂದೆ ಇಡೀ ದೇಶಕ್ಕೆ, ಇಡೀ ಭಾರತಕ್ಕೇ ಸೇವೆ ಸಲ್ಲಿಸುವುದಕ್ಕೆ ಅವಕಾಶ ಸಿಕ್ಕುತ್ತದೆ ಎಂಬ ಆಶೆ ಭರವಸೆಗಳು ದೊರಕುತ್ತವೆಂಬುದನ್ನು ಈ ಭಾಷಣದಲ್ಲಿ ಕಾಣಬಹುದಾಗಿದೆ. ಯಾವುದೊಂದು ಸರ್ಕಾರವೇ ಆಗಲೀ, ರಾಷ್ಟ್ರವೇ ಆಗಲೀ ಕೆಳಗಿರುವ ಪ್ರಜಾವರ್ಗದವರನ್ನು ಮೇಲೆತ್ತುವುದಕ್ಕೆ ಬೇಕಾದ ಸಾಧನೋಪಾಯಗಳನ್ನು ಕಲ್ಪಿಸದೇ ಹೋದರೆ ನಿಜವಾಗಿಯೂ ಆ ಸರ್ಕಾರ ತನ್ನ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲ. ಮುಖ್ಯವಾಗಿ ಹಳ್ಳಿಗಾಡಿನ ಪ್ರಗತಿಗೆ ಬೇಕಾದ ರಾಜಕೀಯದಲ್ಲಿ ಮಾರ್ಪಾಡು, ಆರ್ಥಿಕ, ಸಾಮಾಜಿಕ ಮತ್ತು ನೈತಿಕ ವಿಷಯಗಳಲ್ಲಿ ಬೇಕಾದ ಮಾರ್ಪಾಡು ಇವುಗಳಿಗೆ ಏನುಬೇಕೋ ಅದನ್ನು ಸರ್ಕಾರದವರು ಕೈಕೊಳ್ಳುತ್ತಾರೆಂಬ ಆಶೆಯನ್ನು ತಮ್ಮ ಭಾಷಣದಲ್ಲಿ ಶ್ರೀಮನ್ಮಹಾರಾಜರವರು ತೋರಿಸಿಕೊಟ್ಟಿದ್ದಾರೆ. ಇದು ಸಾಧ್ಯವಾದರೆ ಆಗ ಅದೇ ರಾಮರಾಜ್ಯವಾಗುತ್ತದೆ. ವಿದ್ಯೆ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಈ ನಾಲ್ಕು ವಿಷಯಗಳಲ್ಲಿಯೂ ಪ್ರಗತಿಮಾರ್ಗದಲ್ಲಿ ಬಹುದೂರ ಹೆಜ್ಜೆಯಿಟ್ಟಂತಾಗುತ್ತದೆ. ಹಿಮಾಲಯದಷ್ಟು ಮಾಡಬೇಕಾಗಿರುವುದರಲ್ಲಿ ಮಾಡಿರುವುದು ಈಗ ಕೇವಲ ಸ್ವಲ್ಪ ಎಂದು ಎದುರಾಳಿಗಳು ಭಾವಿಸಬಹುದು. 'ಸತ್ಯಮೇವ ಜಯತೇ' ಎಂಬ ಧ್ಯೇಯವನ್ನು ಮುಂದಿಟ್ಟುಕೊಂಡು ಮುಂದುವರಿಯೋಣ. ಮಾಡಬೇಕಾದುದು ಇನ್ನೂ ಬಹಳವಾಗಿದೆ, ಎಡರುತೊಡರುಗಳೂ ಇವೆ. ಆದರೂ ಕೂಡ ಸತ್ಯಮಾರ್ಗದಲ್ಲಿ ಹೋಗಿ ದೇಶದ ಏಳಿಗೆಗಾಗಿ ಸರ್ಕಾರ ದುಡಿಯುತ್ತದೆಂದು ಹೇಳಿರುವ ಈ ಭಾಷಣ ಎಲ್ಲ ಪ್ರಜಾವರ್ಗದಲ್ಲಿಯೂ ಈ ಸಭೆಯ ಮಾನ್ಯ ಸದಸ್ಯರಲ್ಲಿಯೂ ಅಭಿನಂದನಾರ್ಹವೂ ಸ್ವಾಗತಾರ್ಹವೂ ಆಗಿದೆ ಎಂದು ಹೇಳಿ ನನ್ನ ಅಲ್ಪಮತಿಗೆ ತೋರಿದ ಇಷ್ಟು ವಿಷಯಗಳನ್ನು ಹೇಳಿ ಶ್ರೀಮನ್ಮಹಾರಾಜರವರಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನು ಸಮರ್ಪಿಸಬೇಕೆಂದು ವಿನಯದಿಂದ ವಿನಂತಿ ಮಾಡಿಕೊಳ್ಳುತ್ತೇನೆ.

*ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಮಾನ್ಯ ಅಧ್ಯಕ್ಷರೆ, ಶ್ರೀಮನ್ಮಹಾರಾಜರವರು ನೆನ್ನೆಯ ದಿನ ಅಪ್ಪಣೆ ಕೊಡಿಸಿರುವ ಭಾಷಣವು ಬಹಳ ಸ್ವಾಗತಾರ್ಹವಾಗಿದೆ. ಅವರು ತಮ್ಮ ಭಾಷಣದಲ್ಲಿ ಸರ್ಕಾರದವರು ತಮ್ಮ ಆಡಳಿತದಲ್ಲಿ ನಡೆಸಿರತಕ್ಕ ಕೆಲಸಕಾರ್ಯಗಳನ್ನೂ ಮತ್ತು ಮುಂದೆ ಮಾಡಬೇಕಾಗಿರತಕ್ಕ ಕೆಲಸಕಾರ್ಯಗಳನ್ನೂ ಸೂಕ್ಷ್ಮವಾಗಿ ತಿಳಿಸಿ ಪ್ರತಿಯೊಂದು ವಿಚಾರದಲ್ಲಿಯೂ ಸಹ ತಮ್ಮ ಅಭಿಪ್ರಾಯವೇನೆಂಬುದನ್ನು ಸೂಚಿಸಿ ಅಮೋಘವಾದ ಭಾಷಣವನ್ನು ಮಾಡಿದ್ದಾರೆ. ಇದಕ್ಕಾಗಿ ಶ್ರೀಮನ್ಮಹಾರಾಜರವರಿಗೆ ನಾವೆಲ್ಲರೂ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಬೇಕಾಗಿದೆ. ಈ ದೃಷ್ಟಿಯಿಂದ ಈ ಭಾಷಣವು ನಮ್ಮೆಲ್ಲರ ಮೆಚ್ಚುಗೆಯನ್ನೂ ಪಡೆದು ಸ್ವಾಗತಾರ್ಹವಾಗಿದೆ. ಅವರ ಭಾಷಣದಲ್ಲಿ ಹೇಳಿರತಕ್ಕ ಎಲ್ಲ ವಿಚಾರಗಳ ಮೇಲೂ ಸಹ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಗೋಜಿಗೆ ಹೋಗದೆ, ಒಂದೆರಡು ವಿಚಾರಗಳಲ್ಲಿ ಮಾತ್ರ ಕೆಲವು ರಚನಾತ್ಮಕ ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ.

ಶ್ರೀಮನ್ಮಹಾರಾಜರವರು ನಮ್ಮ ಪ್ರಗತಿ ಮತ್ತು ಅಭಿವೃದ್ಧಿಯ ವಿಚಾರದಲ್ಲಿ ಬಹಳ ಮೆಚ್ಚುಗೆಯಾದ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಂದು ವಿಷಯವಂತೂ ನಿಶ್ಚಯ. ನಮ್ಮ ಸರ್ಕಾರದವರು ಮತ್ತು ಶ್ರೀಮನ್ಮಹಾರಾಜರವರು ಭಾರತದಲ್ಲಿ ಇತರ ಯಾವ ಪ್ರಾಂತದಲ್ಲಿಯೂ ನಡೆಯದೇ ಇರುವಷ್ಟು ಹೆಚ್ಚಿನ ಕೆಲಸವನ್ನು ಸಾಧಿಸಿದ್ದಾರೆ. ಇದಕ್ಕಾಗಿ ನಾವುಗಳೆಲ್ಲರೂ ಚಿರಋಣಿಗಳಾಗಿದ್ದೇವೆ. ಅಂದ ಮಾತ್ರಕ್ಕೇ ಇಷ್ಟೇ ಸಾಕೆಂದು ಹೇಳುವುದಕ್ಕಾಗುವುದಿಲ್ಲ. ಸಾಮಾಜಿಕಾಭಿವೃದ್ಧಿ, ಆರ್ಥಿಕ ಮತ್ತು ವಿದ್ಯಾಭ್ಯಾಸ ವಿಚಾರಗಳಲ್ಲಿ ಸರ್ಕಾರದವರು ಮಾಡಿರತಕ್ಕ ಕೆಲಸಕಾರ್ಯಗಳನ್ನು ಪ್ರಸ್ತಾಪಿಸಿ ಅವರು ಒಂದೆರಡು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಇವುಗಳ ಪೈಕಿ ಸಮಾಜ ಸುಧಾರಣೆಗಳ ಸಂಬಂಧವಾಗಿ ಆಗಿರತಕ್ಕ ಒಂದೆರಡು ಶಾಸನಗಳನ್ನು ಪ್ರಸ್ತಾಪಿಸಿದ್ದಾರೆ. ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ Mysore Temple Entry Authorisation Act ಮತ್ತು Civil Disabilities Removal Act ಇವುಗಳ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅವರ ನಿಜವಾದ ಇಷ್ಟಾರ್ಥ ಪೂರ್ಣವಾಗಿ ನೆರವೇರಬೇಕಾದರೆ ಇನ್ನೂ ಅನೇಕ ಸಾಮಾಜಿಕ ಸುಧಾರಣೆಗಳಾಗುತ್ತವೆಂದು ವ್ಯಕ್ತವಾಗುತ್ತದೆ. ಸರ್ಕಾರ ಇನ್ನೂ ಹೆಚ್ಚು ಶ್ರಮಪಟ್ಟು, ಇನ್ನೂ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡು, ಇನ್ನೂ ಹೆಚ್ಚಿನ ಕೆಲಸಕಾರ್ಯಗಳನ್ನು ಮಾಡುವುದರಲ್ಲಿ ಕಾತುರರಾಗಿದ್ದಾರೆಂದು ಅವರು ಸೂಚಿಸಿದ್ದಾರೆ. Temple Entry Authorisation Act ಇನ್ನೂ ಉತ್ತಮ ರೀತಿಯಲ್ಲಿ ಸುಧಾರಣೆಯಾಗಲು ಒಂದೆರಡು ಸಲಹೆಗಳನ್ನು ನಾನು ಸೂಚಿಸುತ್ತೇನೆ.

ಮೈಸೂರು ಸಂಸ್ಥಾನದಲ್ಲಿ ಮಾಡಿರತಕ್ಕ ಶಾಸನವು ಭಾರತ ರಾಜ್ಯಾಂಗದಲ್ಲಿರತಕ್ಕಂಥ ಪ್ರಾವಿಜನ್‌ಗೆ ಸರಿಹೊಂದಿಕೊಂಡು ಹೋಗುವ ರೀತಿ ಮಾಡುವ ವಿಚಾರದಲ್ಲಿ ನಾವುಗಳು ಮತ್ತು ನಮಗಿಂತ ಹೆಚ್ಚಾಗಿ ಶ್ರೀಮನ್ಮಹಾರಾಜರವರೂ ಮತ್ತು ಸರ್ಕಾರದವರೂ ಸಹ ಹಿಂದೆ ಬೀಳುವುದಿಲ್ಲವೆಂದು ನಾನು ಭರವಸೆಯುಳ್ಳವನಾಗಿದ್ದೇನೆ. ದೇವಾಲಯ ಪ್ರವೇಶದ ಮಸೂದೆಯ ವಿಚಾರದಲ್ಲಿ ನಾನು ಮಾಡಬೇಕೆಂದಿರುವ ಸಲಹೆಯೇನೆಂದರೆ ಫಂಡಮೆಂಟಲ್ ರೈಟ್ಸ್‌ನಲ್ಲಿರತಕ್ಕ 25ನೆಯ ಆರ್ಟಿಕಲ್‌ನಲ್ಲಿ ಈರೀತಿ ಸೂಚಿಸಿದ್ದಾರೆ:—

Article 25 :—

"(1) Subject to public order, morality and health and to the other provisions of this Part, all persons are equally entitled to freedom of conscience and the right freely to profess, practise and propagate religion.

(2) Nothing in this article shall affect the operation of any existing law or prevent the State from making any law—

(a) regulating or restricting any economic, financial, political or other secular activity which may be associated with religious practice ;

(b) providing for social welfare and reform or the throwing open of Hindu religious institutions of a public character to all classes and sections of Hindus."

And this is further explained in an Explanation which says :

"In sub-clause (b) of clause (2), the reference to Hindus shall be construed as including a reference to persons professing the Sikh, Jaina or Buddhist religion, and the reference to Hindu religious institutions shall be construed accordingly."

ಸ್ವಾಮಿ, ಇದರ ಜೊತೆಗೆ ಫಂಡಮೆಂಟಲ್ ರೈಟ್ಸ್ 13ನೆಯ ಆರ್ಟಿಕಲ್ ನೋಡಿದರೆ ನನ್ನ ಸಲಹೆ ರಚನಾತ್ಮಕವಾದ ಸಲಹೆಯಾಗುತ್ತದೆಯೆಂದು ನಂಬಿದ್ದೇನೆ.

Article 13 (1) says :—

"All laws in force in the territory of India immediately before the commencement of this Constitution, in so far as they are inconsistent with the provisions of this Part, shall, to the extent of such inconsistency, be void."

There has been a doubt whether the present Temple Entry legislation to the extent of that repugnancy stands corrected. It is very necessary that a formal amendment is introduced in this piece of legislation to which reference has been made by His Highness the Maharaja of Mysore. I have looked into the Concurrent List and also the State List. The State is free to make laws regarding these things. It is stated that institutions of a public character should be thrown open and it is also stated that

"Nothing in this article shall affect the operation of any existing law or prevent the State from making any law—

'providing for social welfare and reform or the throwing open of Hindu religious institutions of a public character to all classes and sections of Hindus."

At the time when the Mysore Legislation in regard to this was passed, the definition of "Hindus" did not include the Jains, the Buddhists and the Sikhs. Now when this Constitution is adopted in Mysore, I feel that that repugnancy goes and the legislation stands corrected. However a formal legislation in Mysore, I feel, is necessary.

With regard to one point raised by my Hon'ble friend whether legislation of that kind can be thought of by the Legislature of a State, I have made myself very clear that this Legislature can make laws for the State in regard to the subjects referred to in the Concurrent List and also the State List. And also in article 13 it has been made very clear that—

"The State shall not make any law which takes away or abridges the rights conferred by this Part and any law made in contravention of this clause shall, to the extent of the contravention, be void."

So in respect of anything which abridges and takes away the right given by this Constitution under the fundamental rights, I think no attempt can be made by any State to take away these rights under the Constitution. In conformity with the provisions of the Indian Constitution, I make a constructive suggestion to the Government, to the public and to the Hon'ble Members of this House to see that this Temple Entry Authorisation Act referred to by His Highness the Maharaja is placed on a par with the Indian Constitution Act so far as religious institutions which are of a public character are concerned. That is one constructive suggestion, I feel.

With regard to the other, the Civil Disabilities Removal Act, nothing much can be said. Only a formal amendment is necessary. At the time of passing the legislation in 1943 it was not clearly stated whether the legislation then passed came into force from the date of the assent given by His Highness the Maharaja. That is not made clear in the legislation and I think it is very necessary to make it clear. By this I feel that so far as the social disabilities

Karnataka State Archives (Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
4701
Accession No. ......

are concerned, we will be creating facilities to the Depressed Classes for their economic and social advancement and I am sure that our Government are prepared to come to my aid by taking my suggestion into consideration and seeing that these so-called anomalies are set right by constitutional remedies.

ಸ್ವಾಮಿ, ಶ್ರೀಮಾನ್ ಮಹಾರಾಜರವರು ತಮ್ಮ ಅಮೋಘವಾದ ಭಾಷಣದ ಕೊನೆ ಪ್ಯಾರಾದಲ್ಲಿ ಈ ರೀತಿ ಹೇಳಿದ್ದಾರೆ :—

> "It is my earnest prayer that we should so work our Constitution as to succeed in securing to all citizens, what in the preamble has been so inspiringly stated, namely,
>
> 'Justice, social, economic and political'."

ನಾವೆಲ್ಲರೂ ಸಹ ಬಹಳ ಮುತುವರ್ಜಿಯಿಂದ ಸಹಕರಿಸಿ ಈ ರಾಜ್ಯಾಂಗದಲ್ಲಿರತಕ್ಕ ಪ್ರತಿಯೊಂದು ಆರ್ಟಿಕಲ್‌ನಲ್ಲಿರತಕ್ಕ ವಿಷಯವು ಕಾರ್ಯತಃ ನಡೆಯಲಿ ಎಂಬುದಾಗಿ ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇವೆ ಎಂದು ಅವರು ಹೇಳಿದ್ದಾರೆ. ಅದರಂತೆಯೇ ನಮ್ಮ ಸರ್ಕಾರದವರೂ ಸಹ ಸರ್ವ ಪ್ರಯತ್ನ ಮಾಡುತ್ತಾರೆಂದು ನನ್ನ ಭಾವನೆ. ಹಾಗೆ ಮಾಡುವುದರ ಜೊತೆಗೆ, ಎಲ್ಲಾ ವಿಚಾರದಲ್ಲೂ ಹೇಳುವುದಕ್ಕೆ ಹೋಗದೆ ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ.

Mr. SPEAKER.—Does the Honourable Member want to continue his speech ?

Sri M. MADIAH.—Yes.

Mr. SPEAKER.—The House will now adjourn for lunch and meet again at 3-30.

The Assembly rose for Lunch at Three of the Clock and re-assembled at Thirty Minutes past Three of the Clock, Mr. Deputy Speaker (Sri L. H. Thimma Boyi) in the Chair.

ಉಪಾಧ್ಯಕ್ಷರು.—ಈಗ ಶ್ರೀಮಾನ್ ಮಾದಯ್ಯನವರು ತಮ್ಮ ಭಾಷಣವನ್ನು ಮುಂದುವರಿಸಬಹುದು.

ಶ್ರೀ ಎಂ. ಮಾದಯ್ಯನವರು (ಮುಂದುವರಿಸಿದುದು).—ಮಾನ್ಯ ಅಧ್ಯಕ್ಷರೇ, ಈ ಶಾಸನಸಭೆಯ ಪ್ರಥಮ ಕೆಲಸಕಾರ್ಯಗಳಲ್ಲಿ ತಮಗೆ ಅಧ್ಯಕ್ಷತೆವಹಿಸಲು ಅವಕಾಶ ದೊರೆತುದಕ್ಕಾಗಿ ತಮಗೆ ಅಭಿನಂದಿಸಿ ನಾನು ನನ್ನ ಭಾಷಣವನ್ನು ಮುಂದುವರಿಸುತ್ತೇನೆ.

ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದ ಭಾಷಣದ ಪರವಾಗಿ ನಾನೀಗ ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪಿಸಲು ಇಚ್ಛಿಸುತ್ತೇನೆ. ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದ ಭಾಷಣದಲ್ಲಿ ಕೊನೆಯ ಪ್ಯಾರಾದಲ್ಲಿ ಬಹಳ ಪ್ರಾಮುಖ್ಯವಾದ ವಿಷಯ ಒಂದನ್ನು ಪ್ರಸ್ತಾಪಮಾಡಿದ್ದಾರೆ. ಅದನ್ನು ನಾವುಗಳೆಲ್ಲರೂ ಸಹ ಗಮನದಲ್ಲಿಡಬೇಕಾಗಿದೆ. ಈ ಹೊಸ ರಾಜ್ಯಾಂಗದ ಪೀಠಿಕಾ ರೂಪವಾಗಿ ಕೆಲವು ಅಂಶಗಳನ್ನು ಅವರು ಪ್ರಸ್ತಾಪಮಾಡಿದ್ದಾರೆ. ಹಾಗೆ ಪ್ರಸ್ತಾಪಮಾಡುವಾಗ ನಾವುಗಳೆಲ್ಲರೂ ಅದರಲ್ಲಿ ಸೂಚಿಸಿರುವಂತೆ ಇಡೀ ಭಾರತದವರು ಆ ವಿಚಾರಗಳನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಅದನ್ನು ಕಾರ್ಯಗತ ಮಾಡಲು ಸರ್ವರೂ ಸರ್ವ ಪ್ರಯತ್ನಗಳನ್ನೂ ಮಾಡಬೇಕೆಂದು ತಮ್ಮ ಮನ ಬಿಚ್ಚಿ ದೇವರನ್ನು ಪ್ರಾರ್ಥಿಸಿ ಆ ವಿಚಾರಗಳನ್ನು ತಿಳಿಸಿದ್ದಾರೆ. ಆ ಅಂಶಗಳನ್ನು ಸರ್ವರೂ ತಮ್ಮ ಗಮನದಲ್ಲಿಡಬೇಕಾಗಿರುತ್ತೆ. ಇಡೀ ಭರತಖಂಡದ ಜನಾಂಗವೂ ಸಹ ಅದನ್ನು ಗಮನಿಸಬೇಕಾಗಿದೆ. ಅವರು ಹಾಗೆ ಅಪ್ಪಣೆಕೊಡಿಸಿರತಕ್ಕ ಭಾಷಣದಲ್ಲಿ ನಮ್ಮಲ್ಲಿ ಸಮಾಜ ಸುಧಾರಣೆ ಆಗಬೇಕಾಗಿದ್ದರೆ ಸರ್ವರಿಗೂ ಸಮಾನಾವಕಾಶ ಮತ್ತು ಸರ್ವರಿಗೂ ಒಂದೇ ಸಮಾನವಾದ ನ್ಯಾಯ ದೊರಕುವಂತಿರಬೇಕೆಂದು ತಿಳಿಸಿದ್ದಾರೆ. ಸಾಮಾನ್ಯ ಜನಾಂಗಗಳವರ ಆರ್ಥಿಕ ಸ್ಥಿತಿಯು ಉತ್ತಮವಾಗಬೇಕಾಗಿದ್ದರೆ ಸರ್ವರಿಗೂ ಸಮಾನಾವಕಾಶವಿರಬೇಕೆಂದು ಅದರಲ್ಲಿ ಉಲ್ಲೇಖಿಸಿದ್ದಾರೆ. ಅದಕ್ಕೆ ನಾವೆಲ್ಲರೂ ಕಂಕಣ ಕಟ್ಟಿ ನಮ್ಮೆಲ್ಲರ ಸಂಪೂರ್ಣ ಸಹಕಾರ ದೊರೆಯುವಂತೆ ಮಾಡಿದರೆ ಅದು ಪೂರ್ಣಫಲಕಾರಿಯಾಗುತ್ತದೆಂದು ಅವರು ಪ್ರಸ್ತಾಪಮಾಡಿರುವುದು ಬಹಳ ಪ್ರಾಮುಖ್ಯವಾದ ವಿಷಯ ಮತ್ತು ಬಹಳ ಗಂಭೀರಯುತವಾದುದಾಗಿದೆ. ಅದನ್ನು ಕೇಳಿದರೆ ನಮ್ಮ ಶ್ರೀಮನ್ಮಹಾರಾಜರವರಿಗೆ ಸರ್ವರ ವಿಷಯದಲ್ಲಿಯೂ ಎಷ್ಟು ಉದಾತ್ತವಾದ ಧ್ಯೇಯವಿರುತ್ತದೆಂಬುದು ಎಲ್ಲರಿಗೂ ಎದ್ದು ಕಾಣುತ್ತದೆ. ನಾವು ಯಾವಾಗ್ಯೂ ಇದನ್ನು ಮರೆಯುವುದಕ್ಕಾಗುವುದಿಲ್ಲ. ಈ ಬಗ್ಗೆ ಸರ್ವರೂ ಸರ್ವ ಪ್ರಯತ್ನಗಳನ್ನೂ ಮಾಡಬೇಕೆಂದೂ ನಾನು ಪ್ರಾರ್ಥಿಸುತ್ತೇನೆ.

ಈ ಹಿಂದೆ ಆಗಲೇ ನಾನು ಕೆಲವು ವಿಷಯಗಳನ್ನು ಪ್ರಸ್ತಾಪಿಸಿದ್ದೇನೆ. ಆದರೆ ನಾನೀಗ ಗ್ರಾಮಾಭಿವೃದ್ಧಿಯೋಜನೆಯ ಬಗ್ಗೆ ಪ್ರಸ್ತಾಪಿಸಲಿಚ್ಛಿಸುತ್ತೇನೆ. ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿರುವ ಪ್ರಕಾರ ನಮ್ಮ ಸರ್ಕಾರದವರು ಗ್ರಾಮಾಭಿವೃದ್ಧಿ ಮತ್ತು ಆಹಾರೋತ್ಪನ್ನಗಳ ಯೋಜನೆಗಳಿಗೆ ಇತರ ಎಲ್ಲಾ ಯೋಜನೆಗಳಿಗಿಂತಲೂ ಪ್ರಥಮಸ್ಥಾನವನ್ನು ಕೊಟ್ಟಿದ್ದಾರೆಂದು ತಿಳಿಸಿದ್ದಾರೆ. ಆ ಬಗ್ಗೆ ಈಗಾಗಲೇ ಸರ್ಕಾರದವರು ಅನೇಕ ಪ್ರಯತ್ನಗಳನ್ನು ಮಾಡಿರುತ್ತಾರೆ. ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆಯು ಪೂರ್ಣ ಯಶಸ್ವಿಯಾಗಿ, ಅದು ಫಲಕಾರಿಯಾಗಿ ಅದರ ಸೌಲಭ್ಯಗಳು ಜನರಿಗೆ ಉಂಟಾಗಬೇಕಾಗಿದ್ದರೆ ಅದಕ್ಕೆ ಸರ್ವರೂ ತಮ್ಮ ಸಹಕಾರವನ್ನು ನೀಡಬೇಕಾದ್ದು ಅತ್ಯಗತ್ಯವಾಗಿದೆ. ಹಾಗೆ ಮಾಡಿದರೇನೇ ಸರ್ಕಾರದವರು ಈಗ ಹಾಕಿಕೊಂಡಿರುವ ಯೋಜನೆಯು ಮತ್ತು ಅವರ ಉದ್ದೇಶವೂ ಸಫಲವಾಗುತ್ತವೆ. ಈ ವಿಚಾರದಲ್ಲಿ ಸರ್ಕಾರದವರೂ, ಪ್ರಜೆಗಳೂ ಮತ್ತೂ ಸರ್ವರೂ ಹಾಗೂ ಈ ಮಾನ್ಯಸಭೆಯ ಸದಸ್ಯರೂ ಈ ಕೆಲಸವನ್ನು ಯಶಸ್ವಿಗೊಳಿಸಲು ಮತ್ತು 1951ನೆಯ ಇಸವಿಯೊಳಗಾಗಿ ನಾವು ಸ್ವಪರಿಪೂರ್ಣತೆಯನ್ನು ಹೊಂದಲು ಸಹಾಯಮಾಡಬೇಕೆಂದು ನಾನು ತಮ್ಮನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀಮನ್ಮಹಾರಾಜರವರು ಪ್ರಸ್ತಾಪಮಾಡಿರತಕ್ಕ ಅನೇಕ ವಿಷಯಗಳಲ್ಲಿ ಗ್ರಾಮಾಭಿವೃದ್ಧಿ ವಿಚಾರವಾಗಿ ಅವರು ಬಹಳ ಅಮೋಘವಾದ ಭಾಷಣವನ್ನು ಮಾಡಿದ್ದಾರೆ. ಅಷ್ಟೇ ಅಲ್ಲದೆ ಗ್ರಾಮಕೈಗಾರಿಕೆಗಳ ವಿಚಾರದಲ್ಲೂ ಕೂಡ ಅವರು ಬಹಳ ಚೆನ್ನಾಗಿ ತಿಳಿಸಿದ್ದಾರೆ. ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿರತಕ್ಕ ರೀತಿಯಲ್ಲಿ ಸಮಾಜದ ಆರ್ಥಿಕಸ್ಥಿತಿಯು ಉತ್ತಮಗೊಳ್

ಬೇಕಾಗಿದ್ದರೆ ನಾವು ಯಾವ ಮಾರ್ಗವನ್ನು ಕೈಗೊಂಡರೆ ಅದು ಸುಲಲಿತವಾಗಿ ನೆರವೇರಿ ಅದರಿಂದ ಸಮಾಜ ಉತ್ತಮಸ್ಥಿತಿಗೆ ಬರುತ್ತದೆಂಬುದಕ್ಕೆ ಈ ಗೃಹ ಕೈಗಾರಿಕೆ ಮತ್ತು ಗ್ರಾಮಕೈಗಾರಿಕೆಗಳೇ ಮೂಲಾಧಾರವೆಂದು ಅಪ್ಪಣೆಕೊಡಿಸಿದ್ದಾರೆ. ಈ ಬಗ್ಗೆ ಸರ್ಕಾರದವರು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬುದರ ಸಂಬಂಧವಾಗಿ ಶ್ರೀಮನ್ಮಹಾರಾಜರವರು ತಮ್ಮ ಮನಬಿಚ್ಚಿ ಎಲ್ಲಾ ವಿಷಯಗಳನ್ನೂ ಪ್ರಸ್ತಾಪ ಮಾಡಿದ್ದಾರೆ. ಅದೇ ಸಂದರ್ಭದಲ್ಲಿ ನಮ್ಮ ಸರ್ಕಾರದವರು ಈಗಾಗಲೇ ಈ ಬಗ್ಗೆ ಎರಡು ಜಿಲ್ಲೆಗಳಲ್ಲಿ ಕೈಗೊಂಡಿರುವ ವಿಚಾರವನ್ನೂ ಸಹ ಪ್ರಸ್ತಾಪಿಸಿದ್ದಾರೆ. ಈ ಯೋಜನೆಯು ಸಂಸ್ಥಾನಾದ್ಯಂತವೂ ಜಾರಿಗೆ ಬಂದು ಸರ್ವಜನಗಳ ಆರ್ಥಿಕಮಟ್ಟ ಹೆಚ್ಚುವಂತೆ ತಾವೆಲ್ಲರೂ ಸಹಕರಿಸಬೇಕೆಂದು ತಮ್ಮಲ್ಲಿ ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ. ಇದೇ ಸಂದರ್ಭದಲ್ಲಿ ಹರಿಜನರ ಮತ್ತು ನಿಮ್ನ ತರಗತಿಗಳವರ ಆರ್ಥಿಕಸ್ಥಿತಿಯು ಉತ್ತಮಗೊಳ್ಳಬೇಕಾಗಿದ್ದರೆ ಈ ಗೃಹಕೈಗಾರಿಕೆಗಳು ಹೆಚ್ಚು ಹೆಚ್ಚಾದಷ್ಟೂ ಒಳ್ಳೆಯದೆಂದು ಹೇಳತಕ್ಕವರಲ್ಲಿ ಮತ್ತು ನಂಬಿಕೊಂಡಿರುವವರಲ್ಲಿ ನಾನು ಮೊದಲನೆಯವನಾಗಿದ್ದೇನೆ. ಶ್ರೀಮನ್ಮಹಾರಾಜರವರು ಈ ಹರಿಜನರ ಅಭಿವೃದ್ಧಿಯಲ್ಲಿ ತಮಗೆಷ್ಟು ಆಸಕ್ತಿಯಿರುತ್ತದೆಂಬುದನ್ನು ಹೊರಪಡಿಸಿರುವ ಈ ಸಂದರ್ಭದಲ್ಲಿ ಹರಿಜನರ ಮತ್ತು ಆರ್ಥಿಕಸ್ಥಿತಿಯಲ್ಲಿ ಕೆಳಮಟ್ಟದಲ್ಲಿರುವ ಇತರೇ ಜನಾಂಗಗಳವರ ಅಭಿವೃದ್ಧಿಗೆ ನಗರದಲ್ಲಿರುವವರ ವಿಷಯಕ್ಕಿಂತಲೂ ಗ್ರಾಮಾಂತರವಾಸಿಗಳಾಗಿರತಕ್ಕವರ ವಿಚಾರದಲ್ಲಿ ಸರ್ಕಾರದವರು ಇನ್ನೂ ಹೆಚ್ಚಿನ ಆಸಕ್ತಿ ವಹಿಸಬೇಕೆಂದು ಒಂದು ರಚನಾತ್ಮಕಸೂಚನೆಯನ್ನೂ ಸಹ ಕೊಡಲು ಇಚ್ಛಿಸುತ್ತೇನೆ. ಈ ಬಗ್ಗೆ ದೊಡ್ಡದೊಡ್ಡ ಕೈಗಾರಿಕೆಗಳಲ್ಲಿಯೂ ಮತ್ತು ಇತರ ಉದ್ಯಮಗಳಲ್ಲಿರುವಂಥ ಕೂಲಿಗಾರರ ಜೀವನದ ಮಟ್ಟ ಮತ್ತು ಆರ್ಥಿಕಸ್ಥಿತಿ ಉತ್ತಮಗೊಳ್ಳಲು ಸಹಾಯಕವಾದಂಥ ಸನ್ನಿವೇಶಗಳನ್ನೂ ಕಲ್ಪಿಸುವುದರ ಮೂಲಕವೂ ಗ್ರಾಮಕೈಗಾರಿಕೆಗಳು ಮತ್ತು ಗೃಹಕೈಗಾರಿಗಳನ್ನೇ ಹೆಚ್ಚುಹೆಚ್ಚಾಗಿ ಜಾರಿಗೆ ತರುವುದರ ಮೂಲಕವೂ ಇದು ಸಾಧ್ಯವಾಗುತ್ತದೆಂದು ನಾನು ಸೂಚಿಸಲಿಚ್ಛಿಸುತ್ತೇನೆ.

ಎಲ್ಲರಿಗೂ ಸಮಾನಾವಕಾಶವಿರಬೇಕೆಂದೂ, ಅದರ ಸಂಬಂಧವಾಗಿ ಈ ನೂತನ ಕಾನ್‌ಸ್ಟಿಟ್ಯೂಷನ್ನಿನಲ್ಲಿ ಸೂಚಿಸಿರುವ ಬಗ್ಗೆ ನಾವೆಲ್ಲರೂ ಸಹಕರಿಸಿ ಸರ್ವ ಪ್ರಯತ್ನಗಳನ್ನೂ ಮಾಡಬೇಕೆಂದು ಶ್ರೀಮನ್ಮಹಾರಾಜರವರೇ ಅಪ್ಪಣೆಕೊಡಿಸಿದ್ದಾರೆ. ಆರ್ಟಿಕಲ್ 16ರಲ್ಲಿ ಒಂದು ವಿಚಾರ ಹೇಳಿದ್ದಾರೆ. ಅದು ಬಹಳ ಮುಖ್ಯವಾದುದು. ಅದರಲ್ಲಿ ಹೀಗೆ ಹೇಳಿದ್ದಾರೆ.

"There shall be equality of opportunity for all citizens in matters relating to employment or appointment to any office under the State."

ಎಂದು ಹೇಳಿರುವುದು ಮುಖ್ಯವಾದುದು ಎಂದು ನಾನು ಭಾವಿಸುತ್ತೇನೆ.

ಇದರ ಹಾಗೆಯೇ ನಿಮ್ನ ತರಗತಿಯವರ ಸಂಬಂಧವಾಗಿ ರಾಜ್ಯಾಂಗರಚನೆಯಲ್ಲಿರುವುದು 46ನೆಯ ಆರ್ಟಿಕಲ್. ಇಲ್ಲಿ ಹೇಳಿರುವುದು ಬಹಳ ಸಮಾಧಾನಕರವಾಗಿದೆ.

Article 46 of the Constitution states :

"The State shall promote with special care the educational and economic interests of the weaker sections of the people. and in particular, of the Scheduled Castes and the Scheduled Tribes, and shall protect them from social injustice and all forms of exploitation."

ಇದೊಂದು ಸೆಕ್ಷನ್ ಈ ಹಿಂದುಳಿದ ಪಂಗಡದವರಿಗೆ, ಈ ದಲಿತ ಜನಗಳಿಗೆ—ಅವರು ಹರಿಜನರೇ ಆಗಲಿ ಅಥವಾ ಯಾರೇ ಆಗಲಿ—ಅವರು ನಿಮ್ನ ತರಗತಿಯವರೆಂಬ ದೃಷ್ಟಿಯಿಂದ ಮಾಡಿದ್ದಾಗಿದೆ. ಅದರ ಪ್ರಕಾರ ಇವರುಗಳ ಉನ್ನತಿಗಾಗಿ ಒಂದು ಯೋಜನೆಯನ್ನು ಏರ್ಪಡಿಸತಕ್ಕುದು ಬಹಳ ಮುಖ್ಯವಾಗಿದೆ. ಈ ವಿಚಾರದಲ್ಲಿ ಸರ್ಕಾರದವರು ಸರ್ವ ಪ್ರಯತ್ನಮಾಡುತ್ತಿದ್ದಾರೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಶ್ರೀಮನ್ಮಹಾರಾಜರವರು ಇದನ್ನು ತಿಳಿದುಕೊಂಡೇ ತಮ್ಮ ಭಾಷಣದಲ್ಲಿ ಸೂಚನೆಮಾಡಿದ್ದಾರೆ. ಅಂತೂ ಈ ವಿಚಾರದಲ್ಲಿ ಒಂದು ಅಧಿಕೃತವಾದ ಯೋಜನೆಯಿರಬೇಕೆಂದು ನಾನು ಸೂಚಿಸಲಿಚ್ಛಿಸುತ್ತೇನೆ. ಇಂಥಿಂಥಾ ವಿಚಾರಗಳಲ್ಲಿ ಉದಾಹರಣೆಗೆ, ವಿದ್ಯಾಭ್ಯಾಸದ ವಿಚಾರದಲ್ಲಿ ಯಾವ ರೀತಿ ಈ ಹಿಂದುಳಿದ ಪಂಗಡದವರು ಹಿಂದುಳಿದಿದ್ದಾರೆ, ಅವರನ್ನು ಯಾವ ರೀತಿ ಮುಂದಕ್ಕೆ ತರಬೇಕು—ಮುಂತಾದ ವಿಚಾರಗಳಲ್ಲಿ ತಕ್ಕ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಏರ್ಪಡಿಸಬೇಕೆಂದು ನಾನು ಸೂಚಿಸುತ್ತೇನೆ. ಹಾಗೆ ಮಾಡಿ ಮೂರು ವರ್ಷವೋ ಅಥವಾ ಐದು ವರ್ಷವೋ, ಒಂದು ಗೊತ್ತಾದ ಅವಧಿಯಲ್ಲಿ ವಿದ್ಯಾಭ್ಯಾಸ, ಆರ್ಥಿಕ ಮುಂತಾದ ವಿಚಾರಗಳಲ್ಲಿ ಈ ನಿಮ್ನ ತರಗತಿಯವರನ್ನು ಇತರರ ಮಟ್ಟಕ್ಕೆ ತಂದರೆ ಕ್ರಮೇಣ ಎಲ್ಲರೂ ಒಂದು ಸರಿಸಮಾನಸ್ಥಿತಿಗೆ ಬರುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ.

ನಿಮ್ನ ತರಗತಿಯವರ ಪರವಾಗಿ ಇನ್ನೊಂದು ಮುಖ್ಯವಾದ ಸೆಕ್ಷನ್ ಇದೆ. ಅದು 335ನೆಯ ಆರ್ಟಿಕಲ್. ಇದನ್ನೂ ಸಹ ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದ್ದಾರೆ. "I feel attempt shall be made about this also" ಎಂದು ಹೇಳಿದ್ದಾರೆ. ಈ ಆರ್ಟಿಕಲ್‌ನಲ್ಲಿ ಹೀಗಿದೆ:

"The claims of the member of the Scheduled Castes and the Scheduled Tribes shall be taken into consideration, consistently with the maintenance of efficiency of administration, in the making of appointments to services and posts in connection with the affairs of the Union of State."

ಮಾನ್ಯ ಅಧ್ಯಕ್ಷರೇ, ಈ ಆರ್ಟಿಕಲ್‌ನಲ್ಲಿ ಅಡಗಿರತಕ್ಕ ಅರ್ಥ ಬಹಳ ಮುಖ್ಯವಾದದ್ದು. ಈ ವಿಚಾರದಲ್ಲಿ ನಮ್ಮ ಸರ್ಕಾರದವರು ಶ್ರೀಮನ್ಮಹಾರಾಜರವರ ಇಷ್ಟ ಯಾವ ರೀತಿ ಇದೆಯೋ ಅದೇರೀತಿ ಸರ್ವ ವಿಧದಲ್ಲೂ ಸಹ ಪ್ರಯತ್ನಮಾಡುತ್ತಿದ್ದಾರೆಂದು ತಿಳಿದುಕೊಂಡಿದ್ದೇನೆ. ಅವರು ಹಾಗೆ ಮಾಡಿಯೂ ಇದ್ದಾರೆ. ಈ ಪ್ರಕಾರ ರಾಜ್ಯಾಂಗದಲ್ಲಿ constitutional provisions ಏನೇನಿವೆಯೋ ಅವುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಡಿಪಾರ್ಟ್‌ಮೆಂಟ್ ಮೂಲಕವಾಗಿಯಾಗಲೀ ಅಥವಾ ಒಂದು ಸಮಿತಿಯನ್ನಾಗಲಿ ಏರ್ಪಾಟುಮಾಡಿ ಒಂದು ಯೋಜನೆಯನ್ನು ತಯಾರುಮಾಡಿಸಬೇಕೆಂದು ಹೇಳುತ್ತೇನೆ.

Everyone will have to admit that a prominent feature in the administration of Mysore the amelioration of the Depressed Classes. We are grateful and we do not deny it. His Highness the Maharaja has been graciously pleased to say :

"The same policy is being continued and every effort is being made by my Government to

increase their welfare by adopting suitable programmes."

ನಾನು ಹೇಳುವುದೇನೆಂದರೆ, ಇಲ್ಲಿ ಹೇಳಿರುವ suitable programmes ಏನಿವೆಯೋ ಅವುಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಒಂದು ಸರಿಯಾದ ಯೋಜನೆಯನ್ನು ತಯಾರುಮಾಡಬೇಕು ಎಂದು ಇಷ್ಟು ಹೇಳಿ, ಇನ್ನು ತಮ್ಮ ಕಾಲವನ್ನು ಹೆಚ್ಚಾಗಿ ತೆಗೆದುಕೊಳ್ಳದೆ ಶ್ರೀಮನ್ಮಹಾರಾಜರವರ ಭಾಷಣವನ್ನು ಸಂಪೂರ್ಣವಾಗಿ ಪುಷ್ಟೀಕರಿಸುತ್ತಾ, ಮಾನ್ಯಸದಸ್ಯರಾದ ಶ್ರೀ ಸುಬ್ರಹ್ಮಣ್ಯರವರು ತಂದಿರತಕ್ಕ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರುವ ಠರಾವಿನ ವಿಚಾರದಲ್ಲಿ ಮಾತನಾಡುವಾಗ ಕೆಲವು ಮಹನೀಯರು ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಭಾಷಣವು ಸರ್ವಾಂಗಸುಂದರವಾಗಿದೆ, ಬಹಳ ಸಮಾಧಾನಕರವಾಗಿದೆ, ಇನ್ನು ಇದಕ್ಕಿಂತ ಹೆಚ್ಚು ಹೇಳುವ ಅವಶ್ಯಕವಿಲ್ಲ, ನಮಗೆಲ್ಲಾ ಒಪ್ಪಿಗೆಯಿದೆಯೆಂದು ಹೇಳಿದರು. ನನಗೂ ಇದು ಸಂತೋಷವೇ. ಏಕೆಂದರೆ ಕೆಲವು ಒಳ್ಳೆಯ ವಿಚಾರಗಳೂ ಇವೆ. ಆದರೆ ಎಲ್ಲವೂ ಚೆನ್ನಾಗಿದೆ, ಪರಿಪೂರ್ಣವಾಗಿದೆಯೆಂಬ ಮನೋಭಾವದಿಂದ ನಾನು ಮಾತನಾಡಬೇಕೆಂಬ ಆಶೆಯುಳ್ಳವನಾಗಿಲ್ಲ. ಈಗ ನಮ್ಮ ದೇಶದಲ್ಲಿಯೇ ಅಲ್ಲದೆ ಒಟ್ಟು ಇಂಡಿಯಾದೇಶವನ್ನೇ ಕಲಕಿರುವುದೇನೆಂದರೆ ನಮ್ಮ ಇಂಡಿಯಾದೇಶದಲ್ಲಿರುವ ಪರಿಸ್ಥಿತಿಯ ವಿಷಯದಲ್ಲಿ ನಮ್ಮ ಇಂಡಿಯಾ ಸರ್ಕಾರದವರು ಅನುಸರಿಸುತ್ತಿರುವ ನೀತಿ. ಅವರ ನೀತಿ ಸರಿಯಾಗಿದೆಯೇ ಎನ್ನುವ ವಿಷಯ ಸ್ವಲ್ಪ ಅನುಮಾನಕ್ಕೆ ಕಾರಣವಾಗಿದೆ.

ಒಬ್ಬ ಸದಸ್ಯರು.—ಇಂಡಿಯಾ ಸರ್ಕಾರದವರ ನೀತಿಯನ್ನು ನಾವಿಲ್ಲಿ ಪ್ರಶ್ನೆ ಮಾಡಬೇಕಾಗಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಇಂಡಿಯಾ ಸರ್ಕಾರದವರು ಎಂದು ನಿರ್ದಿಷ್ಟವಾಗಿ ಹೇಳದೆ ಇದ್ದರೂ ಆ ಅರ್ಥ ಬರುತ್ತದೆ. ಅವರು ತಮ್ಮ ಭಾಷಣದಲ್ಲಿ ಪೂರ್ವ ಪಾಕಿಸ್ಥಾನದ ವಿಚಾರವನ್ನು ಸೂಚಿಸಿದ್ದಾರೆ. ಅಲ್ಲಿಂದ ಬಹಳ ಜನ ನಮ್ಮ ದೇಶಕ್ಕೆ ಬಂದಿದ್ದಾರೆ, ಕಷ್ಟಕಾಲ ಬಂದಿದೆಯೆಂದು ತಿಳಿಸಿದ್ದಾರೆ. ಆದರೆ ಇದೇ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಯವರು ಯಾವ ತತ್ವವನ್ನು ಅನುಸರಿಸುತ್ತಿದ್ದರೋ ಆ ತತ್ವವನ್ನನುಸರಿಸಿ ಆದರ ಮುಖಾಂತರ ನಾವು ಆ ಕಷ್ಟ ಸಂದರ್ಭವನ್ನು ಹರಿಸಿಕೊಳ್ಳುವುದಕ್ಕೆ ಪ್ರಯತ್ನಮಾಡಬೇಕೆಂದು ಹೇಳಿದ್ದಾರೆ. ಈ ಹೇಳಿಕೆಯ ವಿಚಾರದಲ್ಲೇ ಇರುವ ಅನುಮಾನ. ಇದುವರೆಗೂ ಅದಷ್ಟು ಉಪಶಮನ ಮಾಡಿದ್ದಾಯಿತು. ನಾವು ಮೊದಲಿನಿಂದಲೂ ಹೇಳುತ್ತಲೇ ಇದ್ದೇವೆ. ಯಾವಾಗ ಇಂಡಿಯಾ ದೇಶ ವಿಭಾಗವಾಯಿತೋ ಆಗಿನಿಂದ ಈ ವಿಶ್ವಾಸದ ನುಡಿಗಳಿಂದ ನಾವು ತೊಂದರೆಯಿಂದ ಪಾರಾಗುವುದಿಲ್ಲ. ಏಕೆಂದರೆ ಅಲ್ಲಿಯ ಭಾವನೆ ಆ ರೀತಿಯಿದೆ. ಹಿಂದೂಗಳಿಗೂ ಮುಸ್ಲಿಮರಿಗೂ ವೈಮನಸ್ಯ ಬಂದು ಪಶ್ಚಿಮ ಪಾಕಿಸ್ಥಾನದಿಂದಲೂ ಜನರು ಹೊರಗೆ ಬರುವುದಾದರೆ ನೀವು ಅನುಸರಿಸುತ್ತಿರುವ ತತ್ವಗಳು ನಮಗೆ ಹೊಂದಿಕೆಯಿಲ್ಲ. ಈಗ ನಾವು ಅನುಸರಿಸುತ್ತಿರುವ ನೀತಿಯೇನು ? ನಾಳೆ ದಿವಸ ಅನೇಕ ಜನ ನಿರಾಶ್ರಿತರು ಬರಲು ಪ್ರಾರಂಭವಾದರೆ ನಮ್ಮ ಸರ್ಕಾರದವರೂ ಕೆಲವರನ್ನು ಕಳುಹಿಸಬಹುದು. ಪೂರ್ವ ಪಾಕಿಸ್ಥಾನದಿಂದ ಬಂದಹಾಗೆ ಪಶ್ಚಿಮ ಪಾಕಿಸ್ಥಾನದಿಂದಲೂ ಬರಬಹುದು. 15 ಲಕ್ಷದಷ್ಟು ಒಂದು ಸಲ ಬಂದರೆಂದು ಹೇಳಿದ್ದಾರೆ. ಈಗಲೂ ಬರುತ್ತಲೇ ಇದ್ದಾರೆ. ನಾವೂ ಇಂಡಿಯಾದೇಶದಲ್ಲಿ ಒಂದು ಭಾಗವಾಗಿರುವುದರಿಂದ ನಮ್ಮಲ್ಲಿಗೂ ಬರಬಹುದು. ಇಂದು ನಾವಿಲ್ಲಿ ಸುಖವಾಗಿದ್ದರೂ ಅದು ಹೇಗಾಗಿದೆ ? ಅವರ ಕಷ್ಟ ಎಂಬುದು ನಮಗೆ ಸುಖವನ್ನು ತಂದಿದೆ. ಆದ್ದರಿಂದ ನಾವುಗಳು ಇಂಥಾ ಸ್ಥಿತಿಯಲ್ಲೂ ಶಾಂತಿಯಿಂದ, ಶಿಸ್ತಿನಿಂದ ನಡೆದುಕೊಳ್ಳುತ್ತೇವೆಂದು ಹೇಳುವುದು ಬರೀ ಸ್ವಪ್ನವೆಂದು ತಿಳಿದಿದ್ದೇನೆ.

ಪಾಕೀಸ್ಥಾನದಲ್ಲಿ ಮಾಡಿರುವಂತೆ ನಾವು ಮಾಡುವುದಕ್ಕಾಗುವುದಿಲ್ಲ. ನಮ್ಮ ಕರ್ತವ್ಯವನ್ನು ನಾವು ಮಾಡಬೇಕು. ರಾಜಕೀಯ ಕೆಲಸಕಾರ್ಯಗಳು ಶಾಂತಿ ಮತ್ತು ಶಿಸ್ತಿನಿಂದಲೇ ಸಾಧ್ಯವಾಗುವುದಿಲ್ಲ. ಉತ್ತರ ಇಂಡಿಯಾ ಮತ್ತು ದಕ್ಷಿಣ ಇಂಡಿಯಾಗಳ ಪರಿಸ್ಥಿತಿಯೇ ಬೇರೆ. ನಮ್ಮಲ್ಲಿ ಏನಾದರೂ ಬಂದರೆ ಸರಿಯಾಗಿ ವಿವೇಚನೆ ಮಾಡುವುದಕ್ಕೆ ಸರ್ಕಾರಕ್ಕೆ ಅವಕಾಶವಿಲ್ಲ; ಇದು ಸರಿಯಲ್ಲ. ನಾವು ಯೋಚನೆ ಮಾಡಿ ಇರುವ ತೊಂದರೆಗಳನ್ನು ಮೇಲಿನವರ ಗಮನಕ್ಕೆ ತಂದು ಅದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ಕರ್ತವ್ಯವನ್ನು ನಾವು ನೆರವೇರಿಸಿದಂತಾಗುವುದಿಲ್ಲ.

ಇದನ್ನು ಒತ್ತಾಯವಾಗಿ ಜನರು ಹೇಳಬೇಕಾಗಿದೆ. ಇಂಡಿಯಾದೇಶದ ಪ್ರಜೆಗಳು ಯಾರಿದ್ದಾರೋ ಅವರು ಹೇಳತಕ್ಕದನ್ನು ನಾವು ಆಲೋಚಿಸಬೇಕು. ಒಂದು ವೇಳೆ ನಾನು ಹೇಳುವುದನ್ನು ಒಪ್ಪುವುದಾದರೆ ಇಂಡಿಯಾಸರ್ಕಾರಕ್ಕೇ ಕೆಲವು ಬಾಬುಗಳನ್ನು ವಹಿಸಬೇಕೆಂಬ ಅಭಿಪ್ರಾಯವಿದೆ. ಪಾಕೀಸ್ಥಾನದ ಗಲಭೆಯಿಂದ ಲಕ್ಷಾಂತರ ಜನರು ಹೊರಕ್ಕೆ ಬರುತ್ತಾರೆ. ಅದರಿಂದ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತದೆ, ಇದು ಅನುಭವಪೂರ್ವಕವಾದ ಮಾತು. ಅಗ್ರೆಸಿವ್ ನೇಚರ್ ಎಲ್ಲಿರುತ್ತದೆಯೆಂಬುದನ್ನು ಯೋಚನೆಮಾಡಬೇಕು. ಅನುಭವದ ಮೇಲೆ ಯೋಚನೆಮಾಡುತ್ತಿಲ್ಲ. ಈಗ ಇಂಡಿಯಾದೇಶ ಯುದ್ಧಮಾಡುವುದಕ್ಕೂ ಸಾಧ್ಯವಿಲ್ಲ; ಸುಮ್ಮನಿರುವುದಕ್ಕೂ ಸಾಧ್ಯವಿಲ್ಲ. ಇದಕ್ಕೆ ನನಗೆ ಕಾಣುವುದು ಒಂದೇ ಒಂದು ದಾರಿ. ಅಲ್ಲಿರುವ ಹಿಂದುಗಳು ಕ್ರಮವಾಗಿ ಇಂಡಿಯಾಕ್ಕೆ ಬರುತ್ತಾರೆ. ಅವರು ಉತ್ತರ ದೇಶದ ಕಡೆ ಹೋಗಬೇಕು. ಈಗ ದಕ್ಷಿಣದೇಶ ಅಥವಾ ಉತ್ತರದೇಶ ಎಂಬುದನ್ನು ಹೇಳದೆ ಅಲ್ಲಿರುವವರು ಅಲ್ಲೇ ಇರಲಿ, ಇಲ್ಲಿನವರು ಇಲ್ಲೇ ಇರಲಿ, ಅವರನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ನಾವು ಹೇಳಿದ್ದೇವೆ. ಈಗ the whole world should have taken to arms ಎಂದು ಹೇಳುವ ಸ್ಥಿತಿಯಿಲ್ಲ. ಆ ಅಧಿಕಾರ ಚಲಾಯಿಸುತ್ತಾರೆಂದು ಹೇಳುವುದನ್ನು ಮರೆಯಬೇಕು. ಕಾಶ್ಮೀರದಲ್ಲಿ ಈಗ ಯಾವ ಪರಿಸ್ಥಿತಿಯಿದೆ. International opinion must be set at naught. ಎಲ್ಲಿಯವರೆಗೆ ನಂಬುತ್ತಾರೋ ಅಲ್ಲಿಯವರೆಗೆ ನಮ್ಮ ಸಹೋದರರಿಗೆ ಕಿರುಕುಳ ತಪ್ಪುವುದಿಲ್ಲ. ಸ್ವರಾಜ್ಯ ಬಂದಿದೆಯೆಂದು ಈ ವಿಷಯವನ್ನು ದೊಡ್ಡದಾಗಿ ಮಾತನಾಡಿದೆ. ಸರಿಯಾಗಿ ಯೋಚನೆಮಾಡಿದರೆ ಸಹೋದರರಾದ ಹಿಂದುಗಳೂ ಮತ್ತು ಇತರರೂ ಎಷ್ಟೋ ಜನ ಸತ್ತರು ; ಕೋಟ್ಯಾಂತರ ರೂಪಾಯಿಗಳ ಖರ್ಚಾಯಿತು. ಒಂದು ವೇಳೆ ವಿಭಾಗಕ್ಕೆ ಒಪ್ಪದೇ ಇದ್ದರೆ ಚೆನ್ನಾಗಿತ್ತು. ಆದರೆ ಒಪ್ಪಿದ್ದೇವೆ. ಆದರೆ ನಾವು ಸುಖವಾಗಿದ್ದೇವೆಯೇ ಎಂಬುದನ್ನು ಯೋಚನೆ ಮಾಡಬೇಕು. ಇದು ಇಂಡಿಯಾದ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಆದರೆ ಇದನ್ನು ಮನಸ್ಸಿನಲ್ಲಿಟ್ಟು ಸರಿಯಾಗಿ ಯೋಚನೆ ಮಾಡುತ್ತಿಲ್ಲವೆಂದು ಕಾಣುತ್ತದೆ. ಮೊದಲೇ ಹೇಳಿದ ಹಾಗೆ ಇದು ತಪ್ಪು ದಾರಿಯೆಂದು ಹೇಳಿದರೆ

ನಾನು ಖಂಡಿತವಾಗಿಯೂ ಒಪ್ಪುತ್ತೇನೆ. ಯಾವ ಸಂದರ್ಭ, ಹೇಗೆ ಇದೆ ಎಂದು ನೋಡಿದರೆ ತಪ್ಪಿಲ್ಲವೆಂದು ಕಾಣುತ್ತದೆ. ಇಂಡಿಯಾ ದೇಶದಲ್ಲಿ ನಮ್ಮ ಮುಸ್ಲಿಂ ಸಹೋದರರು ಇದ್ದಾರೆ. ಆದರೆ ಮೊನ್ನೆ ನಡೆದ ಹೈದರಾಬಾದಿನ ವಿಚಾರ ನೋಡಿದರೆ ಅನೇಕ ವಿಷಯಗಳು...................

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ನಾನು ಒಂದು ಕ್ರಿಯಾಲೋಪವನ್ನು ತರಬೇಕಾಗಿದೆ. ಈಗ ಬಂಗಾಳದ ಪ್ರಶ್ನೆ, ಕಾಶ್ಮೀರದ ಪ್ರಶ್ನೆ ಮತ್ತು ಯು.ಎನ್.ಓ. ಪ್ರಶ್ನೆ—ಇವುಗಳ ತರ್ಕವನ್ನು ಇಲ್ಲಿ ಮಾಡುವುದಕ್ಕೆ ಸಮಯವಿಲ್ಲ. ನಾವು ಪಾಕೀಸ್ಥಾನದಲ್ಲಾಗುವ ವಿಷಯವನ್ನೂ ನಮ್ಮ ಜ್ಞಾಪಕದಲ್ಲಿಟ್ಟುಕೊಳ್ಳಬೇಕೆಂದು ಯಾವುದೋ ಒಂದು ಪ್ಯಾರಾದಲ್ಲಿ ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆಂದರೂ ಆಹಾರದ ನೀತಿಯ ಸಂದರ್ಭದಲ್ಲಿ ಮಾತ್ರ ಹೇಳಿದ್ದಾರೆ. ಅದು ಬಹಳ ಚರ್ಚಾಸ್ಪದವಾದ ವಿಚಾರ. ಅದನ್ನು ಹೇಳುವುದಕ್ಕೆ ಇದು ಬಡ್ಜೆಟ್ ಭಾಷಣ ಸಹ ಅಲ್ಲ. ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ ಭಾಷಣದ ಮರೆಯಲ್ಲಿ ಇಂಥ ವಿಶೇಷ ಸಂದರ್ಭಗಳನ್ನು ಕಲ್ಪಿಸಿಕೊಂಡು, ಅವನ್ನು ನಾವು ಈಗ ಉಪಯೋಗಿಸಿಕೊಳ್ಳಬೇಕೆಂದರೆ ಅನೇಕ ವಿಷಯಗಳು ಅದರಲ್ಲಿ ಅಡಕವಾಗುತ್ತವೆ. ಅದಕ್ಕೆ ವಿರೋಧವಾಗಿ ಉತ್ತರವನ್ನು ಕೊಡುವಾಗ ಅವರು ಅನೇಕ ವಿಷಯಗಳನ್ನು ಎತ್ತಬಹುದು. ಆದ್ದರಿಂದ ನಾವು ಮಿತಿಯನ್ನು ಇಟ್ಟುಕೊಳ್ಳಬೇಕಾಗಿದೆ.

ಶ್ರೀ ಎಂ. ಎಲ್. ನಂಜರಾಜ ಅರಸ್‌ರವರು (ಮೈಸೂರು ಜಿಲ್ಲೆ).—ಈ ಕ್ರಿಯಾಲೋಪದಲ್ಲಿ ತಿರುಳಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾಯರು (ಹಾಸನ ಜಿಲ್ಲೆ).—ಶ್ರೀ ಎಚ್. ಬಿ. ಗುಂಡಪ್ಪಗೌಡರು ಇಂಟರ್ನಲ್ ಡಿಫೆನ್ಸ್ ಮತ್ತು ರಕ್ಷಣೆ ವಿಷಯವನ್ನು ಹೇಳಿ ಅಭಿಪ್ರಾಯವನ್ನು ಹೇಳುತ್ತಿದ್ದಾರೆ. ಇದರಲ್ಲಿ ಕ್ರಿಯಾಲೋಪ ಯಾವುದೂ ಕಾಣುವುದಿಲ್ಲ.

ಉಪಾಧ್ಯಕ್ಷರು.—ಶ್ರೀಮನ್ಮಹಾರಾಜರವರ ಭಾಷಣದಲ್ಲಿ ನಮೂದಿಸಿರುವ ವಿಚಾರವನ್ನು ಹೇಳುತ್ತಾ ಮೈಸೂರು ದೇಶದ ವಿಚಾರವನ್ನೂ, ಪೂರ್ವ ಬಂಗಾಳದ ವಿಚಾರವನ್ನೂ ಇಲ್ಲಿ ಪ್ರಸ್ತಾಪ ಮಾಡಬಹುದು. ಈಗ ಮೈಸೂರು ದೇಶಕ್ಕೆ ಸಂಬಂಧಪಟ್ಟ ವಿಷಯ ಮಾತ್ರ ಹೇಳುತ್ತಿರುವುದರಿಂದ ಕ್ರಿಯಾಲೋಪವೇನೂ ಇಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—Thank you, Mr. Deputy Speaker. ಹೈದರಾಬಾದ್ ಮತ್ತು ಇತರ ಕಡೆಗಳಲ್ಲಿ ನಡೆಯುವುದನ್ನು ನೋಡಿದರೆ ಸ್ವಲ್ಪ ದೂರಾಲೋಚನೆ ಮಾಡಬೇಕಾಗಿದೆ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ; ಒಟ್ಟಿನಲ್ಲಿ ಹೇಳುವುದು ಆಹಾರದ ವಿಚಾರ, ಪೂರ್ವ ಪಾಕೀಸ್ಥಾನದಿಂದ 15 ಲಕ್ಷ ಜನರು ಬರುತ್ತಿದ್ದಾರೆ. ಈಗಲೇ ನಮಗೆ ಆಹಾರದ ಕೊರತೆಯಿದೆ, ಹೀಗಿರುವಾಗ ಹೊರಗಿನವರಿಗೆ ಎಲ್ಲಿಂದ ತಂದು ಒದಗಿಸಬೇಕು? ಆಹಾರ ಸ್ವಪರಿಪೂರ್ಣತೆಯ ದೃಷ್ಟಿಯಿಂದ ಇದನ್ನು ಬದಲಾಯಿಸಬೇಕೆಂದು ಹೇಳುವುದಕ್ಕೆ ಅವಕಾಶವಿದೆ. ನಾವು ಸ್ವಲ್ಪ ಆಲೋಚಿಸಬೇಕು. ನಮ್ಮದು ಸ್ವಲ್ಪ ದುರದೃಷ್ಟವೆಂದು ಹೇಳುತ್ತೇನೆ. ಅವರು ಹೇಳಿರುವುದೆಲ್ಲಾ ಸರಿ ಎಂದು ಹೇಳುವ ಮನೋಭಾವವನ್ನು ಬಿಡಬೇಕು. ಅದು ನ್ಯಾಯವೇ, ಈ ಕಾಲಕ್ಕೆ ಸರಿಯೇ, ಬೇರೆ ದಾರಿ ಹಿಡಿಯಬೇಕೆ ಎಂಬುದನ್ನು ಯೋಚಿಸಬೇಕು. ಖಂಡಿತ ನಮಗೆ ಶಾಂತಿ ಬೇಕಾಗಿಲ್ಲವೆಂದು ಕಾಣುತ್ತದೆ. ಇದನ್ನು ಬಹುಶಃ ಅನೇಕ ಸದಸ್ಯರು ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಪೂರ್ವ ಪಾಕೀಸ್ಥಾನದಲ್ಲಿ ನಡೆದ ವಿಚಾರವನ್ನು ಹೇಳಬೇಕಾಯಿತು. ಮುಸ್ಲಿಂ ಸಹೋದರರು ಅಲ್ಲಿಂದ ಬರುವ ಸಂದರ್ಭದಲ್ಲಿ ಅವರಿಗೂ ವಿಚಾರ ತಿಳಿದಿರಬೇಕು. ವರ್ತಮಾನ ಪತ್ರಿಕೆಗಳಲ್ಲೂ ವರದಿಯು ಮೀಟಿಂಗ್ ಮಾಡಬೇಕೆಂದು ಬರುತ್ತಿದೆ. ಆದರೆ ಅದು ಸಾಲದು; ಖಾಯಮಾದ ಒಂದು ಕಮಿಷನ್ ಇರಬೇಕು. ಸ್ಥಳಕ್ಕೇ ಹೋಗಿ ಅಲ್ಲಿದ್ದು ಕೆಲಸ ಮಾಡುವುದಕ್ಕೇ ಖಾಯಮಾದ ಒಂದು ಕಮಿಷನ್ ಮಾಡಬೇಕು. ಹಾಗೆ ಮಾಡುವುದಾದರೆ ಅವರು ಬಂಗಾಳ ಮುಂತಾದ ಕಡೆ ಸುತ್ತುತ್ತಾ ಇದ್ದರೆ ಮುಸ್ಲಿಂ ಸಹೋದರರಿಗೂ ಸಹಾಯಮಾಡಿದಂತಾಗುತ್ತದೆ. ಆದ್ದರಿಂದ ಸ್ಥಳದವರೂ ನಾವೂ ಸೇರಿ ಪರಿಶೀಲಿಸೋಣ.

ಇದೇ ರೀತಿ ಹೋಗುವುದಾದರೆ ಏನಾಗುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ excitement ನಲ್ಲಿ ನೀತಿ ಎಂಬುದೇ ಮರೆತುಹೋಗುತ್ತದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಕೋಪದಲ್ಲಿರುವಾಗ ಏನು ತಪ್ಪನ್ನೂ ಮಾಡದಿದ್ದವರನ್ನು ಹೊಡೆಯುವ ಸಂದರ್ಭವಿರುತ್ತದೆ. ಹೀಗಿರುವಾಗ ಇಂತಹ ಮುಖ್ಯವಾದ ವಿಚಾರದಲ್ಲಿ ನಮ್ಮ ಸಹೋದರರೂ ಮಿತ್ರರೂ ಆದ ಮಾನ್ಯ ಸದಸ್ಯರು ಹೆಚ್ಚಿನ ಗಮನ ಕೊಟ್ಟು ಕೆಲಸ ಮಾಡಬೇಕು. ಸರ್ಕಾರದಲ್ಲಿ ಹೆಚ್ಚು ಪ್ರಭಾವಶಾಲಿಗಳಾಗಿರುವವರು ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಒತ್ತಾಯಪಡಿಸಬೇಕೆಂದು ನನ್ನ ಅಭಿಪ್ರಾಯ.

ಇನ್ನು ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಅನೇಕ ಒಳ್ಳೆಯ ವಿಷಯಗಳೂ ಇವೆ. ಅನೇಕ ವಿಚಾರಗಳಲ್ಲಿ ಪ್ರಗತಿದಾಯಕವಾದ ನೀತಿಗಳನ್ನು ಇಟ್ಟುಕೊಂಡು ಕೆಲವು ಸಮಿತಿಗಳನ್ನು ನೇಮಕ ಮಾಡಿದ್ದಾರೆ. ಹಿಂದೆ ಸರ್ಕಾರದವರು ಇಂತಹ ಸಮಿತಿಗಳನ್ನು ಮಾಡಬೇಕಾದರೆ ಹೆದರುತ್ತಿದ್ದರು. ಏನು ಕ್ರಾಂತಿಕಾರಕ ಬದಲಾವಣೆಗಳನ್ನು ಸೂಚಿಸುತ್ತಾರೋ ಏನೋ ಎಂದು ಹೆದರುತ್ತಿದ್ದರು. ಆದರೆ ಕಾಂಗ್ರೆಸ್ ಸರ್ಕಾರದವರು ಇಂತಹ ಸಮಿತಿಗಳನ್ನು ರಚನೆ ಮಾಡಿದರು, ಸಂತೋಷ. ಹಿಂದೆ ಸಮಿತಿಗಳ ಸಲಹೆಗಳಿಂದ ವರಮಾನ ಎಲ್ಲಿ ಕಡಿಮೆಯಾಗುತ್ತದೆಯೋ ಎಂದು ಹೆದರುತ್ತಿದ್ದರು.

ಶ್ರೀ ಟಿ. ಮರಿಯಪ್ಪನವರು:—ವರಮಾನ ಪ್ರಾಮುಖ್ಯವಲ್ಲ, ನ್ಯಾಯ ದೊರಕಬೇಕಾದುದು ಮುಖ್ಯ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹೌದು. ಈಗಿನ ಸರ್ಕಾರದವರು ಧೈರ್ಯಮಾಡಿ ಭೂಕಂದಾಯದ ಪರಿಶೀಲನಾ ಸಮಿತಿಯನ್ನು ರಚನೆಮಾಡಿದ್ದಾರೆ, ಸಂತೋಷ.

ಒಬ್ಬ ಸದಸ್ಯರು.—ಆ ಸಮಿತಿಯ ವರದಿ ಬಂದಿದೆಯೆ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ವರದಿ ಸಧ್ಯದಲ್ಲೇ ಬರುತ್ತದೆ. ಯಾವಾಗಲೂ ಸ್ವಲ್ಪ ಆಯಾಸಪಟ್ಟ ಮೇಲೇ ಸುಖಬರುವುದು. ಮದುವೆ ಆಗುತ್ತೇನೆ, ಆಗುತ್ತೇನೆ ಎಂದು ಬಹುದಿನ ಕಾದು ಆಮೇಲೆ ಮದುವೆ ಆದರೆ ಅದರಲ್ಲಿ ಹೆಚ್ಚು ಸುಖ. ಅಂತೂ ಸರ್ಕಾರದವರು ಸಮಿತಿಗಳನ್ನು ಮಾಡಿದ್ದಾರೆ, ಸಂತೋಷ. ಈಗ ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಪ್ರಸ್ತಾಪಿಸಿರುವ ನೀತಿಗಳನ್ನು ನೋಡಿ, ಹಿಂದಿನ ಸರ್ಕಾರಕ್ಕೂ ಈಗಿನ ಸರ್ಕಾರಕ್ಕೂ ಏನು ವ್ಯತ್ಯಾಸವಾಗಿದೆ ಎಂದು ನೋಡಿದರೆ, ಎರಡು ವಿಷಯಗಳು ಮಾತ್ರ ನನ್ನ ಕಣ್ಣಿಗೆ ಕಾಣುತ್ತವೆ. ಮೊದಲನೆಯದು, ಬಸ್ಸುಗಳ ರಾಷ್ಟ್ರೀಕರಣ. ಇದನ್ನು ಒಂದು ಪರಿಮಿತಿಯೊಳಗೆ ಮಾತ್ರ ಮಾಡಿದ್ದಾರೆ. ಕಾರಣಾಂತರಗಳಿಂದ, ಹಣವಿಲ್ಲದೆ ಹೀಗೆ ಸ್ವಲ್ಪಮಟ್ಟಿಗೆ ಮಾತ್ರ ಮಾಡಿದ್ದಾರೆ. ಪಾನ

ನಿರೋಧ ಈಗಿನ ಸರ್ಕಾರ ಮಾಡಿದ್ದಲ್ಲದೆ ಹಿಂದಿನ ಸರ್ಕಾರದವರೇ ಸ್ವಲ್ಪ ಮಾಡಿದ್ದರು.

ಶ್ರೀ ಟಿ. ಮರಿಯಪ್ಪನವರು.—ಚನ್ನಪಟ್ಟಣ ಮತ್ತು ಕ್ಲೋಸ್‌ಪೇಟೆಯಲ್ಲಿ ಜಾರಿ ಮಾಡಿದ್ದರು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಜನಾಬ್ ಇಮಾಂರವರ ಅಧ್ಯಕ್ಷತೆಯಲ್ಲಿ ಪಾನನಿರೋಧ ಸಮಿತಿ ಯೆಂದು ಒಂದು ಸಮಿತಿಯನ್ನು ಮಾಡಿದ್ದರು. ಈಗ ಮಾತನಾಡಿದ ಮಾನ್ಯ ಮಿತ್ರರೂ ಆ ಸಮಿತಿಯ ಸದ ಸ್ಯರಾಗಿದ್ದರು, ಆ ಸಮಿತಿಯಲ್ಲಿ ಅರೆಮನಸ್ಸಿನಿಂದ ಕೆಲಸಮಾಡಬಾರದೆಂದು ಜಗಳ ಮಾಡಿದರು. ಆಗ ನನಗೆ ಸಂತೋಷವಾಯಿತು. ಆದರೆ ಈಗೇಕೋ ಅವರು ಸುಸ್ತಾದ ಹಾಗೆ ಕಾಣುತ್ತದೆ. ಅರೆಮನಸ್ಸಿ ನಿಂದ ಕೆಲಸ ಮಾಡಿದರೆ ನನಗೂ ಸಂತೋಷವಿಲ್ಲ, Bus Transport Nationalisation ನಲ್ಲಿ ಖಾಸಗೀ ಜನರಿಗೆ ಅನ್ಯಾಯಮಾಡಬಾರದೆಂದು ನಮ್ಮ ಮಿತ್ರ ರೊಬ್ಬರು ಹೇಳಿದರು. ಆದರೆ ಒಳಗುಟ್ಟಿರುವುದು ಸರ್ಕಾರದವರಲ್ಲಿ ಹಣವಿಲ್ಲ. ನನ್ನ ಅಭಿಪ್ರಾಯದಲ್ಲಿ, ಮಾಡಿದರೆ ಪೂರ್ತಿ ಮಾಡಿ, ಇಲ್ಲದಿದ್ದರೆ ಮಾಡಬೇಡಿ.

Sri T. SUBRAMANYA.—Mr. Speaker, he is misquoting me. What I said was 'Co-ordinating both agencies' I never used the word 'Nationalisation.'

Sri. H. B. GUNDAPPA GOWDA.—My Hon'ble friend might not have used it because it is not convenient. Government have used.

(At this stage the Chair cautioned the Hon'ble Members by ringing the bell).

Sri. H. B. GUNDAPPA GOWDA.—Such interruptions are allowed and such repartees are also allowed.

Nationalisation ಎಂದರೆ ಬೇರೆ ಅರ್ಥ.

Sri. T. MARIAPPA (Home Minister).—Hasten slowly ಎಂದು ಅರ್ಥ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹಾಗಾದರೆ, ಕೆಲವು ಪದಗಳನ್ನು ಹೊಸದಾಗಿ coin ಮಾಡಿಕೊಂಡಿ ದ್ದಾರೆಂದು ಕಾಣುತ್ತದೆ!

ಶ್ರೀ ಎನ್. ಸಿದ್ದಪ್ಪನವರು.—Two sets ಮಾಡಿ ಕೊಂಡು ಯಾವುದು ಅನುಕೂಲವೋ ಅದನ್ನು ಉಪಯೋ ಗಿಸಿಕೊಳ್ಳುತ್ತಾರೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಪಾನನಿರೋಧ ವನ್ನೂ ಪೂರ್ತಿಯಾಗಿ ಮಾಡಲಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಮುಂಚೆ ಕಾಂಗ್ರೆ ಸ್ ಸರ್ಕಾರ ಮಾಡಿದ್ದು.

ಶ್ರೀ ಎಚ್ ಬಿ. ಗುಂಡಪ್ಪಗೌಡರು.—ಅದಕ್ಕೆ ನೀವು credit ತೆಗೆದುಕೊಳ್ಳುವ ಹಾಗಿಲ್ಲ. ಏಕೆಂದರೆ ಆಗ ನೀವು ಇರಲಿಲ್ಲ.

ಹೀಗೆ ಅರ್ಥ ಮಾಡುವುದು ಹಾಸ್ಯಾಸ್ಪದವಾದ ಕೆಲಸ. ಮಾಡುವುದನ್ನು ಧೈರ್ಯವಾಗಿ ಮಾಡಬೇಕು. ಕೆಲವು ಜಿಲ್ಲೆಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದ ರು, ಇನ್ನು ನಾಲ್ಕು ಜಿಲ್ಲೆಗಳಲ್ಲಿ ಜಾರಿಗೆ ತರಲು ಹೆದರಿ ಕೊಂಡರು. ಈಗ ಹಾಸನ ಜಿಲ್ಲೆಯಲ್ಲಿ ಜಾರಿಮಾಡಿಲ್ಲ. ಇದರಿಂದ ಅನೇಕರು ಅಲ್ಲಿ ಕುಡಿತವನ್ನು ಕಲಿತರು.

ಶ್ರೀ ಟಿ. ಸುಬ್ರಹ್ಮಣ್ಯರವರು.—ನೀವು ಈಗ ಹಾಸನ ದಲ್ಲಿ ಪಾನಮಾಡುತ್ತಿದ್ದೀರಾ? The Hon'ble Member is not in Hassan now.

Sri H. B. GUNDAPPA GOWDA.—I am more anxious now. If I were there, I would have weaned them away.

ಏಕೆ ಹೀಗೆ ಮಾಡುತ್ತೀರೆಂದು ಕೇಳಿದರೆ, ಡೆಲ್ಲಿಯಲ್ಲಿ ಅವರು ನಿಧಾನವಾಗಿ ಹೋಗಿ ಎಂದು ಹೇಳುತ್ತಾರೆಂದು ಹೇಳುತ್ತಾರೆ; ಡೆಲ್ಲಿಯವರು ನಮ್ಮ ನೀತಿಯನ್ನು ಒಪ್ಪು ತ್ತಾರೆಂದು ಹೇಳುತ್ತಾರೆಂದು ಹೇಳುತ್ತಾರೆ. ಬೊಂಬಾ ಯಿನವರು ಹೇಗೆ ಮಾಡುತ್ತಿದ್ದಾರೆ? ಅಲ್ಲಿ ಸಂಪೂರ್ಣ ಪಾನನಿರೋಧವನ್ನು ಜಾರಿ ಮಾಡಿದ್ದಾರೆ. ನಮ್ಮಲ್ಲಿ ಎದೆಗಾರರು ಬೇಕು, ಧೈರ್ಯಗಾರರು ಬೇಕು. ಬೊಂಬಾಯಿನಲ್ಲಿ ಪೂರ್ಣ ಪಾನನಿರೋಧವನ್ನು ಜಾರಿ ಮಾಡಿರುವಾಗ ನಮ್ಮ ಮೈಸೂರು ದೇಶಕ್ಕೆ ಬಂದಿರುವ ತೊಡಕಾದರೂ ಏನು? ಹಿಂದೆ ಪೂರ್ಣ ಪಾನನಿರೋಧ ಜಾರಿ ಮಾಡುತ್ತೇವೆಂದು ಹೇಳಿದರು, ಆಗ ನಮಗೆ ಬಹಳ ಸಂತೋಷವಾಯಿತು. ಈ ಸಂಬಂಧದಲ್ಲಿ ಸೇಲ್ಸ್ ಟ್ಯಾಕ್ಸ್ ಹಾಕಿದರು. ಈಗ ಅದನ್ನೂ ವಸೂಲು ಮಾಡು ತ್ತಿದ್ದಾರೆ, ಆದರೆ ಪೂರ್ಣ ಪಾನನಿರೋಧವನ್ನು ಜಾರಿ ಮಾಡಿಲ್ಲ. ಸರ್ಕಾರದವರು ಹೇಳಿಕೊಳ್ಳುತ್ತಿರುವ ಮಾತಿಗೂ ಅವರ ನಡತೆಗೂ consistency ಇದೆಯೆ! ಒಳ್ಳೆಯ ಕೆಲಸ ಮಾಡಿದರೆ ಸಂತೋಷ; ಆದರೆ ಹಿಂದೇಟು ಹೊಡೆದರೆ ಕೋಪ ಬರುತ್ತದೆ. ಬೊಂಬಾಯಿ ನಲ್ಲಿ ಹೊಸದಾಗಿ ಜಾರಿ ಮಾಡಿದರು; ಮದ್ರಾಸಿನಲ್ಲಿ ಕಷ್ಟವಿದ್ದರೂ ಮಾಡಿದರು. ಮೈಸೂರಿನಲ್ಲಿಯೂ ಮುಂದುವರೆದಿದ್ದರೆ, ಆಗ ನಮ್ಮಲ್ಲಿ ಹಣವೂ ಇತ್ತು, ಚೆನ್ನಾಗಿತ್ತು. ಆಗಲೇ ಧೈರ್ಯಮಾಡಿದ್ದಿದ್ದರೆ ಮುಂ ದುವರಿಯುತ್ತಿತ್ತು. ಆದರೆ ಸರ್ಕಾರದವರಿಗೆ ಧೈರ್ಯ ವಿಲ್ಲ. ಸೇಲ್ಸ್‌ಟ್ಯಾಕ್ಸ್ ಹಾಕಿದರು. ಈಗ ಅದನ್ನು ವಸೂಲುಮಾಡಲು moral justification ಇಲ್ಲ. ಸುಂಕ ಮಾತ್ರ ಹಾಕಿ ಪಾನನಿರೋಧ ಜಾರಿಗೆ ತರಲಿಲ್ಲ. ಪೂರ್ಣ ಪಾನನಿರೋಧವನ್ನು ಜಾರಿ ಮಾಡಿದರೆ ಸರ್ಕಾ ರದವರಿಗೆ ನಾನು ಪೂರ್ತಿಯಾಗಿ ಅಭಿನಂದನೆಗಳನ್ನು ಕೊಡುತ್ತೇನೆ, ಅವರು ದೇಶದ ಕೃತಜ್ಞತೆಗೆ ಪಾತ್ರ ರೆಂದು ಹೇಳುತ್ತೇನೆ. ಕಾರಣ ಕೇಳಿದರೆ, illicit distillation ಹೆಚ್ಚುತ್ತದೆಂದು ಹೇಳುತ್ತಾರೆ. ಇದು ಸರಿಯಾದ ಕಾರಣ ಲ್ಲ. ಹಾಗೆ ಮಾಡಿದರೆ ಅಂಥವ ರನ್ನು ಹಿಡಿದು ಶಿಕ್ಷಿಸಬೇಕು. ಇನ್ನು ಮುಂದಾದರೂ ಧೈರ್ಯಮಾಡಿ ಸಂಪೂರ್ಣ ಪಾನನಿರೋಧವನ್ನು ಜಾರಿಗೆ ತಂದರೆ ನನಗೆ ಸಂತೋಷವಾಗುತ್ತದೆ.

ಇನ್ನು ಗ್ರಾಮಸುಧಾರಣೆ ಎಂದು ಹೇಳಿದರು. ಅದರ ವಿಚಾರವನ್ನು ಹೇಳಲು ನನಗೆ ಇಷ್ಟವಿಲ್ಲ. ಶ್ರೀಮನ್ಮಹಾರಾಜರವರು ಹೇಳಿರುವ ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಸರ್ಕಾರದವರು ಕೀರ್ತಿಯನ್ನು ತಮಗೆ ತಾವೇ ತೆಗೆದುಕೊಳ್ಳುತ್ತಾರೋ ಅಥವಾ ಇತರ ರಿಂದ ತೆಗೆದುಕೊಳ್ಳುತ್ತಾರೋ ಎಂದು ಕೇಳಬೇಕಾಗಿದೆ. ಗೃಹಕೈಗಾರಿಕೆಗಳನ್ನು ಎರಡು ಜಿಲ್ಲೆಗಳಲ್ಲಿ ಏರ್ಪಾಡು ಮಾಡುವ ಸಂಬಂಧದಲ್ಲಿ ಇಂಡಿಯಾ ದೇಶದಲ್ಲೇ ವಿಖ್ಯಾ ತರಾದ ಸರ್ ಎಂ. ವಿಶ್ವೇಶ್ವರಯ್ಯನವರ ಸಲಹೆಯನ್ನು ತೆಗೆದುಕೊಂಡಿದ್ದೇವೆಂದು ವರದಿಯಲ್ಲಿ ಏಕೆ ಸೇರಿಸಿ ದುದು! ಅವರು ದೊಡ್ಡವರು, ಅವರಲ್ಲಿ ನನಗೆ ಅಪಾರ ವಾದ ಗೌರವವಿದೆ. ಆದರೆ ಈ ಭಾಷಣದಲ್ಲಿ ಅವರ ಹೆಸರು ಬರುವುದು ಎಷ್ಟುಮಟ್ಟಿಗೆ ಉಚಿತವಾಗಿದೆಯೆಂ ಬುದನ್ನು ಯೋಚನೆ ಮಾಡಬೇಕಾಗಿದೆ. ಅವರ ಹೆಸ ರನ್ನು ಹೇಳಿ ಮಾಡುತ್ತೀರಿ; ಅಕಸ್ಮಾತ್ ಈ ಯೋಜನೆ ಕೆಟ್ಟು ಹೋದರೆ ಯಾರಿಗೆ ಕೆಟ್ಟ ಹೆಸರು ಬರುತ್ತದೆ?

ಆಗ ಜವಾಬ್ದಾರಿ ಯಾರದು? ಆದಕಾರಣ ಅವರ ಹೆಸರು ಇಲ್ಲಿ ಬರುವುದು ಉಚಿತವಲ್ಲ. ಅದಕ್ಕೆ ಅಷ್ಟು ಔಚಿತ್ಯವಿಲ್ಲವೆಂದು ಹೇಳುತ್ತೇನೆ. ಅವರ ಹೆಸರು ಅದರಲ್ಲಿ ಬರಬಾರದಾಗಿತ್ತು. ನೀವೇ ಸಂಪೂರ್ಣವಾಗಿ ಹೆಸರುಗಳಿಸಿಕೊಳ್ಳಿ. ಗ್ರಾಮಸುಧಾರಣೆಯ ವಿಚಾರದಲ್ಲಿ ಇದು ನಿಪುಣರ ಅಭಿಪ್ರಾಯ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಸರ್ಕಾರದವರು ಯಾವುದೇ ಆಗಲಿ ತಾವೇ ಸ್ವತಃ ಮಾಡಿ ಹೆಸರನ್ನು ಸಂಪಾದಿಸಿದರೆ ನಮಗೆ ಬಹಳ ಸಂತೋಷ. ಇತರರ ಮೇಲೆ ಹಾಕಬೇಡಿ. ಒಳ್ಳೆಯದಾದರೂ ಸರಿ, ಕೆಟ್ಟದ್ದಾದರೂ ಸರಿ. ಇದು ಒಂದು ವಿಚಾರ. ಈಗ ತಾವು ಮಾಡಿರುವುದು ತಪ್ಪಲ್ಲ. ಉದ್ದೇಶ ಒಳ್ಳೆಯದೇ ಏಕೆಂದರೆ ನಮ್ಮ ಜನಗಳು ಮುಂದೆ ಬರಬೇಕಾದರೆ ಕಾಟೇಜ್ ಇಂಡಸ್ಟ್ರೀಸ್ ಖಂಡಿತವಾಗಿಯೂ ಅಭಿವೃದ್ಧಿಯಾಗಲೇಬೇಕು. ಹಿಂದಿನ ಸರ್ಕಾರದವರು ಮಾಡಿದರು. ಆದರೆ ಜಯಪ್ರದವಾಗಲಿಲ್ಲ. ನಾನೂ ಸಹ ಬಹಳ ಕಷ್ಟಪಟ್ಟಿದ್ದೇನೆ. ಸಾಧ್ಯವಾಗಲಿಲ್ಲ. ತಾವು ಅದನ್ನು ಕಾರ್ಯಗತ ಮಾಡಿದ್ದೇ ಆದರೆ ನಿಜವಾಗಿಯೂ ಅಭಿನಂದನಾರ್ಹರು. ಅದನ್ನು ಒಪ್ಪಿಕೊಳ್ಳೋಣ. ಇಷ್ಟು ಕಾಟೇಜ್ ಇಂಡಸ್ಟ್ರೀಸ್ ವಿಚಾರ ಆಯಿತು.

Sri H. SIDDAIYA (Minister for Revenue and Excise).—Please wait and see.

ಶ್ರೀ ಎಚ್. ಬಿ ಗುಂಡಪ್ಪಗೌಡರು.—ನೋಡಿದ್ದಾಯಿತು. ನಮ್ಮ ಹಳ್ಳಿಯಲ್ಲೂ ನೋಡುತ್ತಾ ಇದ್ದೇನೆ. ಈ ವಿಚಾರದಲ್ಲಿ ವ್ಯಸನದಿಂದ ಕತ್ತು ಬಗ್ಗಿಸಬೇಕಾಗಿದೆ. ಇದು ಜಯಪ್ರದವಾಗಬೇಕೆಂಬುದೇ ನನ್ನ ಆಶೆ. ಇದು ನನಗೆ ಬಹಳ ವಿಶ್ವಾಸದ ವಿಷಯ. ಇದು ಸರಿಯಾಗಿ ನಡೆದಿಲ್ಲ 'Fairly satisfactory' ಎಂಬ ಪದ ಇದಕ್ಕೆ ಲಗತ್ತಾಗುವುದಿಲ್ಲ.

ಶ್ರೀ ಎಚ್. ಸಿದ್ದಯ್ಯನವರು.—Credit ಕೊಡೋಣ ಎಂದು ಹೊಸ ಯೋಜನೆ ತಾವು ಏನು ಮಾಡಿದ್ದೀರಿ ಎಂದು ಯೋಚನೆ ಮಾಡುತ್ತಾ ಇದ್ದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಾವು ಎಷ್ಟು ಮಾಡಿದರೂ ನೀವು ನಮಗೆ credit ಕೊಡಲಿಲ್ಲ.

Mr. DEPUTY SPEAKER.—I hope the Hon'ble Members will allow Sri Gundappa Gowda to go on with his speech.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಉಪಾಧ್ಯಕ್ಷರವರಲ್ಲಿ ಹೇಳಿಕೊಳ್ಳುವುದೇನೆಂದರೆ ಅಂಥ interruptions ನ್ನು ಸ್ವಾಗತಿಸುತ್ತೇನೆ. ಬಹಳ ಸಂತೋಷ. ಯಾವತ್ತೂ ನಾನು pessimist ಅಲ್ಲ. ಹೆಚ್ಚು ಆಹಾರ ಬೆಳೆ ಬೆಳೆಯುವ ಯೋಜನೆ ಇದೆ. ಅದು ಹೊಸದೇನೂ ಅಲ್ಲ. ಹೋಗಲಿ, ಇದರಲ್ಲಿ ಇನ್ನೇನಾದರೂ ಹೊಸದಾಗಿ ಇದೆಯೇ, ಇದ್ದರೆ ಕಾಂಪ್ಲಿಮೆಂಟ್ಸ್ ಕೊಡೋಣ ಎಂದು ಹುಡುಕಿದೆ.

ಶ್ರೀ ಟಿ. ಮರಿಯಪ್ಪನವರು.—ಮಲ್ಟಿಪರ್‌ಪಸ್ ಕೋ-ಆಪರೇಟಿವ್ ಸೊಸೈಟಿಗಳನ್ನು ಮಾಡಿದ್ದಾರೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಮುಂಚೆಯೇ ಸೊಸೈಟಿಗಳು ಇದ್ದವು. ಮಲ್ಟಿಪರ್‌ಪಸ್ ಎಂಬ ಹೊಸ ಹೆಸರು ಕೊಟ್ಟರು, ಅಷ್ಟೆ. ಮುಂಚೆ ಆ ಸೊಸೈಟಿಗಳ ಮೂಲಕ ನೇಗಿಲು, ಗುಳ, ಗಾಡಿಪಟ್ಟೆ ಮುಂತಾದುವುಗಳನ್ನು ಹಂಚುತ್ತಾ ಇದ್ದವು. ಗುಳಕ್ಕೆ 15 ಆಣೆ-15½ ಆಣೆ ಹೊರಗಡೆ ಇದ್ದಾಗ ರೂ. 0-5-3 ಗೆ ಅಲ್ಲಿ ಮಾರಿಸಿದ್ದಾರೆ. ಕೋ-ಆಪರೇಟಿವ್ ಸೊಸೈಟಿ ಎಂಬುದಾಗಿ ಇತ್ತು. ಅದನ್ನು ಮಲ್ಟಿಪರ್‌ಪಸ್ ಕೋ-ಆಪರೇಟೀವ್ ಸೊಸೈಟಿ ಎಂದು ಮಾಡಿದ್ದಾರೆ, ಸಂತೋಷ. ಇದೂ ಸಹ ಕಾರ್ಯತಃ ನಡೆಯಬೇಕಾದರೆ ಲಾಯಕ್ಕಾದ ಜನಗಳು ಸಿಕ್ಕುವವರೆಗೂ ಸಾಧ್ಯವಿಲ್ಲವೆಂದು ಮಾನ್ಯ ಮಂತ್ರಿಗಳಲ್ಲಿ ಒಂದು ಸಾರಿ ತಿಳಿಸಿದ್ದೇನೆ. ಯೋಗ್ಯರಾದವರು ಸಿಕ್ಕಿದರೆ ನಿಜವಾಗಿಯೂ ಈ ಕೆಲಸ ನಡೆಯುತ್ತದೆ. ಅಷ್ಟರವಟ್ಟಿಗೆ ನಮ್ಮ ಜನಗಳು civic responsibilities ಕಲಿತಿಲ್ಲ ಎಂದು ಹೇಳಬಹುದು. ಅದರ ವಿಚಾರ ಹೆಚ್ಚಾಗಿ ಮಾತನಾಡಬೇಕಾಗಿಲ್ಲ.

Sri H. K. VEERANNA GOWDA.—That is not the part of the Government.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಪ್ರಜಾಸರ್ಕಾರ ಬಂದರೆ ನಮ್ಮಲ್ಲಿ ಧವಸಧಾನ್ಯ ಇಲ್ಲದೆ ಹೋದ ಪಕ್ಷದಲ್ಲಿ ಜೋಳಿಗೆ ಹಾಕಿಕೊಂಡು ಹೋಗಿ ತರುತ್ತೇವೆ ಎಂದು ಹೇಳುತ್ತಿದ್ದರಲ್ಲಾ ಅದೆಲ್ಲಾ, ಎಲ್ಲಿ ಹೋಯಿತು!

ಶ್ರೀ ಟಿ. ಮರಿಯಪ್ಪನವರು.—ಮೂರು ತಿಂಗಳಿನಲ್ಲಿ 25 ಲಕ್ಷ ಪಲ್ಲಾ ವಸೂಲಾಗಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆಹಾರ ಸಂಗ್ರಹಣೆಯ ಕಾಲದಲ್ಲಿ ಸೊಸೈಟಿಗಳಲ್ಲಿ ಷೇರು ತೆಗೆದುಕೊಳ್ಳಿ ಎಂದು ರೆವಿನ್ಯೂ ಇನ್ಸ್‌ಪೆಕ್ಟರುಗಳೂ, ಅಮಲ್ದಾರರೂ ಹೇಳಿದ್ದಾರೆ.

ಶ್ರೀ ಟಿ. ಮರಿಯಪ್ಪನವರು.—ಅದು ಆಹಾರ ಸಂಗ್ರಹಣೆಯ ಕಾಲ ಅಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಿದರ್ಶನಗಳನ್ನು ಕೊಡುತ್ತೇನೆ. ಆಗ ನ್ಯಾಯವಿಧಾಯಕ ಸಭೆಯ ಅಧ್ಯಕ್ಷನಾಗಿದ್ದುದರಿಂದ ನನ್ನ ಕಾನ್ಸ್ಟಿಟ್ಯೂಯನ್ಸಿಯನ್ನು ಕಾಪಾಡುವುದಕ್ಕೆ ಆಗಲಿಲ್ಲ. ಇನ್ನು ಮುಂದೆ ಅನೇಕ ಅವಕಾಶಗಳು ದೊರೆಯುತ್ತವೆ. 1950ರಲ್ಲಿ ಆಹಾರದ ವಿಚಾರದಲ್ಲಿ ಸ್ವಪರಿಪೂರ್ಣರಾಗುತ್ತೇವೆಂದು ಹೊಸದಾಗಿ ಹೇಳಿದ್ದೀರಿ ಎಂದು ಭಾವಿಸುವ ಹಾಗಿಲ್ಲ. ಸ್ವಪರಿಪೂರ್ಣರಾಗದಿದ್ದರೆ ಸಾಧ್ಯವೇ ಇಲ್ಲ. ಇಂಡಿಯಾ ಸರ್ಕಾರದವರು 19 ಕೋಟಿ ರೂಪಾಯಿ ಕೊಡುತ್ತಾರೆ, ಅದಕ್ಕೆ ಒಂದು ಯೋಜನೆ ಹಾಕಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದರು ಎಂಬ ವರ್ತಮಾನ ಇದೆ.

Sri T. MARIAPPA.—It is not correct. 1949-50ಕ್ಕೆ 42½ ಲಕ್ಷದವರೆಗೂ ಕೊಟ್ಟಿದ್ದರು, 1950-51ಕ್ಕೆ ಇನ್ನೂ ಕೊಟ್ಟಿಲ್ಲ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅದೆಲ್ಲವನ್ನೂ ಉಪಯೋಗಿಸಿದ್ದೀರೋ ಇಲ್ಲವೋ!

ಶ್ರೀ ಎಚ್. ಸಿ. ದಾಸಪ್ಪನವರು.—ಸಾಧ್ಯವಾದಷ್ಟು ಉಪಯೋಗಿಸಿದ್ದೇವೆ. ಮಿಕ್ಕಿದ್ದನ್ನು ಮುಂದೆ ಉಪಯೋಗಿಸುತ್ತೇವೆ. ಲ್ಯಾಪ್ಸ್ ಆಗುವುದಿಲ್ಲ, I think these are all things which will come up in the Budget.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈಗ ಹೆಚ್ಚು ಆಹಾರ ಬೆಳೆ ಬೆಳೆಯುವ ಯೋಜನೆ ಹೊಸದಾಗಿ ಏನೂ ಹಾಕಿದ್ದಲ್ಲ. 15ಲಕ್ಷ ಎಕರೆ ಮಂಡ್ಯಾ ಜಿಲ್ಲೆಯಲ್ಲಿ ಬೆಳೆಯುತ್ತಾ ಇದ್ದರು. ಈಗ 25ಲಕ್ಷ ಎಕರೆಗೆ ಏರಿಸಿದ್ದಾರೆ. ಹೊಸದಾಗಿ ಏನು ಆಗಿದೆಯೋ ನನಗೆ ತಿಳಿದಿಲ್ಲ. ಹೆಚ್ಚು ಆಹಾರ ಬೆಳೆ ಬೆಳೆಯುವುದು ಎಂಬುದು ದೊಡ್ಡ ವಿಚಾರ. ಅದು ಎಲ್ಲರಿಗೂ ಬೇಕಾದ್ದು. ಸರ್ಕಾರದವರು ಧೈರ್ಯವಾಗಿ ಒಂದು ನೀತಿಯನ್ನು ಮಾಡಿ 1950 ರೊಳಗೆ ಸ್ವಪರಿಪೂರ್ಣತೆಯನ್ನು ಹೊಂದಬೇಕಾದ್ದು ಮಹತ್ವದ ವಿಚಾರ. ಆದರೆ ಈ ರೀತಿ ಮುಂದುವರಿದರೆ ಖಂಡಿತವಾಗಿಯೂ ಸ್ವಪರಿಪೂರ್ಣ

ತೆಯ ಯೋಜನೆಗೆ near approach ಆಗುವುದಿಲ್ಲ. ರೈತನ ಸ್ಥಿತಿ ನೋಡಿದರೆ ಮಳೆ, ಬೆಳೆ, ಸರಿಯಾಗಿಲ್ಲ, ಬಹಳ ಕಷ್ಟಸ್ಥಿತಿಯಲ್ಲಿದ್ದಾರೆ, ಬಹಳ ಹುಷಾರಿನಿಂದ ಕೆಲಸ ಮಾಡಬೇಕು. ಈಗೇನೋ ಮೂರು ವರ್ಷದ ದೊಡ್ಡ ಯೋಜನೆ ಹಾಕುತ್ತೇವೆ ಎಂದು ಹಾಕಿದ್ದೀರಿ. ಈಗಾಗಲೇ ವರ್ಷ ಆಯಿತು. ಇನ್ನು 2 ವರ್ಷದಲ್ಲಿ ಬಹಳ ಕೆಲಸ ನಡೆಯುತ್ತದೆ ಎಂದು ಶ್ರೀಮನ್ ಮಹಾರಾಜರವರ ಭಾಷಣದಲ್ಲಿ ಇದೆ. ಇಷ್ಟು ಹೆಚ್ಚು ಆಹಾರ ಬೆಳೆ ಬೆಳೆಯುವ ವಿಚಾರ ಆಯಿತು.

ಎಚ್. ಬಿ. ಗುಂಡಪ್ಪಗೌಡರು (ಮುಂದುವರಿಸಿದುದು).—ಇದಕ್ಕಾಗಿ 3 ವರ್ಷದ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅದರಲ್ಲಿ ಆಗಲೆ ಒಂದು ವರ್ಷ ಕಳೆದು ಹೋಯಿತು. ಇನ್ನು 2 ವರ್ಷಗಳು ಮಾತ್ರ ವಿದೆ.

ಇನ್ನು ಆದಿಕರ್ಣಾಟಕರ ವಿಚಾರವಾಗಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಅವರನ್ನು ಹರಿಜನ ರೆಂದೂ ಕರೆಯುತ್ತಾರೆ ಮತ್ತು ಡಿಪ್ರೆಸ್ಡ್ ಕ್ಲಾಸಿನವ ರೆಂದೂ ಕರೆಯಬಹುದು. ಇವರ ವಿಚಾರದಲ್ಲಿ ಸರ್ಕಾರ ದವರು ಸಹಾಯ ಮಾಡಲು ಬಹಳ ಉತ್ಸಾಹ ಭರಿತ ರಾಗಿದ್ದಾರೆ. ಆದರೆ ಈಗ ಸರ್ಕಾರದವರು ಇವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಹೆಂಚುಗಳನ್ನೂ ಮತ್ತು ಮರದ ಸಾಮಾನುಗಳನ್ನೂ, ಆಲದ ಮರದ್ದಾ ಗಲೀ ಅಥವಾ ಯಾವ ಜಾತಿಯ ಮರದ ಸಾಮಾನಾ ಗಲೀ, ಅಂತೂ ಒದಗಿಸುತ್ತಿದ್ದಾರೆ. ಹೀಗೆ ಮಾಡುವುದ ರಿಂದ ನಿಜವಾಗಿಯೂ ಆ ಡಿಪ್ರೆಸ್ಡ್ ಕ್ಲಾಸಿನವರು ಮುಂದಕ್ಕೆ ಬರುತ್ತಾರೆಯೇ ಅಥವಾ ಅವರ ಬಡತನ ವನ್ನು ನೀಗಲು ಇದರಿಂದ ಏನಾದರೂ ಪ್ರಯೋಜನ ವಾದೀತೆ ಎಂಬುದನ್ನು ಆಲೋಚಿಸಿದರೆ ಇದರಿಂದ ಖಂಡಿತ ಏನೂ ಪ್ರಯೋಜನವಾಗುವುದಿಲ್ಲವೆಂದು ಹೇಳ ಬಹುದು. ಏನೋ ಮನೆಗಳನ್ನು ಕಟ್ಟಿಕೊಳ್ಳಲು ಹೆಂಚು ಗಳನ್ನು ಕೊಂಡುಕೊಳ್ಳತಕ್ಕ ಬಗ್ಗೆ ಅವರಿಗೆ 200 ಅಥವ 250-300 ರೂಪಾಯಿಗಳನ್ನು ಈಗ ಕೊಡು ತ್ತಿದ್ದೀರಿ. ಹೊಟ್ಟೆಗೇ ಇಲ್ಲದಿರುವಾಗ ಬರಿ ಮನೆ ಯೊಂದನ್ನು ಕಟ್ಟಿಸಿಕೊಟ್ಟರೇನಾಯಿತು ! ಆದರೆ ಹಾಗೆ ಮಾಡುವುದಕ್ಕಿಂತ ಉಳುವುದಕ್ಕೆ ಅವರಿಗೆ ಒಂದೊಂದು ಜೊತೆ ಎತ್ತುಗಳನ್ನು ಕೊಡಿಸಿದ್ದರೆ ಎಷ್ಟೋ ಅವರಿಗೂ ಅನುಕೂಲವಾಗುತ್ತಿತ್ತು ಮತ್ತು ಆಹಾರ ಸಮಸ್ಯೆಯೂ ಸಹ ಹಾಗೆ ಮಾಡುವುದರಿಂದ ನಿವಾರಣೆ ಮಾಡಲು ಸಹಾಯವಾಗುತ್ತಿತ್ತು. ಆದರೆ ಮನೆಗಳಿಗೂ ಸಹಾಯ ಮಾಡಿ, ಪುನಃ ಈ ಎತ್ತುಗಳನ್ನೂ ಕೊಡಿ ಎಂದು ಹೇಳು ವುದು "ಬೆಟ್ಟಕ್ಕೆ ಹೊದಿಕೆ ಹೊದ್ದಿಸ ಬೇಕು" ಎಂದು ಹೇಳಿದ ಹಾಗಾಗುತ್ತದೆ. ಆದರೆ ಈ ವಿಚಾರದಲ್ಲಿ ಸರ್ಕಾರದವರೂ ಸಹ ಸ್ವಲ್ಪ ಯೋಚನೆ ಮಾಡಬೇಕಾ ಗಿದೆ. ತಾವೀಗ ಹೆಂಚುಗಳನ್ನೇನೋ ಒದಗಿಸುತ್ತಿ ದ್ದೀರಿ. ಆದರೆ ಅವುಗಳೇನಾದರೂ ಒಂದಾವರ್ತಿ ಹಾರಿಹೋದರೆ ಪುನಃ ಅವುಗಳನ್ನು ತಂದು ಸರಿಪಡಿ ಸಲು ಅವರಿಗೆ ಯತ್ನವಿಲ್ಲ. ಅಲ್ಲದೆ ಇವರಿಗೆ ಒದಗಿಸ ತಕ್ಕ ಹೆಂಚುಗಳಾದರೋ ಕೇವಲ ಅಲ್ಲ ಇಲ್ಲ ಉಪಯೋ ಗಿಸಿದವುಗಳು. ಇವನ್ನೆಲ್ಲಾ ನೋಡಿಯೇ ನಾನು ಹೇಳು ತ್ತಿರುವುದು. ಅವರಿಗೆ ತಲಾ 5 ಎಕರೆಗಳಷ್ಟು ಜಮೀ ನನ್ನೂ ಮತ್ತು ಒಂದು ಜೊತೆ ಎತ್ತುಗಳನ್ನೂ ಕೊಡಿಸಿ ದರೆ ಅವರಿಗೆ ನಿಜವಾಗಿಯೂ ಕೊಂಚ ಮಟ್ಟಿಗಾದರೂ ಸಹಾಯಮಾಡಿದಂತಾಗುತ್ತದೆ. ಹೀಗೆ ಮಾಡಿದರೆ ಗ್ರೋ ಮೋರ್ ಫುಡ್ ಸ್ಕೀಂಗೂ ಬೆಂಬಲ ನೀಡಿದಂತಾಗು ತ್ತದೆ.

ಶ್ರೀ ಎಸ್. ರಂಗರಾಮಯ್ಯನವರು.—ಅವುಗಳನ್ನು ಕಟ್ಟುವುದಕ್ಕೆ ಜಾಗವೆಲ್ಲದೆ ?

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕ ಮಗಳೂರು ಜಿಲ್ಲೆ).—ವಾಸಕ್ಕೆ ಮನೆಯಲ್ಲದಿರುವಾಗ ಏನು ಮಾಡಲಕ್ಕೆ ಸಾಧ್ಯವಿದೆ ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹಾಗಾದರೆ ಈಗ ಮಲೆನಾಡಿನಲ್ಲಿ ಎಷ್ಟು ಜನರು ಹುಲ್ಲಿನ ಮನೆಗಳಲ್ಲಿ ವಾಸ ಮಾಡುತ್ತಿಲ್ಲ? ಹುಲ್ಲಿನ ಮನೆಯು ವಾಸವಾದಾ ಗ್ಯೂ ಬೇಸಿಗೆಯಲ್ಲಿ ತಂಪಾಗಿಯೂ ಮತ್ತು ಮಳೆಗಾಲ ದಲ್ಲಿ ಬೆಚ್ಚಗೂ ಅನುಕೂಲವಾಗಿರುತ್ತದೆ. ಹಾಗೆ ಹಾಲ ಈಗ ವಾಸಮಾಡತಕ್ಕವರಿಗೆಲ್ಲ ಏನು ತೊಂದರೆಯಾಗಿದೆ? ಆದ್ದರಿಂದ ಈ ಮನೆಯ ಸಮಸ್ಯೆಗಿಂತಲೂ ಮೊದಲು ನಾವು ನಿಗಾ ಕೊಡಬೇಕಾಗಿರುವುದು ಅವರ ಹೊಟ್ಟೆ ಮತ್ತು ಜೀವನದ ಮಾರ್ಗ. ಈ ಎರಡಕ್ಕೂ ಪ್ರಥಮ ಸ್ಥಾನ ಕೊಡಬೇಕು, ನಂತರ ಹೆಂಚನ್ನು ಕೊಡುವುದನ್ನು ಆಲೋಚಿಸಬಹುದು. ಅವರಿಗೆ ಮೊದಲು ವ್ಯವಸಾ ಯದ ಮುಟ್ಟುಗಳನ್ನೂ ಮತ್ತು ಬೀಜಗಳನ್ನೂ ಒದಗಿ ಸಿದರೆ ಅನುಕೂಲವಾಗುತ್ತದೆ.

ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ಈಗ ಹೆಂಚುಗಳನ್ನು ಕೊಡು ತ್ತಿರುವುದರ ಜೊತೆಗೆ ಎತ್ತುಗಳನ್ನೂ ಕೊಡಬೇಕೆಂದೂ ತಾವು ಹೇಳುತ್ತೀರೋ ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ತಮ್ಮ ನೀತಿಯ ವಿಚಾರದಲ್ಲಿ ದಯವಿಟ್ಟು ತಾವು ಬದಲಾಯಿಸಿಕೊಳ್ಳ ಬೇಕಾಗಿದೆ. ಇಂಡಿಯಾ ಸರ್ಕಾರದವರು ಕೂಲಿಗಾರರ ವಿಚಾರದಲ್ಲಿ ಬಹಳ ಶ್ರಮಪಡುತ್ತಿದ್ದಾರೆ. ಅದು ಬಹಳ ಸಂತೋಷದ ವಿಷಯ. ಮೊನ್ನೆ ತಾನೆ ನಡೆದ ಲೇಬರ್ ಕಾನ್ಫರೆನ್ಸಿನ ಉದ್ದೇಶಗಳನ್ನು ಕೇಳಿ ನನಗೆ ಬಹಳ ಸಂತೋಷವಾಯಿತು.

ಆದರೆ ಈ ಕೂಲಿಗಾರರ ನೀತಿಯ ವಿಚಾರದಲ್ಲಿ ಅನೇಕ ವಿಧವಾದ ಲೆಜಿಸ್ಲೇಷನ್‌ಗಳು ಈಗ ಜಾರಿಗೆ ಬರಲಿವೆ. ಆದರೆ ಹಾಗೆ ಕಾನೂನುಗಳನ್ನು ಜಾರಿಗೆ ತರುವ ಮುನ್ನ ನಮ್ಮ ದೇಶಕ್ಕೆ ಮತ್ತು ನಮ್ಮ ಸ್ಥಿತಿಗತಿಗಳಿಗನುಗುಣ ವಾಗಿ ಹೊಂದಿಕೊಂಡು ಹೋಗುವಂಥಾವುಗಳನ್ನು ತರ ಬೇಕೇ ಶಿವಾಯಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿರುವು ದನ್ನು ನೋಡಿಕೊಂಡು ಅದರಂತೆ ಇಲ್ಲಿಯೂ ಆಚರಣೆಗೆ ತರುತ್ತೇವೆಂದರೆ ಅದು ಸಾಧ್ಯವಾಗದ ಬದುಕು. ಆದರೆ ನಾನು ಹೇಳುವುದಿಷ್ಟೇ: ನಮ್ಮಲ್ಲಿ ಈಗ ಜಾರಿಗೆ ತರ ಬೇಕೆಂದಿರುವ ಲೆಜಿಸ್ಲೇಷನ್‌ಗಳ ವಿಚಾರದಲ್ಲಿ ನಾವು ಅಷ್ಟು ಆತುರವಾಗಿ ಹೋಗುವುದು ಬೇಡವೆಂದು ಹೇಳುತ್ತೇನೆ. ನಾವು ಕೊಂಚ ನಿಧಾನವಾಗಿ ಹೋಗೋಣ. ನಮ್ಮ ಜನಗಳ ಸ್ಥಿತಿಗತಿಗಳನ್ನೂ ಮತ್ತು ಇವರ ಸಿವಿಕ್ ರೆಸ್‌ಪಾನ್ಸಿಬಿಲಿಟಿಗಳನ್ನು ಪಾಶ್ಚಿಮಾತ್ಯರ ದರ್ಜೆಗೆ ಹೋಲಿಕೆ ಹಾಕಿ, ಅದರಂತೆ ಇಲ್ಲಿಯೂ ಭಾವಿಸಿ ಆ ಕಾನೂನುಗಳನ್ನು ಇಲ್ಲಿ ಜಾರಿ ಮಾಡಲಾಗುವುದಿಲ್ಲ.

ಇನ್ನು ರಾಷ್ಟ್ರೀಕರಣದ ಸಂಬಂಧವಾಗಿ ನಾವು ಎಲ್ಲವನ್ನೂ ಏಕ್‌ದಂ ಮಾಡುತ್ತೇವೆಂದು ಹೇಳುವುದಕ್ಕಾ ಗುವುದಿಲ್ಲ. ನಾನು ಅದಕ್ಕೋಸ್ಕರವಾಗಿ ಸ್ವಲ್ಪ ನಿಧಾನವಾಗಿ ಹೋಗೋಣವೆಂದು ಹೇಳುತ್ತೇನೆ.

ಈ ಅಗ್ರಿಕಲ್‌ಚರಲ್ ಲೇಬರರ್ಸ್ ವಿಚಾರದಲ್ಲಿ ಇಂಡಿಯಾ ಸರ್ಕಾರದವರೇನೋ ಬಹಳ ಮುಂದುವರಿಯುತ್ತಿದ್ದಾರೆ. ಆದರೆ ನಮ್ಮ ಸರ್ಕಾರದವರು ಈ ಬಗ್ಗೆ ಏನು ಕಾರ್ಯ ಕ್ರಮಗಳನ್ನು ಕೈಗೊಂಡಿದ್ದಾರೋ ಅದು ಗೊತ್ತಾಗ ಲಿಲ್ಲ.

ಶ್ರೀ ಕೆ. ಟಿ. ಭಾಷ್ಯಂರವರು (ಲಾ ಮತ್ತು ಲೇಬರ್ ಸಚಿವರು).—ನಾವೂ ಸಹ ಸೂಕ್ತ ಕಾರ್ಯಕ್ರಮ ಗಳನ್ನು ಕೈಗೊಂಡಿದ್ದೇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಬರೀ ಬಿಲ್ಲನ್ನು ಪಾಸ್ ಮಾಡಿದ ಮಾತ್ರಕ್ಕೇ ಅನುಕೂಲವಾಯಿತೆಂದು ಹೇಳುವುದಕ್ಕಾಗುವುದಿಲ್ಲ.

Sri K. T. BHASHYAM.—26 Villages, we are taking for survey.

ಶ್ರೀ ಎಚ್. ಸಿ. ದಾಸಪ್ಪನವರು (ಆರ್ಥಿಕ ಮತ್ತು ಕೈಗಾರಿಕಾ ಸಚಿವರು).—ಆ ಅಗ್ರಿಕಲ್ಚರಲ್ ಕೂಲಿಗಾರರನ್ನೂ ಸಹ ಇದರಲ್ಲಿ ಸೇರಿಸಬೇಕೆಂದು ತಾವು ಹೇಳುತ್ತಿದ್ದೀರೇನು ?

Sri H. B. GUNDAPPA GOWDA.—No; I do not want. But you must at least create some favourable conditions. I would request you earnestly not to create discontentment among the labour class by trying to effect imaginary improvement. It is not only agricultural labour but it is factory labour also. Please go slow.

ಆದರೆ ನಾನೀಗ ಕೈಗಾರಿಕೆಯ ನೀತಿಯ ವಿಚಾರವಾಗಿ ಕೆಲವು ವಿಷಯಗಳನ್ನು ಸೂಕ್ಷ್ಮವಾಗಿ ಹೇಳಿರುತ್ತೇನೆ. ಆದರೆ ಸರ್ಕಾರದವರಿಗೆ ಎಷ್ಟರ ಮಟ್ಟಿಗೆ ದ್ರವ್ಯ ಸಹಾಯ ಮಾಡುವುದಕ್ಕಾಗುತ್ತದೆಂಬುದನ್ನು ನಾನು ಹೇಳಲಾರೆ. ಆದರೆ ತಾವು ಈಗ ಈ ಕೈಗಾರಿಕೆಗಳ ವಿಚಾರದಲ್ಲಿ ಯಾವುಯಾವುದಕ್ಕೋ ಕೈಹಾಕುತ್ತಿದ್ದೀರೆಂಬುದಾಗಿ ಕೇಳುತ್ತೇನೆ. ಉದಾಹರಣೆಗೆ "ರಾಫಿಲಂಸ್" ಇಂಡಸ್ಟ್ರೀಸ್ ಎಂಬುದಕ್ಕೆ ತಾವು ಕೈ ಹಾಕಿರುವುದಾಗಿ ಕೇಳುತ್ತೇನೆ. ಇದಕ್ಕೆ ಕೈಹಾಕುವುದಕ್ಕಿಂತ ಬಿಟ್ಟು ಬಿಡುವುದು ಲೇಸಾಗಿದೆ. ಈಗಾಗಲೇ ನಾವು ಶೇಕಡ 10 ಮತ್ತು 15ರಂತೆ ಬಡ್ಡಿ ತೆಗೆದುಕೊಂಡು ಅಲ್ಲಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ಕೆಲವು ಖಾಸಗೀ ಉದ್ಯಮಗಳನ್ನು ಸರ್ಕಾರದವರು ಏಕದಂ ತೆಗೆದುಕೊಳ್ಳುತ್ತೇವೆಂದು ಹೇಳುವುದು ಅಷ್ಟು ಸಾಧುವಾಗಿ ಕಾಣುವುದಿಲ್ಲ. ಸರ್ಕಾರದಲ್ಲಿ ಅಷ್ಟು ಹಣವಿಲ್ಲ. ಅದಕ್ಕೆ ಅನುಭವಿಗಳೂ ಮತ್ತು ತಾವೂ ಆಲೋಚನೆ ಮಾಡತಕ್ಕ ವಿಚಾರವಾಗಿದೆ. ಶ್ರೀಮನ್ಮಹಾರಾಜರವರು ಈ ವಿಷಯಗಳನ್ನೆಲ್ಲಾ ಬಹಳ ಅರ್ಥಗರ್ಭಿತವಾಗಿ ಅವರ ಭಾಷಣದಲ್ಲಿ ಸೇರಿಸಿ ಅವರು ಭಾಷಣ ಮಾಡಿದ್ದಾರೆ. ಆ ವಿಷಯಗಳಲ್ಲದರ ಬಗ್ಗೆ ನನ್ನ ಒಪ್ಪಿಗೆ ಯಾವು ಯಾವುದಕ್ಕಿರುತ್ತೆಂಬುದನ್ನು ತಿಳಿಸುವಾಗ್ಯೆ ನಾನ ಎಲ್ಲೆಲ್ಲ ಭಿನ್ನಾಭಿಪ್ರಾಯ ಪಡುತ್ತೇನೆ ಮತ್ತು ಅದಕ್ಕೆ ಕಾರಣಗಳೇನೆಂಬುದನ್ನೂ ಸಹ ತಿಳಿಸಿದ್ದೇನೆ. ಆದರೆ ಶ್ರೀಮನ್ಮಹಾರಾಜರವರು 45 ನಿಮಿಷಗಳ ಕಾಲ ಭಾಷಣ ಮಾಡಿದ್ದಾರೆ. ಇದನ್ನು ಯೋಚಿಸಿ ನೋಡಿದರೆ, ಹಿಂದೆ ದಿವಾನರು ಮಾಡುತ್ತಿದ್ದ ಭಾಷಣದಲ್ಲಿ ಅಡಕವಾಗುತ್ತಿದ್ದಂಥ ಅಂಕಿ ಅಂಶಗಳ ಪಟ್ಟಿಯನ್ನು ಮಾತ್ರ ಬಿಟ್ಟು ಉಳಿದೆಲ್ಲ ವಿಷಯಗಳನ್ನೂ ತಿಳಿಸುತ್ತಿದ್ದಂತೆ ಇರುವುದಾಗಿ ಕಂಡುಬರುತ್ತಿದೆ. ಆದರೆ ಅದು ಇನ್ನೂ ಕೊಂಚ "short and sweet" ಆಗಿದ್ದರೆ ಚೆನ್ನಾಗಿರುತ್ತೆಂದು ನನ್ನ ಭಾವನೆ. ಇಂಡಿಯಾದ ಅಧ್ಯಕ್ಷರು ಮಾಡಿದ "short and sweet" ಭಾಷಣದಂತಿದ್ದಿದ್ದರೆ ಚೆನ್ನಾಗಿತ್ತೆಂದು ಕಾಣುತ್ತದೆ. ಇಷ್ಟು ವಿಚಾರಗಳನ್ನು ಪ್ರಸ್ತಾಪಿಸುವಾಗ ನಾನು ಅಲ್ಲಲ್ಲೆ ಕೆಲವು ನನ್ನ ಸಲಹೆಗಳನ್ನೂ ಕೊಟ್ಟಿದ್ದೇನೆ. ಆದರೆ ಅವು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತವೆಂಬುದನ್ನು ನಾನು ನೋಡಬೇಕಾಗಿದೆ.

ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—"ಸಲಹೆಗಳು" ಎಂಬ ಶಬ್ದದ ಜೊತೆಗೆ "ರಚನಾತ್ಮಕ" ಎಂಬುದನ್ನು ಸೇರಿಸಿದ್ದರೆ ಚೆನ್ನಾಗಿರುತ್ತಿತ್ತೆಂದು ನನ್ನ ಸೂಚನೆ.

ಶ್ರೀ ಎ. ಜಿ. ಬಂಡೀಗೌಡರು (ಮಂಡ್ಯ ಜಿಲ್ಲೆ).—ಸ್ವಾಮಿ, ನಮ್ಮ ರಾಜಪ್ರಮುಖರು ಈ ಅಸೆಂಬ್ಲಿಯ ಮುಂದೆ ಅಪ್ಪಣೆ ಕೊಡಿಸಿರತಕ್ಕ ಭಾಷಣದಿಂದ ಎಂದೆಂದೂ ಇಲ್ಲದೆ ಇದ್ದಂಥ ಒಂದು ಸುಸಂದರ್ಭ ನಮಗೀಗ ಒದಗಿದ ಹಾಗೆ ಆಗಿದೆ. ಇಂಗ್ಲೆಂಡಿನಲ್ಲಿಯೂ ಸಹ ರಾಜನು ಅಲ್ಲಿನ ಪಾರ್ಲಿಯಮೆಂಟಿನ ಮುಂದೆ ಈ ರೀತಿಯಾಗಿ ಒಂದು ಭಾಷಣ ಮಾಡತಕ್ಕ ಪದ್ಧತಿ ಜಾರಿಯಲ್ಲಿರುತ್ತದೆ. ನಮ್ಮ ಈ ಹೊಸ ರಾಜ್ಯಾಂಗ ಜಾರಿಗೆ ಬರುವ ಮುನ್ನ ಹೀಗೆ ರಾಜರು ಒಂದು ಅಡ್ರೆಸ್ಸನ್ನು ಕೊಡಲೇಬೇಕೆಂಬುದಕ್ಕೆ ಅವಕಾಶವಿರಲಿಲ್ಲ. ನಮಗೆಲ್ಲರಿಗೂ ಗೊತ್ತಿರುವಹಾಗೆ ದಿವಾನರವರು ಮಾತ್ರ ಹೀಗೆ ಒಂದು ಭಾಷಣವನ್ನು ಇಂಥಾ ಅಧಿವೇಶನದ ಪ್ರಾರಂಭದಲ್ಲಿ ಮಾಡುತ್ತಿದ್ದರು. ಆ ಭಾಷಣದಲ್ಲಿ ದೇಶದ, ಸರ್ಕಾರದವರ ನೀತಿ ಮತ್ತು ಸರ್ಕಾರ ಯಾವ ರೀತಿ ಕೆಲಸಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದೆ ಎಂಬ ಅಂಶಗಳೆಲ್ಲ ಅಡಕವಾಗಿರುತ್ತಿದ್ದವು ಮತ್ತು ಅದರ ಜೊತೆಗೆ ಬಡ್ಜೆಟ್ಟಿಗೆ ಸಂಬಂಧಪಟ್ಟ ವಿಷಯಗಳೂ ಮತ್ತು ದೇಶದ ಆಗು ಹೋಗುಗಳ ವಿಚಾರಗಳೂ ಸಹ ಇರುತ್ತಿದ್ದುವು ನಮಗೀಗ ಈ ಹೊಸ ಕಾನ್‌ಸ್ಟಿಟ್ಯೂಷನ್ ಜಾರಿಗೆ ಬಂದ ಮೇಲೆ ಈಗ ರಾಜಪ್ರಮುಖರು ಪ್ರತಿ ಅಧಿವೇಶನದಲ್ಲೂಕೂಡ ಈ ತೆರನಾದ ಒಂದು Address ಕೊಡುವುದು ಜಾರಿಗೆ ಬರಬೇಕೆಂದಿದೆ. ಇದನ್ನು ನಾವು ಯೋಚನೆ ಮಾಡುವಾಗ ಒಂದಂಶವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಮೊದಲು ರಾಜ ಮಹಾರಾಜರು ಮಾಡುತ್ತಿದ್ದಂಥ ಭಾಷಣಗಳು ಯಾವ ರೀತಿಯಿರುತ್ತಿದ್ದವು, ಈಗ ರಾಜಪ್ರಮುಖರ ಅಡ್ರೆಸ್ ಎಂಬುದು ಯಾವ ರೀತಿಯದೆಯೆಂಬುದನ್ನು ಪರಿಗಣಿಸಬೇಕಾಗಿದೆ. ನನ್ನ ಅಭಿಪ್ರಾಯದಲ್ಲಿ ಮೊದಲು ಕೊಡುತ್ತಿದ್ದ ಭಾಷಣ ಬಹಳ ಮಟ್ಟಿಗೆ ದೇಶದ ಯಾವ ನಿರ್ದಿಷ್ಟ ವಿಷಯಕ್ಕೂ ಕೈ ಹಾಕದೆ ಎಲ್ಲರಿಗೂ ಅನ್ವಯಿಸುವಂತೆ ದೇಶವೆಲ್ಲಾ ಸುಭಿಕ್ಷವಾಗಿರಲಿ, ದೇಶದ ಜನರು ಕ್ಷೇಮವಾಗಿ ಬಾಳಲಿ—ಇತ್ಯಾದಿಯಾಗಿರುತ್ತಿತ್ತು. ಈಗ ಅದಕ್ಕೆ ಬದಲಾಗಿ ನಮ್ಮ ಸರ್ಕಾರದ ನೀತಿಯೇನು, ಸರ್ಕಾರವು ನಡೆಸುತ್ತಿರತಕ್ಕ ಮಾರ್ಗವೇನು, ಅದು ಕೈಕೊಂಡಿರತಕ್ಕ ಕಾರ್ಯಗಳೇನು ಮತ್ತು ಮುಂದೆ ಮಾಡತಕ್ಕ ವಿಷಯಗಳೇನು—ಇವುಗಳನ್ನು ಒಳಗೊಂಡಿದೆ. ಆದ್ದರಿಂದ ರಾಜಪ್ರಮುಖರ ಈ ಅಡ್ರೆಸ್ಸಿನ ವಿಚಾರದಲ್ಲಿ ನಾವು ಒಂದೆರಡು ಮಾತುಗಳನ್ನು ಹೇಳುವುದು ಸೂಕ್ತವಾಗಿದೆ. ಅದಕ್ಕನುಸಾರವಾಗಿ ಇಂದು ಮತ್ತು ನಾಳೆ, ಎರಡು ದಿವಸಗಳು ಇದಕ್ಕಾಗಿ ಇಟ್ಟುಕೊಂಡಿದ್ದೇವೆ.

ಆದರೆ ಈ ರೀತಿಯಾಗಿ ಮಾತನಾಡುವಾಗ ಹೇಗಿರಬೇಕೆಂಬ ವಿಚಾರ ನಮ್ಮಗಳಿಗೆ ಸ್ವಲ್ಪ ಹೊಸ ವಿಷಯವಾಗಿದೆ. ಏಕೆಂದರೆ, ನಾವು ಈ ರೀತಿಯಾಗಿ ಮೊದಲಿನಿಂದಲೂ ಮಾತನಾಡಿ ಅಭ್ಯಾಸವಿಲ್ಲ. ನನ್ನ ಅಭಿಪ್ರಾಯದಲ್ಲಿ ಅದು ಹೇಗಿರಬೇಕೆಂದರೆ, ಏನಿದ್ದರೂ ಇಲ್ಲಿರುವುದನ್ನೆಲ್ಲವನ್ನೂ ಒಮ್ಮತವಾಗಿ ಅನುಮೋದಿಸುವುದನ್ನು ಬಿಟ್ಟು, ಹೆಚ್ಚಿಗೆ ಚರ್ಚೆ ಮಾಡತಕ್ಕ ಅವಶ್ಯಕತೆಯೇನೂ ಇಲ್ಲ. ಸಂಗ್ರಹವಾಗಿ ಕೆಲವು ವಿಷಯಗಳನ್ನು ಇಲ್ಲಿ ಸೂಚನೆ ಮಾಡಿದ್ದಾರೆ. ನಾವೂ ಕೂಡ ನಮಗೆ ತೋರಿದಂಥ ದೇಶದ ಎಲ್ಲಾ ವಿಷಯಗಳನ್ನೂ ಸಮಗ್ರವಾಗಿ ತಿಳಿಸುವುದಕ್ಕೆ ಹೋಗದೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಮಾತ್ರ ಹೋಗಬೇಕೆಂದು ಸೂಚಿಸುತ್ತೇನೆ.

ಇನ್ನು ನಮ್ಮ ಮುಂದಿರುವ ಅಡ್ರೆಸ್ಸಿನ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ ಆಹಾರದ ವಿಷಯದಲ್ಲಿ ಇದರಲ್ಲಿ ಕೊಟ್ಟಿರುವುದನ್ನು ನೋಡುವುದಾದರೆ 1951ನೆಯ ಇಸವಿಯೊಳಗೆ ನಮ್ಮ ದೇಶಕ್ಕೆ ಆಗಬೇಕಾದ ಆಹಾರ ವೆಲ್ಲವನ್ನೂ ನಾವೇ ಬೆಳೆದುಕೊಳ್ಳಬೇಕು. ನಮ್ಮ ದೇಶ ಆಹಾರದ ವಿಚಾರದಲ್ಲಿ ಪರಿಪೂರ್ಣವಾಗಬೇಕೆಂಬ ಸಲಹೆ ಇದರಲ್ಲಿದೆ. ಇದು ಬಹಳ ಘನತರವಾದ ಸಲಹೆಯೆಂದು ನಾವುಗಳೆಲ್ಲಾ ಭಾವಿಸಬೇಕಾಗಿದೆ. ಆದರೆ ಈ ಸಲಹೆಯನ್ನು ಜಾರಿಗೆ ತರುವ ವಿಚಾರದಲ್ಲಿ ಮಾತ್ರ ಬಹಳ ಎಚ್ಚರಿಕೆಯಿಂದ ನಾವುಗಳೆಲ್ಲಾ ಏನೇನು ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂಬ ವಿಚಾರದಲ್ಲಿ ಆಲೋಚನೆ ಮಾಡಬೇಕಾಗಿದೆ. 1951ನೆಯ ಇಸವಿಯೊಳಗೆ ನಮ್ಮ ಜನಸಂಖ್ಯೆ ಎಷ್ಟಾಗುತ್ತದೆ, ಆ ಜನಸಂಖ್ಯೆಗೆ ಎಷ್ಟು ಆಹಾರ ಬೇಕಾಗುತ್ತದೆಂಬ ಲೆಕ್ಕವನ್ನು ನಮ್ಮ ಸರ್ಕಾರದವರು ಈಗಾಗಲೇ ತಯಾರುಮಾಡಿಕೊಂಡು ಅಷ್ಟು ಆಹಾರ ಬೆಳೆಯುವುದಕ್ಕೆ ಎಷ್ಟು ಎಕರೆ ಜಮೀನು ಬೇಕಾಗುತ್ತದೋ, ಅದನ್ನು ಬೆಳೆಯುವುದಕ್ಕೆ ಏನೇನು ಕೆಲಸ ಕಾರ್ಯಗಳನ್ನು ಕೈಗೊಳ್ಳಬೇಕೆಂಬ ವಿಚಾರದಲ್ಲಿ ಅಂಕಿಅಂಶಗಳನ್ನು ಈಗಿನಿಂದಲೇ ತಯಾರು ಮಾಡಿಕೊಂಡರೆ ನಿಜವಾಗಿ 1951ನೆಯ ಇಸವಿಯೊಳಗಾಗಿ ಬೆಳೆಯಲು ನಮಗೆ ಸಾಧ್ಯವಾಗುತ್ತದೆ. ಆ ರೀತಿ ನಮ್ಮ ಸರ್ಕಾರದವರು ಮಾಡುತ್ತಾರೆಂದು ನಂಬಿದ್ದೇನೆ.

ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ತಿಳಿಸುವುದಾದರೆ, ನಮ್ಮ ದೇಶದಲ್ಲಿ ಲಂಚಕೋರತನ, ಕಾಳಸಂತೆ ಬಹಳ ಹೆಚ್ಚಾಗಿಗೆಯೆಂಬುದು ಇದು ಎಲ್ಲಾ ಕಡೆಯೂ ಹೋಗುವಂತೆ ಮಾಡಬೇಕೆಂದರೆ ಸರ್ಕಾರದವರು ಕೈಕೊಳ್ಳುವ ಕಾರ್ಯಕ್ರಮಗಳ ಜೊತೆಗೆ ಸಾರ್ವಜನಿಕರೂ ಸಹಕರಿಸ ಬೇಕೆಂದು ಹೇಳಿದ್ದಾರೆ. ಇದನ್ನು ಅನುಮೋದಿಸುತ್ತಾ ಹತೋಟಿ ಆಜ್ಞೆಗಳು ಬಂದ ಮೇಲೆ ಈ ಲಂಚ ರುಷುವತ್ತು ಕಾಳಸಂತೆ ಮುಂತಾದುವುಗಳು ಹೆಚ್ಚಲು ಕಾರಣವಾಗಿದೆಯೆಂದು ನಾನು ಹೇಳಬಯಸುತ್ತೇನೆ. ಮುಖ್ಯವಾಗಿ ಈ ಹತೋಟಿ ಆಜ್ಞೆಗಳು ಹೋದರೇನೇ ಹೀನ ಕೃತ್ಯಗಳು ಹೋದಾವು. ಅದಕ್ಕೂ ಇದಕ್ಕೂ ಪರಸ್ಪರ ಹತ್ತಿರ ಸಂಬಂಧವಿದೆ. ಆದ್ದರಿಂದ ಆದಷ್ಟು ಜಾಗ ತೆ ಕಂಟ್ರೋಲ್ ತೆಗೆಯುವುದಕ್ಕೆ ಪ್ರಯತ್ನಮಾಡುವುದು ಬಹಳ ಅವಶ್ಯಕವೆಂದು ನಾನು ಸೂಚಿಸಲಿಚ್ಛಿಸುತ್ತೇನೆ. ಇದರ ಜೊತೆಗೆ 1951ನೆಯ ಇಸವಿಯಲ್ಲಿ ನಿಮಗೆ ಬೇಕಾದ ಆಹಾರ ಬೆಳೆದುಕೊಳ್ಳುತ್ತೀವೆಂದು ಹೇಳಿದರೆ, ಅಲ್ಲಿಂದಾಚೆಗೆ ಈ ಹತೋಟಿ ಆಜ್ಞೆಗಳೇನೋ ಹೋದಾವು ಎಂಬ ಒಂದು ಭಾವನೆ ಬರುತ್ತದೆ. ಆದರೂ ಭಾರತ ಸರ್ಕಾರದವರು ಅಲ್ಲಿಗೂ ತೆಗೆಯುತ್ತಾರೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಏನಾದರೂ ಹೇಳಿಕೊಂಡು ಮುಂದಕ್ಕೂ ಮುಂದುವರಿಸಿಕೊಂಡು ಹೋಗಬಹುದೆಂಬ ಅನುಮಾನವಿದೆ. ಆದ್ದರಿಂದ ಯಾವ ರೀತಿಯಲ್ಲಾದರೂ ಮಾಡಿ ಈ ಹತೋಟಿ ಆಜ್ಞೆಗಳು ಹೋಗುವಂತೆ ಮಾಡಬೇಕಾದ್ದು ಅವಶ್ಯಕ. ಇದಕ್ಕಾಗಿ ಈಗಿನಿಂದಲೇ ಒಂದುವರ್ಷಕ್ಕೆ ಪೂರ್ವಭಾವಿಯಾಗಿಲೇ ಕೆಲವು ವಿಷಯಗಳಲ್ಲಾದರೂ ಉದಾಹರಣೆಗೆ ಸಿಮೆಂಟ್, ಬಟ್ಟೆ, ಸಕ್ಕರೆ, ಸೀಮೆಎಣ್ಣೆ ಇವುಗಳ ಮೇಲಿನ ಕಂಟ್ರೋಲ್ ತೆಗೆಯಬೇಕು. ಹಾಗೆಯೇ ಅಕ್ಕಿ, ಗೋಧಿ ಮತ್ತು ರಾಗಿ ಜೋಳ—ಈ ರೀತಿ ಎರಡು ತೆರನಾಗಿ ವಿಂಗಡಿಸಿ ನಮ್ಮ ದೇಶದಲ್ಲಿ ಯಾವುವು ಹೆಚ್ಚಿಗೆ ಬೆಳೆಯುತ್ತವೆಯೋ ಅವುಗಳ ವಿಚಾರದಲ್ಲಾದರೂ ಕಂಟ್ರೋಲ್ ತೆಗೆದರೆ ಒಳ್ಳೆಯದು. ಒಟ್ಟಿನಲ್ಲಿ ಯಾವ ಯಾವ ಪದಾರ್ಥಗಳ ವಿಚಾರದಲ್ಲಿ ನಾವು ಸ್ವಪರಿಪೂರ್ಣವಾಗಿದ್ದೇವೋ ಅಂಥವುಗಳ ವಿಚಾರದಲ್ಲಿ ಕಂಟ್ರೋಲ್ ತೆಗೆಯಬೇಕೆಂದು ನನ್ನ ಸಲಹೆ.

ನಂತರ, ಕೈಗಾರಿಕೆಯ ವಿಚಾರದಲ್ಲಿ ಒಂದು ಮಾತು. ಅನೇಕ ಕೈಗಾರಿಕೆಗಳನ್ನು ನಮ್ಮ ಸರ್ಕಾರದವರು ಕಲ್ಪಿಸುತ್ತಾರೆಂದು ರಾಜಪ್ರಮುಖರು ಹೇಳಿದ್ದಾರೆ. ಅದರಲ್ಲಿ ಯಾವ ಅನುಮಾನವೂ ಇಲ್ಲ. ಈ ಸಂಬಂಧದಲ್ಲಿ ನನ್ನ ಮಿತ್ರರು ಒಂದೆರಡು ಕೈಗಾರಿಕೆಗಳ ವಿಚಾರವನ್ನು ಸೂಚನೆಮಾಡಿ, ಆ ಮೇಲೆ ಸರ್ಕಾರದವರು ಹೀಗೆ ಪ್ರಾರಂಭಿಸುವುದನ್ನು ಸಾಕುಮಾಡಿ ಎಂದು ಅವರು ಸೂಚಿಸಿದ ಹಾಗೆ ತೋರಿತು. ಅದನ್ನು ನಾನು ಒಪ್ಪುವುದಿಲ್ಲ. ದೇಶ ಮುಂದುವರಿಯಬೇಕಾದರೆ ಕೈಗಾರಿಕೆಗಳನ್ನು ಆದಷ್ಟುಮಟ್ಟಿಗೆ ಹೆಚ್ಚು ಮಾಡಬೇಕು. ಈಗ ನಮ್ಮ ಸರ್ಕಾರದವರು ಕೆಲವು ಕೈಗಾರಿಕೆಗಳನ್ನು ಆದಷ್ಟು ಜಾಗ್ರತೆ ಕೈಗೊಳ್ಳುವವರಾಗಿದ್ದಾರೆಂದು ಅಭಿಪ್ರಾಯವಿದೆ. ಅಂಥವುಗಳಲ್ಲಿ ಒಂದು ಯಾವುದೆಂದರೆ ಭದ್ರಾವತಿ ಹತ್ತಿರ ಸೀಮೆಗೊಬ್ಬರ ಕಾರ್ಖಾನೆಯನ್ನು ಏರ್ಪಡಿಸುವುದು. ಇದಕ್ಕಾಗಲೇ ಪೂರ್ವಭಾವಿ ಸಿದ್ಧತೆಗಳೆಲ್ಲಾ ನಡೆದಿವೆಯೆಂದು ಹೇಳಿದ್ದಾರೆ. ಇದು ಬಹಳ ಒಳ್ಳೆಯದು. ನಮ್ಮ ದೇಶಕ್ಕೆ ಬೇಕಾದ ಗೊಬ್ಬರವನ್ನು ನಾವೇ ತಯಾರಿಸಿಕೊಳ್ಳುವುದಕ್ಕೆ ಏರ್ಪಾಡುಮಾಡುವುದು ಒಳ್ಳೆಯ ಮಾರ್ಗ. ನಾವು ಪ್ರತಿಸಲವೂ ಹೆಚ್ಚು ಹೆಚ್ಚು ಬೆಳೆಯಬೇಕೆಂದು ಹೇಳುವಾಗಲೆಲ್ಲಾ ಗೊಬ್ಬರ ಇಲ್ಲವೆಂಬ ಕೊರತೆ ಕೇಳಬರುತ್ತಿದೆ. ಆದ್ದರಿಂದ ಈ ಗೊಬ್ಬರವನ್ನು ಹೆಚ್ಚಿಗೆ ಮಾಡಿಕೊಂಡರೆ ನಾವು ಹೆಚ್ಚಿಗೆ ಬೆಳೆಯಬಹುದೆಂದು ಹೇಳುತ್ತೇನೆ. ಈ ದೃಷ್ಟಿಯಿಂದ ಸರ್ಕಾರದವರು ಇದನ್ನು ಏರ್ಪಡಿಸಲು ಪ್ರಯತ್ನಮಾಡುತ್ತಿದ್ದಾರೆ. ಇದಕ್ಕೆ ಎರಡು ಕೋಟಿ ರೂಪಾಯಿಗಳ ಅಂದಾಜು ಹಾಕಿಕೊಂಡಿದ್ದಾರೆ. ಆದರೆ ಅನೇಕರು ವ್ಯಕ್ತಪಡಿಸಿರುವ ಅಭಿಪ್ರಾಯದಂತೆ ಇದಕ್ಕೆ 4 ಕೋಟಿ ರೂಪಾಯಿಗಳಾದರೂ ಆಗಬಹುದೆಂದು ತೋರುತ್ತದೆ. ಆದ್ದರಿಂದ ಇಂಥ ಹಣದ ಮುಗ್ಗಟ್ಟಿನ ಕಾಲದಲ್ಲಿ ಇದನ್ನು ಶುರುಮಾಡುವುದರಲ್ಲಿ ಸ್ವಲ್ಪ ದೀರ್ಘಾಲೋಚನೆ ಮಾಡಿ ಎಷ್ಟು ಫಲಕಾರಿಯಾಗುತ್ತದೆ, ಎಲ್ಲಿ ತೊಂದರೆಯಾದೀತು ಎಂಬುದನ್ನೆಲ್ಲಾ ಪರಿಶೀಲಿಸಿ ಇದನ್ನು ಕೈಗೊಳ್ಳುವುದು ಉತ್ತಮವೆಂದು ಹೇಳುತ್ತೇನೆ.

ನಮ್ಮ ಕೇಂದ್ರ ಸರ್ಕಾರದವರು ಸಿಂಗ್ರಿ ಎಂಬ ಸ್ಥಳದಲ್ಲಿ ಇದಕ್ಕೆ ಪ್ರಬಲವಾದ ಒಂದು ಕೈಗಾರಿಕೆ ಮಾಡಬೇಕೆಂದು ಪ್ರಯತ್ನಪಟ್ಟರೆಂದೂ, ಅದರ ಪ್ರಕಾರ ಸುಮಾರು ಮೊದಲನೆಯ ಅಂದಾಜಿನಂತೆ 8 ಅಥವಾ 10 ಕೋಟಿ ರೂಪಾಯಿಗಳು ಅವರಿಗೆ ದೊರಕುತ್ತಿತ್ತೆಂದೂ, ಈಗಿನ ಲೆಕ್ಕದ ಪ್ರಕಾರ 20 ಕೋಟಿ ರೂಪಾಯಿಗಳಾದರೂ ಆಗಬಹುದೆಂದೂ ಗೊತ್ತಾಗಿದೆ. ಈ ರೀತಿ ಹೇಳುವಾಗ 2 ಕೋಟಿಯಾಗಿರುವುದೂ, 4 ಕೋಟಿಯಾಗಿರುವುದೂ ಹೆಚ್ಚಲ್ಲ. 4 ಕೋಟಿ ಒಂದು ಕೈಗಾರಿಕೆಗೇ ಹೋಗುವಾಗ ಅದರ ಆಗುಹೋಗುಗಳನ್ನು ಗಮನಿಸಿ ಮಾಡುವುದು ಉತ್ತಮ. ಆ ರೀತಿ ಸರ್ಕಾರದವರು ಮಾಡುತ್ತಾರೆಂದು ಭಾವಿಸಿದ್ದೇನೆ.

ಇನ್ನೂ ಎರಡು ಕಾರ್ಖಾನೆಗಳು ನಮ್ಮ ದೇಶದಲ್ಲಿ ಈಗ ಕೇಳಿ ಬರುತ್ತಿವೆ. ಒಂದು ಮೋಟಾರು ತಯಾರು ಮಾಡುವುದು ; ಮತ್ತೊಂದು ಬೈಸಿಕಲ್ ತಯಾರುಮಾಡುವುದು. ಈ ಎರಡು ಕಾರ್ಖಾನೆಗಳೂ ದೇಶದಲ್ಲಿದ್ದರೆ ನಾವು ಹೆಮ್ಮೆಪಡುವ ವಿಷಯವಾಗಿರುತ್ತದೆ. ಮೈಸೂರಿಗೆ ಬರುವ ಬೈಸಿಕಲ್ ಕೈಗಾರಿಕೆಯು ಬೇರೆ ಕಡೆಗೆ ಹೋಯಿತೆಂದು ಹೇಳುತ್ತಾರೆ. ಈಗಲಾದರೂ ಸರ್ಕಾರದವರು ಇನ್ನೊಂದು ಸಲ ಯೋಚನೆಮಾಡಿ ಮೋಟಾರು ಕಾರ್ಖಾನೆಯನ್ನೂ, ಬೈಸಿಕಲ್ ಕಾರ್ಖಾನೆಯನ್ನೂ

ನಮ್ಮ ದೇಶಕ್ಕೆ ತಂದರೆ ಅದರಿಂದ ಬಹಳವಾಗಿ ಸಹಾಯವಾಗುತ್ತದೆ, ನಮ್ಮ ದೇಶದ ಜನರಿಗೂ ಅನುಕೂಲವಾಗುತ್ತದೆ, ಉತ್ಪತ್ತಿಯೂ ಹೆಚ್ಚುತ್ತದೆ. ಅದಕ್ಕೆ ಪ್ರಯತ್ನಪಡುತ್ತಾರೆಂದು ನಂಬಿದ್ದೇನೆ.

ಇನ್ನು ಶಿವಮೊಗ್ಗಾದಲ್ಲಿ ಸ್ಥಾಪಿಸಬೇಕೆಂದಿರುವ ಸಕ್ಕರೆ ಕಾರ್ಖಾನೆಯ ವಿಚಾರದಲ್ಲಿ ಒಂದೇ ಒಂದು ಸೂಚನೆ ಕೊಡುತ್ತೇನೆ. ಅದು ಬಹಳ ಸಂತೋಷಕರವಾದ ವಿಷಯ. ನಮ್ಮ ದೇಶದಲ್ಲಿ ಸುಮಾರು 159 ಸಕ್ಕರೆ ಕಾರ್ಖಾನೆಗಳಿವೆ. ಆದರೆ ಅಲ್ಲಿ ನಮಗೆ ಬೇಕಾದ 15 ಲಕ್ಷ ಟನ್ ಸಕ್ಕರೆಯನ್ನು ತಯಾರುಮಾಡಿ, ವರ್ಷಕ್ಕೆ 15 ಲಕ್ಷ ಟನ್ ಆದರೆ ಆಗ ಇಂಡಿಯಾಕ್ಕೆ ಸಾಕಾಗಬಹುದೆ ಬ ಭಾವನೆಯಿದೆ. ಈಗ ತಯಾರಾಗುವ ಸಕ್ಕರೆ ಕೇವಲ 10 ಅಥವಾ 11 ಲಕ್ಷ ಟನ್ ಮಾತ್ರ. ಪರಿಸ್ಥಿತಿ ಹೀಗಿದೆಯೆಂದು ಹೇಳುವಾಗ ನಮ್ಮ ದೇಶದಲ್ಲಿ ಸಕ್ಕರೆ ಕಂಪೆನಿಯು ಹೆಚ್ಚು ಅಗತ್ಯವಾಗಿ ಆಗಬೇಕೆಂಬ ಭಾವನೆಯಿರುವುದು ಸಹಜವಾಗಿಯೇ ಇದೆ. ನಮ್ಮ ದೇಶದಲ್ಲಿ ತಯಾರುಮಾಡುವಷ್ಟು ಸಕ್ಕರೆಯನ್ನು ಕ್ಯೂಬ ಎಂಬ ದೇಶದಲ್ಲಿ ತಯಾರುಮಾಡುತ್ತಿದ್ದಾರೆ. ಈ ದಿವಸ 12 ಲಕ್ಷ ಟನ್ ಸಕ್ಕರೆಯು ಕ್ಯೂಬಾದಲ್ಲಿ ತಯಾರಾಗುತ್ತದೆಯೆಂದು ಗೊತ್ತಾಗಿದೆ. ಆದ್ದರಿಂದ ನಮ್ಮ ದೇಶಕ್ಕೆ ಸಕ್ಕರೆ ಕಂಪೆನಿಗಳ ಅಗತ್ಯ ಇನ್ನೂ ಇದೆಯೆಂಬುದು ವ್ಯಕ್ತವಾಗುತ್ತದೆ. ಹಾಗೆ ಹೇಳುವಾಗ ಮೈಸೂರು ದೇಶದಲ್ಲಿ ಸಕ್ಕರೆ ಅಭಾವವಿದೆಯೇ ಎಂದು ಕೇಳಿದರೆ ಇಲ್ಲವೆಂದು ತಿಳಿಸಬೇಕಾಗಿದೆ. ನಮ್ಮ ದೇಶಕ್ಕೆ ಬೇಕಾದ ಸಕ್ಕರೆಯು ಈಗಿರುವ ಮಂಡ್ಯದ ಕಾರ್ಖಾನೆಯಲ್ಲೇ ತಯಾರಾಗುತ್ತಿದೆ. ಅಷ್ಟೂ ಆಗಿ ಹೆಚ್ಚು ಸಕ್ಕರೆಯನ್ನು ಹೊರಕ್ಕೆ ಕೊಡುವ ಪರಿಸ್ಥಿತಿ ಇದೆ. ಹೀಗಿದ್ದರೂ ದಕ್ಷಿಣ ದೇಶ ತೆಗೆದುಕೊಂಡರೆ ಅಲ್ಲಿಗೆ ಎಷ್ಟು ಬೇಕೋ ಅಷ್ಟು ಕಾರ್ಖಾನೆಗಳಿಲ್ಲ. ಆದ್ದರಿಂದ ಅಗತ್ಯವಾಗಿ ದಕ್ಷಿಣ ದೇಶಕ್ಕೆ ಇನ್ನೂ ಸಕ್ಕರೆ ಕಾರ್ಖಾನೆಗಳು ಬೇಕಾಗಿವೆ. ಆ ಕಾರಣದಿಂದ ಶಿವಮೊಗ್ಗಾದಲ್ಲಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಮಾಡಬೇಕೆಂದಿರುವುದು ಬಹಳ ಒಳ್ಳೆಯ ಉದ್ದೇಶ. ಅಲ್ಲಿ ಬೇಕಾದ ಸೌಕರ್ಯವೂ ಇದೆ. ಅದನ್ನು ತಿಳಿದೇ ಸರ್ಕಾರದವರು ಅಲ್ಲಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಲು ಒಪ್ಪಿರುವುದು ಬಹಳ ಸೂಕ್ತವಾದುದು.

ಸರ್ಕಾರದವರು 1947ರಲ್ಲಿ ಒಂದು ಹುಕುಮನ್ನು ಹೊರಡಿಸಿದ್ದಾರೆ. ಅದರಲ್ಲಿ ಸಕ್ಕರೆ ಕಾರ್ಖಾನೆಗೆ ಬೇಕಾದ ಹಣಕ್ಕಾಗಿ ಸೇಕಡ 5?ರಷ್ಟು ಷೇರುಗಳನ್ನು ತೆಗೆದುಕೊಳ್ಳತಕ್ಕದ್ದೆಂದು ನಮೂದಾಗಿದೆ. ಈಗ ಅದಕ್ಕೆ ಬದಲಾಗಿ ಮೈಸೂರು ಸಕ್ಕರೆ ಕಂಪೆನಿಯವರು ಸೇಕಡ 30ರಷ್ಟು ತೆಗೆದುಕೊಳ್ಳಬೇಕೆಂದೂ, ಸರ್ಕಾರದವರು ಸೇಕಡ 25ರಷ್ಟು ತೆಗೆದುಕೊಳ್ಳಬೇಕೆಂದೂ ಗೊತ್ತಾಗಿದೆ. ಅವರಿಬ್ಬರೂ ಸೇರಿ ಈಗ ಸೇಕಡ 55 ಭಾಗವನ್ನು ತೆಗೆದುಕೊಳ್ಳುತ್ತಾರೆ; ಅದು ಒಳ್ಳೆಯದು. ಈ ಕಾರ್ಖಾನೆಯಲ್ಲಿ ಸರ್ಕಾರದವರು ಸೇಕಡ 10 ಭಾಗ ಬಂಡವಾಳವನ್ನು ತೆಗೆದುಕೊಳ್ಳುತ್ತಾರೆಂಬುದಾಗಿ ಅಡ್ರೆಸ್ಸಿನಲ್ಲಿ ನಮೂದಾಗಿದೆ. ಆದರೆ ಅದು 25 ಪರ್‌ಸೆಂಟ್ ಎಂದು ಬದಲಾವಣೆಯಾದರೆ ಉತ್ತಮವೆಂದು ಸೂಚಿಸುತ್ತೇನೆ. ಅದಕ್ಕೆ ತಿದ್ದುಪಡಿಯಾದರೆ ಒಳ್ಳೆಯದು. ಆದ್ದರಿಂದ ಸೇಕಡ 25ರಷ್ಟು ಷೇರುಗಳನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಂದು ತಿಳಿದುಬಂದಿರುವುದು ಬಹಳ ಒಳ್ಳೆಯ ಅಭಿಪ್ರಾಯವಾಗಿದೆ. ಆ ರೀತಿಯಾಗಿ ಸಕ್ಕರೆ ಕಾರ್ಖಾನೆಯನ್ನು ತಯಾರು ಮಾಡಿ ತನ್ಮೂಲಕ ಮಲೆನಾಡಿನಲ್ಲಿರುವ ಕಷ್ಟ ನಿವಾರಣೆಯಾಗಿ ಅದು ಅಭಿವೃದ್ಧಿಗೆ ಬರಲೆಂದೂ ಮತ್ತು ಜಾಗ್ರತೆಯಾಗಿ ಅದು ನೆರವೇರಲೆಂದೂ ಬಯಸುತ್ತೇನೆ.

ಇನ್ನು ಔಷಧಿ ಮತ್ತು ಆರೋಗ್ಯ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತಾ ಹಳ್ಳಿಗಳಿರುವ ಕಡೆ ಅದರ ಅನುಕೂಲವನ್ನು ಹೆಚ್ಚಾಗಿ ಕೊಡಬೇಕೆಂಬುದು ಸರ್ಕಾರದ ಅಭಿಪ್ರಾಯವಾಗಿದೆಯೆಂದು ಮಹಾರಾಜರು ಹೇಳಿದ್ದಾರೆ. ಈ ಅಭಿಪ್ರಾಯ ಬಹಳ ಒಳ್ಳೆಯದು. ನಮ್ಮ ಸರ್ಕಾರದ ಅಭಿಪ್ರಾಯ ಕೂಡ ಒಳ್ಳೆಯದು. ಮದ್ರಾಸು ಮತ್ತು ಬೊಂಬಾಯಿ ಪ್ರಾಂತಗಳಲ್ಲಿ ನೋಡಿದರೆ ಅಲ್ಲಿ 15 ಮೈಲಿಗಳಿಗೆ ಒಂದು ಆಸ್ಪತ್ರೆ ಕೂಡ ಇಲ್ಲ. ಇಲ್ಲಿ ನಮ್ಮ ದೇಶದಲ್ಲಿ ಕೇವಲ 5 ಮೈಲಿಗಳಿಗೇ ಒಂದು ಆಸ್ಪತ್ರೆಯಿದೆ. ಜನಸಂಖ್ಯೆಗನುಗುಣವಾಗಿ ಅಲ್ಲಿ ಎಷ್ಟಿದೆಯೋ ಅದಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ನಮಗೆ ಆಸ್ಪತ್ರೆಗಳಿವೆ. ಆದರೆ ಈಚೆಗೆ ಏನಾಗಿದೆಯೆಂದರೆ ಕೆಲವು ಆಸ್ಪತ್ರೆಗಳಲ್ಲಿ ಬೇಕಾದ ಔಷಧಿಗಳೇ ಇಲ್ಲ. ಇನ್ನು ಕೆಲವು ಕಡೆ ಡಾಕ್ಟರುಗಳೇ ಇರುವುದಿಲ್ಲ. ಪರಿಸ್ಥಿತಿ ಈ ರೀತಿ ಇದೆ. ಆದ್ದರಿಂದ ಆಸ್ಪತ್ರೆಗಳನ್ನು ಹೆಚ್ಚಿಸುವುದಕ್ಕೆ ಬದಲಾಗಿ ಅದರ ಅವಶ್ಯಕತೆಗೆ ಬೇಕಾದ ಔಷಧಿಗಳನ್ನು ಮತ್ತು ಡಾಕ್ಟರುಗಳನ್ನು ಒದಗಿಸುವ ಏರ್ಪಾಡುಮಾಡಿದರೆ ಅದರಿಂದ ಉತ್ತಮವಾದ ಫಲ ದೊರೆಯುತ್ತದೆಂದು ಸಲಹೆ ಮಾಡುತ್ತೇನೆ.

ಈಗ ನಾವು ಮಹಾತ್ಮ ಗಾಂಧಿಯವರ ಹೆಸರನ್ನು ಹೇಳುತ್ತಾ ಅವರ ತತ್ವದ ಪ್ರಕಾರ ಕೇಂದ್ರೀಕರಣ ಎಂಬುದನ್ನು ಮನಸ್ಸಿನಲ್ಲಿಟ್ಟಿದ್ದೇವೆ. ನಮ್ಮ ಸರ್ಕಾರದವರು ಅದನ್ನು ಅನುಸರಿಸುತ್ತಿರುವುದು ಬಹಳ ಸಂತೋಷಕರವಾದುದಾಗಿದೆ. ಎಲ್ಲರೂ ಅದನ್ನು ಸ್ವಾಗತಿಸಬೇಕೆಂದು ಹೇಳುತ್ತೇನೆ. ಆಗ ಇಲ್ಲಿರುವ ಕೆಲವು ಸದಸ್ಯರೂ ಮತ್ತು ಹೊರಗಿನವರೂ ಸಹ ಪ್ರತಿಯೊಂದಕ್ಕೂ ಕೇಂದ್ರೀಕರಣ ವ್ಯವಸ್ಥೆ ಆಗಬೇಕು, ಕೇಂದ್ರ ಸರ್ಕಾರ ಬಹಳ ಬಲಯುತವಾಗಿರಬೇಕು ಎಂದು ಒಂದು ಅಭಿಪ್ರಾಯ, ಒಂದು ಭಾವನೆ ಸೂಚಿಸುತ್ತಿದ್ದಾರೆ. ಹಾಗೆಯೇ ವಿಕೇಂದ್ರೀಕರಣ ಮಾಡಬೇಕೆಂಬ ಒಂದು ಅಭಿಪ್ರಾಯವೂ ಬರುತ್ತಿದೆ. ಅದು ಒಳ್ಳೆಯದು. ನನಗೂ ಆ ವಿಧವಾದ ಅಭಿಪ್ರಾಯವಿದೆ. ಕೆಲವು ವಿಚಾರಗಳಲ್ಲಿ ಕೇಂದ್ರೀಕರಣ ಆಗಬೇಕು ಮತ್ತು ಕೇಂದ್ರ ಸರ್ಕಾರ ಬಲವಾಗಿರಬೇಕು. ನಿಜವಾಗಿಯೂ ರಕ್ಷಣೆ ಮುಂತಾದುವೆಲ್ಲವೂ ಸಹ ಅವರ ಅಧಿಕಾರಕ್ಕೊಳಪಟ್ಟಿದ್ದರೆ ದೇಶಕ್ಕೆ ಒಳ್ಳೆಯದು. ಇನ್ನು ಕೆಲವು ವಿಚಾರಗಳಲ್ಲಿ ವಿಕೇಂದ್ರೀಕರಣ ಆದರೆ ಒಳ್ಳೆಯದು. ಅದು ಬಹಳ ಸಂತೋಷಕರ. ಈ ವಿಚಾರವಾಗಿ ಕೆಲವು ಸಣ್ಣ ಸಮಿತಿಗಳಲ್ಲಿ ನಾನಾ ತರಹವಾಗಿ ಸರ್ಕಾರಕ್ಕೆ ಸಲಹೆ ಮಾಡುತ್ತಿದ್ದೇವೆ.

ಸಂಯುಕ್ತ ಸಂಸ್ಥಾನಗಳ ಸರ್ಕಾರವು ಪಂಚಾಯಿತಿ ಸರ್ಕಾರವೆಂದು ಮಾಡಿ ಅದರ ಮೂಲಕ ಆಯಾ ಗ್ರಾಮಾಭಿವೃದ್ಧಿ ಮಾಡುವುದಕ್ಕೆ ಒಂದು ಯೋಜನೆ ಮಾಡುತ್ತಿದೆಯೆಂದು ಗೊತ್ತಾಗಿದೆ. ಇದರ ಜೊತೆಗೆ ಪ್ರತಿಯೊಂದು ಗ್ರಾಮದಲ್ಲೂ ಹುಟ್ಟುವಳಿಯಾಗುವ ಮೊಬಲಗಿನಲ್ಲಿ ಸೇಕಡ 10 ಅಥವಾ 15 ಭಾಗ ಸರ್ಕಾರಕ್ಕೆ ಕೊಟ್ಟು ಆ ಪಂಚಾಯಿತಿಯ ಏಳಿಗೆಗೆ ಬೇಕಾದ ಆರೋಗ್ಯ, ವಿದ್ಯಾಭ್ಯಾಸ ಮುಂತಾದ ಸೌಕರ್ಯಗಳು ದೊರೆಯುವಂತೆ ಮಾಡಲು ಏರ್ಪಡಿಸುತ್ತಿದ್ದಾರೆ. ಅದೇ ರೀತಿಯಲ್ಲಿ ನಮ್ಮ ಸರ್ಕಾರದವರೂ ಕೂಡ ಮಾಡಿದರೆ ಒಳ್ಳೆಯದು. ವಿದ್ಯುಚ್ಛಕ್ತಿಯು ವಿಕೇಂದ್ರೀಕರಣವಾಗಿ ಹಳ್ಳಿಗಳಿಗೆ ಅನುಕೂಲವಾದರೆ ಒಳ್ಳೆಯದು, ಅದಕ್ಕೆ ಪ್ರಯತ್ನಮಾಡಬೇಕು ಎಂದು ಸಲಹೆ ಮಾಡಿದ್ದೆವು. ಈ ಸಂದರ್ಭದಲ್ಲೂ ಅದನ್ನು ಸಲಹೆ ಮಾಡುವುದು ಒಳ್ಳೆಯದು. ಅದನ್ನು ಯೋಚಿಸಿ ಸರ್ಕಾರದವರು ವಿಕೇಂದ್ರೀಕರಣ ನಿಜವಾಗಿಯೂ ಮಾಡಿದರೆ ಅನುಕೂಲ.

ಇನ್ನು ಹೈಡ್ರೋ ಎಲೆಕ್ಟ್ರಿಕ್ ಕೆಲಸಗಳ ವಿಚಾರದಲ್ಲೂ ಅನೇಕ ವಿಷಯಗಳು ಅಡಕವಾಗಿವೆ. ಪಿಂಷಾದಲ್ಲಿ ಈಗ ಏನು ಕೆಲಸ ಮಾಡಬೇಕಾಗಿತ್ತೋ ಅದನ್ನೆಲ್ಲಾ ಮಾಡುತ್ತಿದೆಯೆಂದೂ ಹೇಳಿದ್ದಾರೆ. ಗೇರುಸೊಪ್ಪೆಯಲ್ಲೂ, ಹೊನ್ನೆಮರಡುವಿನಲ್ಲೂ ಆಗಬೇಕಾದ ಕೆಲಸಗಳು ನಡೆಯುತ್ತಿವೆಯೆಂದು ಸೂಚಿಸಿದ್ದಾರೆ. ಈ ರೀತಿಯಾಗಿ ಮೇಕೆದಾಟು ಮುಂತಾದ ಕಡೆ ಅನೇಕ ಹೊಸ ಹೊಸ ಯೋಜನೆಗಳು ಅನೇಕವಾಗಿವೆ. ಇದರ ಜೊತೆಗೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸುತ್ತಿದ್ದವರಿಗೆ ಹಿಂದೆ ಈಗಿರುವುದಕ್ಕಿಂತ ಬಹಳ ಕಡಮೆ ದರ ಇತ್ತು. 2½ ಆಣೆಗೆ ಒಂದು ಯೂನಿಟ್ಟಿನಂತೆ ಕೆಲವು ಕಡೆ ಸರಬರಾಯಿ ಮಾಡುತ್ತಿದ್ದರು. ವಿದ್ಯುಚ್ಛಕ್ತಿ ದರವನ್ನು ನಮ್ಮ ಸರ್ಕಾರದವರು ಇನ್ನೂ ಹೆಚ್ಚಿಸಬೇಕೆಂದಿದ್ದಾರೆಂಬುದಾಗಿ ಕೇಳಬರುತ್ತಿದೆ. ಆದರೆ ಅದು ಸರಿಯಲ್ಲ. ಈಗಿರುವ ದರವನ್ನು ಕಡಮೆಮಾಡಲು ಪ್ರಯತ್ನಪಡಬೇಕು. ನಮ್ಮ ಮೈಸೂರು ದೇಶದಲ್ಲಿರುವಷ್ಟು ವಿದ್ಯುಚ್ಛಕ್ತಿಯ ಉತ್ಪತ್ತಿ ಮತ್ತೆಲ್ಲಿಯೂ ಇಲ್ಲ. ಇಷ್ಟು ಸೌಕರ್ಯವಿದ್ದರೂ ಸಹ ಹೆಚ್ಚು ತೆರಿಗೆ ಹಾಕುವುದು ಸರಿಯಲ್ಲ. ಸೌಕರ್ಯವು ಎಲ್ಲರಿಗೂ ಸಿಕ್ಕುವ ಹಾಗೆ ಯೋಜನೆ ಮಾಡಬೇಕೆಂದು ಸೂಚನೆ ಕೊಡುತ್ತೇನೆ.

ವಿದ್ಯುಚ್ಛಕ್ತಿಯ ಸೌಲಭ್ಯವನ್ನು ಹಳ್ಳಿಗಳಿಗೆ ಉಂಟು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ಯೋಜನೆಯನ್ನು ಜಾಗ್ರತೆ ಕೈಕೊಳ್ಳುತ್ತೇವೆಂದು ಹೇಳಲಾಗಿದೆ. ಈ ವಿಷಯವನ್ನು ಸರ್ಕಾರದವರು ಮೊದಲಿನಿಂದಲೂ ಹೇಳುತ್ತಿದ್ದಾರೆ. ಪ್ರತಿ ತಾಲ್ಲೂಕು ಹೆಡ್‌ಕ್ವಾರ್ಟರಿಗೂ ಹೋಬಳಿ ಹೆಡ್‌ಕ್ವಾರ್ಟರಿಗೂ ವಿದ್ಯುಚ್ಛಕ್ತಿಯನ್ನು ಕೊಟ್ಟು ಬಿಡುವುದಾಗಿ ಹೇಳುತ್ತಿದ್ದಾರೆ. ಆದರೆ ಇದು ಕಾರ್ಯತಃ ನಡೆಯುತ್ತಿಲ್ಲ. ಕೆಲಸ ಬಹಳ ನಿಧಾನವಾಗಿ ನಡೆಯುತ್ತಿದೆ. ವಿದ್ಯುಚ್ಛಕ್ತಿ ಬೇಕೆಂದು ಯಾರಾದರೂ ಹಳ್ಳಿಗಾಡಿನವರು ಕೇಳಿದರೆ ಅದಿಲ್ಲ, ಇದಿಲ್ಲ ಎಂದು ಹೇಳುವುದಕ್ಕೆ ಬದಲು ಎಲ್ಲೆಲ್ಲಿ ಕೇಳುತ್ತಾರೋ ಅಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುವುದು ಒಳ್ಳೆಯದು. ಎಲ್ಲಕ್ಕಿಂತ ಹೆಚ್ಚಾಗಿ ಹೆಚ್ಚು ಬೆಳೆ ಬೆಳೆಯಲು ವಿದ್ಯುಚ್ಛಕ್ತಿಯನ್ನು ಕೊಟ್ಟು ಸಹಾಯ ಮಾಡಿದರೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ. ಆದುದರಿಂದ ಇದಕ್ಕೆ ತಕ್ಕ ಸೌಕರ್ಯವನ್ನು ಕಲ್ಪಿಸಿ ಕೊಡಬೇಕೆಂದು ನಾನು ಸೂಚಿಸುತ್ತೇನೆ.

ಕೊನೆಯದಾಗಿ, ಈಗ ನಡೆಯುತ್ತಿರುವ ಬಡ್ಜೆಟ್ ಅಧಿವೇಶನಕ್ಕೆ ಅನೇಕ ಒಳ್ಳೆಯ ಮಸೂದೆಗಳು ಬರುತ್ತವೆ. ಆದರೆ ಅವುಗಳಲ್ಲಿ ಒಂದು ಮಸೂದೆ ಮಾತ್ರ ಬಹಳ ಅಮೂಲ್ಯವಾದುದೂ ಮತ್ತು ಅಗತ್ಯವಾದುದು ಎಂದು ಸೂಚನೆ ಕೊಟ್ಟು, ಅದು Maintenance of Law and Order ಗೆ ಸಂಬಂಧಪಟ್ಟದ್ದೆಂದು ಸೂಚಿಸಿದ್ದಾರೆ. ಇದು ಒಳ್ಳೆಯ ರೀತಿಯಲ್ಲಿ ಚೆನ್ನಾಗಿ ಬರಲೆಂಬ ಉದ್ದೇಶದಿಂದ ನಾನು ಒಂದು ಸೂಚನೆಯನ್ನು ಕೊಡುತ್ತೇನೆ. ಈಗ ಅಲ್ಲಿ ರೈಲು ಉರುಳಿತು, ಇನ್ನೊಂದುಕಡೆ ಸಾರ್ವಜನಿಕರ ಶಾಂತಿಗೆ ಭಂಗ ಬಂತು, ಎಷ್ಟೋ ಜನರ ಪ್ರಾಣ ಹೋಯಿತು ಎಂದು ಮುಂತಾದ ವರ್ತಮಾನಗಳನ್ನು ನಾವು ಕೇಳುತ್ತಿದ್ದೇವೆ; ವೃತ್ತಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಇಂತಹ ಕಾಲದಲ್ಲಿ ನಾವು ಮೌನವಾಗಿ ಕುಳಿತು, ಪ್ರಜಾಸತ್ತೆ ಎಂದು ಹೇಳಿ ಕಠಿಣವಾದ ಮಸೂದಾ ಕಾನೂನುಗಳನ್ನು ದೇಶದಲ್ಲಿ ಜಾರಿಗೆ ತರುವುದು ಸರಿಯಲ್ಲವೆಂದು ಹೇಳಿದರೆ ದೇಶದಲ್ಲಿ ಶಾಂತಿಗೆ ಬದಲು ನೆಮ್ಮದಿಗೆ ಭಂಗವುಂಟಾಗುತ್ತದೆ. ದುಷ್ಟರನ್ನು ನಿಗ್ರಹ ಮಾಡುವುದು ಎಲ್ಲ ಸರ್ಕಾರಗಳ ಕರ್ತವ್ಯವಾಗಿದೆ. ಆದುದರಿಂದ ಯಾವುದೇ ಪ್ರಗತಿ ಹೊಂದಿರುವ ದೇಶದಲ್ಲಿ ದುಷ್ಟ ಕೃತ್ಯಗಳು ನಡೆದರೆ ಅವನ್ನು ಎದುರಿಸಿ ದೇಶದಲ್ಲಿ ಶಾಂತಿಯನ್ನು ಕಾಪಾಡುವುದು ಒಳ್ಳೆಯದು. ಆದುದರಿಂದ ಆ ಮಸೂದೆಯನ್ನು ತರುವುದು ಅಗತ್ಯವೆಂಬುದನ್ನು ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ಅದನ್ನು ಸರಿಯಾಗಿ ಜಾರಿಗೆ ತಂದು ದೇಶದಲ್ಲಿ ಆ ಮೂಲಕ ಶಾಂತಿಯನ್ನು ಕಾಪಾಡಲಿ ಎಂದು ಆಶಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಒಟ್ಟಿನಲ್ಲಿ ಶ್ರೀಮನ್ಮಹಾರಾಜರವರ ಭಾಷಣ ಬಹಳ ಚೆನ್ನಾಗಿದೆ. ದೇಶದಲ್ಲಿ ಏನೇನು ಮಾಡಬೇಕೋ, ಮಾಡಿದೆಯೋ, ಅದೆಲ್ಲವೂ ಅದರಲ್ಲಿ ಬಂದಿದೆ. ಆದುದರಿಂದ ಅದನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ.

Mr. DEPUTY SPEAKER.—The Hon'ble Member will have to speak only for five minutes.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಶ್ರೀಮನ್ಮಹಾರಾಜರವರು ಈ ಸಭೆಯ ಮಾನ್ಯ ಸದಸ್ಯರ ಮುಂದೆ ಮಂಡಿಸಿರತಕ್ಕ ಭಾಷಣವನ್ನು ನಾವು ಪ್ರಸ್ತಾಪಮಾಡುವಾಗ ಒಂದು ಅಂಶವನ್ನು ತಿಳಿದುಕೊಳ್ಳಬೇಕಾಗಿದೆ. ಅದೇನೆಂದರೆ ಶ್ರೀಮನ್ಮಹಾರಾಜರವರು ಮೈಸೂರು ಸರ್ಕಾರದ ಅತ್ಯುನ್ನತ ಅಧಿಕಾರಿಗಳಾಗಿ ಈ ಭಾಷಣವನ್ನು ಮಾಡಿದ್ದಾರೆ. ಈ ಭಾಷಣದಲ್ಲಿ ಸರ್ಕಾರದ ಮುಂದಿರತಕ್ಕ ನೀತಿ ಅಥವಾ ತತ್ವ ಏನೆಂಬುದನ್ನು ಸ್ಥೂಲವಾಗಿ ಕೆಲವೇ ಕೆಲವು ಮಾತುಗಳಲ್ಲಿ ಪ್ರಸ್ತಾಪಮಾಡಿದ್ದಾರೆ. ಇದಕ್ಕಿಂತಲೂ ಹೆಚ್ಚಾಗಿ ಶ್ರೀಮನ್ಮಹಾರಾಜರವರು ಭಾಷಣ ಮಾಡಬೇಕಾಗಿರಲಿಲ್ಲ ಮತ್ತು ಇದಕ್ಕಿಂತ ಕಡಿಮೆಯಾಗಿ ಮಾಡಿದ್ದರೂ ಕಡಿಮೆಯಾಗುತ್ತಿತ್ತು. ಎಷ್ಟು ಹೇಳಬೇಕೋ ಅಷ್ಟನ್ನು ಸ್ಥೂಲವಾಗಿ ಹೃದಯಂಗಮವಾಗಿ ಎಲ್ಲರ ಮೆಚ್ಚಿಗೆಗೂ ಪಾತ್ರವಾಗುವ ರೀತಿಯಲ್ಲಿ ಪ್ರಭುಗಳು ಅಪ್ಪಣೆ ಕೊಡಿಸಿದ್ದಾರೆ. ಈಗಿರತಕ್ಕ ಸರ್ಕಾರ ಕಾಂಗ್ರೆಸ್ ಸರ್ಕಾರ. ಈ ಸರ್ಕಾರ ನೇಮಕವಾದಾಗ ಚುನಾವಣೆಗೆ ಅವಕಾಶವಿರಲಿಲ್ಲ. ಮೈಸೂರಿನ ಜನತೆ ಯಾರು ತಮ್ಮ ಅಚ್ಚುಮೆಚ್ಚಿನ ನಾಯಕರೆಂದು ಅಂದುಕೊಂಡಿತ್ತೋ ಆ ನಾಯಕರೇ ಸರ್ಕಾರವನ್ನು ಏರ್ಪಾಟುಮಾಡಿದ್ದಾರೆ. ಯಾವಾಗ ಚುನಾವಣೆ ಇರಲಿಲ್ಲವೋ ಆಗ ಜನರ ಮುಂದೆ ತಮ್ಮ ನೀತಿಯೇನು, ತಾವು ಸರ್ಕಾರವನ್ನು ರಚನೆ ಮಾಡಿದಾಗ ಯಾವರೀತಿ ಮಾಡುತ್ತೇವೆ, ಎಂದು ಹೇಳಲು ಈಗಿನ ಸರ್ಕಾರಕ್ಕೆ ಅವಕಾಶವಿರಲಿಲ್ಲ. ಈಗ ಹೊಸದಾಗಿ ಏರ್ಪಟ್ಟಿರುವ ಒಂದು ರಾಜ್ಯಾಂಗದಲ್ಲಿ ಸರ್ಕಾರದ ನೀತಿ ಏನೆಂಬುದನ್ನು ಶ್ರೀಮನ್ಮಹಾರಾಜರವರು ಸ್ಥೂಲವಾಗಿ ಮತ್ತು ಸ್ಪಷ್ಟವಾಗಿ ಜನರ ಮುಂದೆ ಇಡುವುದಕ್ಕೆ ಅವಕಾಶವಾಗಿದೆ. ಇದು ಈಗ ನಮ್ಮ ಮುಂದಿದೆ. ಜನತೆ ಸರ್ಕಾರದ ನೀತಿ ಅಥವಾ ತತ್ವ ಏನೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದುದು ಅಗತ್ಯ. ಹಾಗೆ ತಿಳಿದುಕೊಳ್ಳದಿದ್ದರೆ ದೇಶದಲ್ಲಿ ನಾನಾ ವಿಧವಾದ ಸಂದೇಹಗಳೂ ಅನುಮಾನಗಳೂ ಉತ್ಪನ್ನವಾಗಿ ತನ್ಮೂಲಕ ಜನರಲ್ಲಿ ಅಪಪ್ರಚಾರ ನಡೆಯಲು ಅವಕಾಶವಾಗುತ್ತದೆ. ಈಗ ದೇಶದ ಮುಂದೆ ಇರತಕ್ಕ ಈ ಸರ್ಕಾರದ ನೀತಿ ಅಥವಾ ತತ್ವ ಸ್ಪಷ್ಟವಾಗಿರುವುದರಿಂದ ಇನ್ನು ಮುಂದೆ ಯಾವ ವಿಧವಾದ ಅಪಪ್ರಚಾರಕ್ಕೂ ಅವಕಾಶವಿರುವುದಿಲ್ಲ. ಏನಾದರೂ ಜನಗಳ ಮುಂದಿರುವ ಸರ್ಕಾರದ ನೀತಿ ಸಾಕೇ, ಸ್ಪಷ್ಟವಾಗಿದೆಯೇ ಅಥವಾ ಇನ್ನೂ ಹೆಚ್ಚಾಗಿರಬೇಕಾಗಿತ್ತೇ, ಅಥವಾ ಜಾಸ್ತಿಯೇ ಎಂಬುದನ್ನು ಹೇಳಬಹುದೇ ವಿನಾ ನೀತಿಯ ವಿಷಯದಲ್ಲಿ ಯಾವ ಸಂಶಯ ಪಡುವುದಕ್ಕೂ ನಮ್ಮ ಮುಂದಿರುವ ಭಾಷಣದಿಂದ ಅವಕಾಶವಿಲ್ಲ. ಹೀಗೆ ಒಂದು ಹೊಸ ಸಂಪ್ರದಾಯವನ್ನು ಕಲ್ಪಿಸಿ

ಸರ್ಕಾರದ ಸ್ಪಷ್ಟವಾದ ನೀತಿ ಏನೆಂಬುದನ್ನು ದೇಶದ ಮುಂದೆ ಇಡುವುದಕ್ಕೆ ಅವಕಾಶವಾದುದಕ್ಕಾಗಿ ಸಂತೋಷಪಡಬೇಕಾಗಿದೆ. ಸರ್ಕಾರದ ನೀತಿಯನ್ನು ಇಷ್ಟು ಸ್ಪಷ್ಟವಾಗಿ ದೇಶದ ಮುಂದೆ ಇಟ್ಟಿದುದಕ್ಕಾಗಿ ಶ್ರೀಮನ್ಮಹಾರಾಜರವರಿಗೆ ಹೃತ್ಪೂರ್ವಕವಾದ ಕೃತಜ್ಞತೆಯನ್ನೂ ರಾಜಭಕ್ತಿಯುತವಾದ ಅಭಿನಂದನೆಗಳನ್ನೂ ಸೂಚಿಸುವುದು ಸೂಕ್ತವಾಗಿದೆ.

ಜನತೆ ಆಶಿಸುವುದೇನೆಂದರೆ, ಸರ್ವಸಾಧಾರಣ ಜನಗಳಿಗೆ ಅನ್ನ ಬಟ್ಟೆ ಮತ್ತು ವಸತಿ ಇವು ಇರಬೇಕು ಮತ್ತು ಆರ್ಥಿಕಸ್ಥಿತಿ ಅಭಿವೃದ್ಧಿ ಮಾರ್ಗದಲ್ಲಿರಬೇಕು. ಎಂಬುದು. ಒಂದು ಸಂಸ್ಕೃತಿ ಬೆಳೆಯಬೇಕು, ನೀತಿ ಹೆಚ್ಚಾಗಬೇಕು. ದೇಶದಲ್ಲಿ ಅಶಾಂತಿ ಇರಬಾರದು, ಶಾಂತಿ ಉತ್ಪನ್ನವಾಗಬೇಕು—ಈ ದೃಷ್ಟಿಯಿಂದ ಈ ಭಾಷಣವನ್ನು ವಿಮರ್ಶೆಮಾಡುವುದಾದರೆ ಎಲ್ಲ ವಿಧದಲ್ಲಿಯೂ ದೇಶ ಮುಂದುವರಿಯುವುದಕ್ಕೆ ಸಾಧಕವಾಗಿರುವ ಸರ್ಕಾರದ ನೀತಿಯು ಶ್ರೀಮನ್ಮಹಾರಾಜರಿಂದ ದೇಶದ ಮುಂದಿದೆಯೆಂದು ಜನರು ದೃಢವಾಗಿ ನಂಬಲು ಅವಕಾಶವಿದೆ. ಈ ಭಾಷಣದಿಂದ ಇಂತಹ ಒಂದು ಸ್ಪಷ್ಟವಾದ ನೀತಿಯನ್ನು ದೇಶದ ಮುಂದಿಡುವುದಕ್ಕೆ ಅವಕಾಶ ಕಲ್ಪಿಸಿದ ಒಂದು ಸಂಪ್ರದಾಯಕ್ಕಾಗಿ ನಾವು ಎಷ್ಟು ಸಂತೋಷಪಟ್ಟರೂ ಸಾಲದು. ಇಷ್ಟು ಸ್ಪಷ್ಟವಾದ ನೀತಿಯನ್ನು ನಮ್ಮ ಮುಂದಿಟ್ಟಂತಹ ಶ್ರೀಮನ್ಮಹಾರಾಜರವರಿಗೆ ಕೃತಜ್ಞತೆಯನ್ನು ಸೂಚಿಸುವ ಈ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ ಪುಷ್ಟೀಕರಿಸುತ್ತೇನೆ.

Mr. DEPUTY SPEAKER.—The House now stands adjourned till Twelve of the Clock tomorrow, 17th March 1950.

The Assembly adjourned at Five of the Clock to meet again at Twelve of the Clock the next day, Friday, 17th March 1950.

WD 1429—GBP—400—20-3-50